ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಅಕ್ಟೋಬರ್ 14 ಮಂಗಳವಾರ 2025

ಸಂಪುಟ: 46 | ಸಂಚಿಕೆ: 177 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಮತಗಳ್ಳತನ ಸಂಬಂಧ ಸಹಿ ಸಂಗ್ರಹದ ಮೂಲಕ ಮಂಚೇಗೌಡನಕೊಪ್ಪಲಲ್ಲಿ ಜಾಗೃತಿ ಅಭಿಯಾನ



ಸಾರ್ವಜನಿಕ ಸಹಿ ಸಂಗ್ರಹ ಜಾಗೃತಿ ಅಭಿಯಾನಕ್ಕೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

ಮೈಸೂರು, ಅ.13(ಎಂಕೆ)– ಮೈಸೂರಿನ ಮಂಚೇಗೌಡನಕೊಪ್ಪಲು ಅಭಿಷೇಕ್ ಸರ್ಕಲ್‌ನಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಮತಗಳ್ಳತನ ಕುರಿತು ಸಾರ್ವಜನಿಕ ಸಹಿ ಸಂಗ್ರಹ ಜಾಗೃತಿ ಅಭಿಯಾನ ನಡೆಸಲಾಯಿತು.

ಅಭಿಯಾನಕ್ಕೆ ಚಾಲನೆ ನೀಡಿದ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಕಾಂಗ್ರೆಸ್ ಕಾರ್ಯಕರ್ತರು, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಂಡು ಮತಗಳ್ಳತನ ನಡೆಸುತ್ತಿರುವ ಬಗ್ಗೆ ಸಾರ್ವಜನಿಕರಲ್ಲಿ ವ್ಯಾಪಕವಾಗಿ ಜಾಗೃತಿ ಮೂಡಿಸಬೇಕು ಎಂದು ಕರೆ ನೀಡಿದರು.

ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿರುವ ಮತಗಳ್ಳತನ ಜಾಗೃತಿ ಅಭಿಯಾನ ಯಶಸ್ವಿಯಾಗಬೇಕು. ಪ್ರತೀ ಮನೆ ಮನೆಗೂ ಭೇಟಿ ನೀಡಿ ಮತದಾನದ ಅರಿವು ಹಾಗೂ ಕೇಂದ್ರ ಬಿಜೆಪಿ ಸರ್ಕಾರ ಮಾಡುತ್ತಿರುವ ವಂಚನೆ ಬಗ್ಗೆ ತಿಳಿಹೇಳಬೇಕು ಎಂದು ಸೂಚಿಸಿದರು.

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಮಾತನಾಡಿ, ಕೆಪಿಸಿಸಿ ನಿರ್ದೇಶನದ ಮೇರೆಗೆ ಮತಗಳ್ಳತನ ಜಾಗೃತಿ ಅಭಿಯಾನ ನಡೆಸಲಾಗುತ್ತಿದ್ದು, ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು ತಮ್ಮ ತಮ್ಮ ಮತವನ್ನು ಕಾಪಾಡಿಕೊಳ್ಳುವ ಬಗ್ಗೆ ಅರಿವು ಮೂಡಿಸಬೇಕು. ಬೂತ್ ಮಟ್ಟದಲ್ಲಿ ತಂಡಗಳನ್ನು ರಚನೆ ಮಾಡಬೇಕು. ಪ್ರಧಾನಿ ನರೇಂದ್ರ ಮೋದಿ ಅವರ ಕ್ಷೇತ್ರ ವಾರಣಾಸಿಯಲ್ಲೇ ಮತಗಳ್ಳತನವಾಗಿದೆ. ಹಾಗಾಗಿ ಎಚ್ಚರ ವಹಿಸಬೇಕು ಎಂದರು.

ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ನೇತೃತ್ವದಲ್ಲಿ 500ಕ್ಕೂ ಹೆಚ್ಚು ಮಂದಿ ಸಹಿ ಸಂಗ್ರಹ ಜಾಗೃತಿ ಅಭಿಯಾನದಲ್ಲಿ ಭಾಗವಹಿಸಿದ್ದರು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ನಗರಪಾಲಿಕೆ ಮಾಜಿ ಸದಸ್ಯರಾದ ಶಿವಮಾಧು, ರಮೇಶ್, ಬಾಲು, ಮಹಿಳಾ ಮುಖಂಡರಾದ ರತ್ನಮ್ಮ, ಕೆಪಿಸಿಸಿ ಸದಸ್ಯರಾದ ಆನಂದ್ ಕುಮಾರ್, ಹಿಂದುಳಿದ ವರ್ಗಗಳ ವಿಭಾಗದ ನಗರಾಧ್ಯಕ್ಷ ಎನ್.ಆರ್.ನಾಗೇಶ್, ಎಸ್ಸಿ ಘಟಕ ನಗರಾಧ್ಯಕ್ಷ ರಮೇಶ್, ಇಂದಿರಾಗಾಂಧಿ ಬ್ಲಾಕ್ ಮಹಿಳಾಧ್ಯಕ್ಷೆ ಸುಶೀಲ ಮರೀಗೌಡ, ವಾರ್ಡ್ ಅಧ್ಯಕ್ಷರಾದ ಜಗದೀಶ್, ಶ್ರೀಧರ್, ಸುರೇಶ್, ಮಹೇಶ್, ಕುಮಾರ್, ದಿನೇಶ್, ವಾರ್ಡ್ ಮಹಿಳಾಧ್ಯಕ್ಷೆ ಗೀತಾ, ಕಮಲಮ್ಮ, ಶೋಭಾ, ಶುಭ, ಸೌಭಾಗ್ಯ, ಸುಮ, ಮಾಯಮ್ಮ, ಯೂತ್ ಕಾಂಗ್ರೆಸ್‌ನ ನಿಶಾಂತ್ ಪಟೇಲ್, ಪವನ್ ಮತ್ತಿತರರಿದ್ದರು.

ರಫ್ತು ವ್ಯವಹಾರದಲ್ಲಿ ಕರ್ನಾಟಕ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ

ಆಮದು ಕಡಿಮೆ ಮಾಡಿ; ರಫ್ತು ಪ್ರಮಾಣ ಹೆಚ್ಚಳಕ್ಕೆ ಉದ್ದಿಮೆದಾರರಿಗೆ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಜಂಟಿ ನಿರ್ದೇಶಕ ಸಿ.ಎಸ್.ಬಾಬು ನಾಗೇಶ್ ಕರೆ



'ರಫ್ತು ನಿರ್ವಹಣಾ ತರಬೇತಿ' ಕಾರ್ಯಕ್ರಮಕ್ಕೆ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಜಂಟಿ ನಿರ್ದೇಶಕ ಸಿ.ಎಸ್.ಬಾಬು ನಾಗೇಶ್ ಚಾಲನೆ ನೀಡಿದರು.

ಮೈಸೂರು, ಅ.13(ಎಂಕೆ)– ಬೇರೆ ದೇಶದಿಂದ ಸರಕುಗಳನ್ನು ಆಮದು ಮಾಡಿಕೊಳ್ಳುವುದನ್ನು ಕಡಿಮೆ ಮಾಡಿ ನಮ್ಮಲ್ಲಿಯೇ ಉತ್ಪಾದನೆ ಹೆಚ್ಚಿಸಿ, ರಫ್ತು ಮಾಡುವ ಮೂಲಕ ದೇಶದ ಮತ್ತು ರಾಜ್ಯದ ಅಭಿವೃದ್ಧಿಗೆ ರಫ್ತುದಾರರು ಕೈಜೋಡಿಸುವಂತೆ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಜಂಟಿ ನಿರ್ದೇಶಕ ಸಿ.ಎಸ್.ಬಾಬು ನಾಗೇಶ್ ಕರೆ ನೀಡಿದರು.

ಮೈಸೂರಿನ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಕರ್ನಾಟಕ ಸರ್ಕಾರದ ರಫ್ತು ಉತ್ತೇಜನ ಸಂಸ್ಥೆಯಾದ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ(ವಿಟಿಪಿಸಿ) ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರದ ವತಿಯಿಂದ ಆಯೋಜಿಸಿರುವ 6 ದಿನಗಳ 'ರಫ್ತು ನಿರ್ವಹಣಾ ತರಬೇತಿ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅಭಿವೃದ್ಧಿ ದೃಷ್ಟಿಯಿಂದ ದೇಶದಲ್ಲಿ ಉತ್ಪಾದನೆಯಾದ ಸರಕುಗಳನ್ನು ಬೇರೆ ದೇಶಕ್ಕೆ ರಫ್ತು ಮಾಡುವುದು ಮುಖ್ಯವಾಗಿದೆ ಎಂದರು.

ರಫ್ತುದಾರರು ಮೊದಲು ಮಾರುಕಟ್ಟೆಯ ಬಗ್ಗೆ ಅಧ್ಯಯನ ಮಾಡುವ ಮೂಲಕ ವ್ಯಾಪಾರ–ವಹಿವಾಟಿನ ಬಗ್ಗೆ ತಿಳಿದುಕೊಳ್ಳಬೇಕು. ಸ್ಥಳೀಯ ಮಾರುಕಟ್ಟೆಯಲ್ಲಿ ಯಾವುದಕ್ಕೆಲ್ಲಾ ಬೇಡಿಕೆ ಇದೆ ಎಂಬುದನ್ನು ತಿಳಿದುಕೊಂಡು ಸರಕುಗಳನ್ನು ಉತ್ಪಾದನೆ ಮಾಡುವುದು ಉತ್ತಮ ಎಂದು ಸಲಹೆ ನೀಡಿದರು.

ಭಾರತದ ರಫ್ತಿನ ಪ್ರಮಾಣದಲ್ಲಿ ಕರ್ನಾಟಕದ ಕೊಡುಗೆ ಶೇ.41ರಷ್ಟಿದ್ದು, ಸರಕುಗಳನ್ನು ರಫ್ತು ಮಾಡುವಲ್ಲಿ ಮೊದಲನೇ ಸ್ಥಾನವನ್ನು ಪಡೆದುಕೊಂಡಿದೆ ಹಾಗೂ ಸರಕು ಆಮದು ಮಾಡಿಕೊಳ್ಳುವಲ್ಲಿ ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿದೆ. ರಫ್ತಿನಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದ್ದರೆ, ಮಹಾರಾಷ್ಟ್ರ ಎರಡನೇ ಸ್ಥಾನ, ತಮಿಳುನಾಡು ಮೂರನೇ ಸ್ಥಾನ, ಗುಜರಾತ್ ನಾಲ್ಕನೇ ಸ್ಥಾನ ಪಡೆದಿದೆ. ಅದೇ ರೀತಿ ಸರಕುಗಳನ್ನು ಆಮದು ಮಾಡಿಕೊಳ್ಳುವಲ್ಲಿ ಗುಜರಾತ್ ಮೊದಲನೇ ಸ್ಥಾನ, ಮಹಾರಾಷ್ಟ್ರ ಎರಡನೇ ಸ್ಥಾನ, ತಮಿಳುನಾಡು ಮೂರನೇ ಸ್ಥಾನ ಹಾಗೂ ಕರ್ನಾಟಕ ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿದೆ ಎಂದು ವಿವರಿಸಿದರು.

ರಾಜ್ಯದಲ್ಲಿ ರಫ್ತು ಉದ್ಯಮವನ್ನು ಹೆಚ್ಚಿಸುವ ನಿಟ್ಟಿನಲ್ಲಿ ರಫ್ತುದಾರರಿಗೆ ತರಬೇತಿ, ಪ್ರೋತ್ಸಾಹಿಸುವುದು ವಿಟಿಪಿಸಿ ಸಂಸ್ಥೆ ಉದ್ದೇಶವಾಗಿದ್ದು, ಕರ್ನಾಟಕದಲ್ಲಿ ಬಿಟ್ಟರೆ ಬೇರೆ ಯಾವ ರಾಜ್ಯದಲ್ಲಿಯೂ ರಫ್ತು ತರಬೇತಿ ಸಂಸ್ಥೆ ಇಲ್ಲ. ಆದ್ದರಿಂದ ಶಿಬಿರಾರ್ಥಿಗಳು 6 ದಿನಗಳ ರಫ್ತು ತರಬೇತಿ ಕಾರ್ಯಕ್ರಮದ ಸದುಪಯೋಗಪಡೆದುಕೊಳ್ಳಿ. ರಫ್ತು ಹೆಚ್ಚು ಮಾಡುವುದಕ್ಕೆ ಏನು ಬೆಂಬಲಬೇಕು ಅದನ್ನು ನಾವು ಕೊಡುತ್ತೇವೆ ಎಂದು ಪ್ರೋತ್ಸಾಹಿಸಿದರು.

ಮೈಸೂರು ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಮಾತನಾಡಿ, ರಫ್ತು ಉದ್ಯಮ ಸವಾಲಿನ ಕ್ಷೇತ್ರವಾಗಿದೆ. ಸ್ವದೇಶಿ ಉತ್ಪನ್ನಗಳನ್ನು ತಯಾರಿಸಿ ರಫ್ತು ಮಾಡಬೇಕು. ಬೇರೆ ಬೇರೆ ದೇಶಗಳಿಂದ ಸರಕುಗಳನ್ನು ಆಮದು ಮಾಡಿಕೊಳ್ಳುವುದನ್ನು ಕಡಿಮೆ ಮಾಡಬೇಕು ಎಂದು ಹೇಳಿದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಕಾರ್ಯದರ್ಶಿ ಶಿವಾಜಿ ರಾವ್, ವಿಟಿಪಿಸಿ ಸಂಯೋಜಕ ಅರವಿಂದ ಭಟ್, ವಿಟಿಪಿಸಿ ರಫ್ತು ಸೌಲಭ್ಯ ಕೇಂದ್ರದ ಉಪ ನಿರ್ದೇಶಕಿ ಎಲ್.ಮೇಘಲಾ ಉಪಸ್ಥಿತರಿದ್ದರು.

ದಸರಾ ಪುಸ್ತಕ ಮೇಳದಲ್ಲಿ 95.18 ಲಕ್ಷ ರೂ. ವಹಿವಾಟು



ಡಾ.ಮಾನಸ

ಮೈಸೂರು,ಅ.13(ಜಿಎ)–ಮೈಸೂರು ದಸರಾ ಪುಸ್ತಕ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಬರೋಬ್ಬರಿ 95.18 ಲಕ್ಷ ರೂ. ವಹಿವಾಟು ನಡೆದಿದೆ. ಪ್ರಕಾಶಕರು, ಮಾರಾಟಗಾರರು ಮೇಳದಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಸಂತಸ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ್ ಸ್ಕೌಟ್ ಅಂಡ್ ಗೈಡ್ಸ್ ಮೈದಾನದಲ್ಲಿ ಆಯೋಜಿಸಿದ್ದ ಪುಸ್ತಕ ಮೇಳದಲ್ಲಿ ಪ್ರಕಾಶಕರು, ಅಕಾಡೆಮಿಗಳು, ಪ್ರಾಧಿಕಾರಗಳು, ವಿಶ್ವವಿದ್ಯಾನಿಲಯಗಳು ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಸೇರಿದಂತೆ 94 ಮಳಿಗೆಗಳಲ್ಲಿ 96 ಸಾವಿರ ಪುಸ್ತಕಗಳು ಮಾರಾಟವಾಗಿದ್ದು, 95.18ಲಕ್ಷ ರೂ. ವಹಿವಾಟು ನಡೆದಿದೆ. ಕನ್ನಡ ಪುಸ್ತಕ ಪ್ರಾಧಿಕಾರ ಮೇಳದಲ್ಲಿ 82 ಸಾವಿರ ರೂ. ಮೊತ್ತದ ಪುಸ್ತಕ ಮಾರಾಟ ಮಾಡಿದೆ ಎಂದು ತಿಳಿಸಿದರು.

ಮೇಳಕ್ಕೆ ಭೇಟಿ ನೀಡಿದ ಪುಸ್ತಕ ಪ್ರೇಮಿಗಳು ಹಾಗೂ ಮಾರಾಟಗಾರರು ಸಂತಸದಿಂದಲೇ ವಾಪಸ್ಸಾದರು. ಹೀಗಾಗಿ ಮುಂದಿನ ದಿನಗಳಲ್ಲಿ ಪುಸ್ತಕ ಮೇಳವನ್ನು ದಸರಾಗೆ ಸೀಮಿತಗೊಳಿಸದೆ, ಮೈಸೂರು ಹಾಗೂ ರಾಜ್ಯದ ಇನ್ನಿತರೆಡೆ ಪುಸ್ತಕ ಮೇಳವನ್ನು ಪ್ರಾಧಿಕಾರದ ವತಿಯಿಂದ ಆಯೋಜಿಸಲು ಚಿಂತನೆ ನಡೆದಿದೆ ಎಂದರು.

ಪುಸ್ತಕ ಮೇಳದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಮುದ್ರಣವಾದ ಬಿ.ಶಿವಾನುದ ಅವರು ರಚಿಸಿರುವ 'ಬೂಕರ್ ಬಾನು' ಶೀರ್ಷಿಕೆಯ ಬಾನು ಮುಷ್ತಾಕ್ ಬದುಕು–ಬರಹ ಕೃತಿ ಕೂಡಾ ಬಿಡುಗಡೆಗೊಂಡಿತು. ಸಾಹಿತಿ, ಕಲಾವಿದರೊಂದಿಗಿನ ಸೆಲ್ಫಿ ಜನಮನ್ನಣೆ ಗಳಿಸಿತು. ಮೇಳದಲ್ಲಿ ಇದೇ ಮೊದಲ ಬಾರಿಗೆ ಪುಸ್ತಕ ರಥ ಎಂಬ ಪರಿಕಲ್ಪನೆಯೊಡನೆ ದಸರಾ ನೋಡಲು ಬಂದವರಿಗೆ ಕನ್ನಡ ಪುಸ್ತಕಗಳ ಬಗ್ಗೆ ಪರಿಚಯ ಮಾಡಿಕೊಟ್ಟು, ಆಸಕ್ತಿ ಬೆಳೆಸಲಾಯಿತು. ಹೀಗಾಗಿ ಪುಸ್ತಕ ಮೇಳ ಯಶಸ್ವಿಯಾಯಿತು ಎಂದರು.

ದಸರಾ ಪುಸ್ತಕ ಮೇಳ ಸಮಿತಿಯಲ್ಲಿದ್ದು ಯಶಸ್ಸಿಗೆ ಶ್ರಮಿಸಿದ ಎಂ.ಚಂದ್ರ ಶೇಖರ್, ರಾಜಶೇಖರ ಕದಂಬ, ಯೋಗೀಶ್ ಉಪ್ಪಾರ್, ತ್ರಿವೇಣಿ, ಮಹೇಶ್, ಡಾ.ಸಿ.ಪಿ. ಪರಶುರಾಮ್, ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕಿರಣ್‌ಸಿಂಗ್ ಪ್ರಮಾಣ ಪತ್ರ ವಿತರಿಸಿದರು.

ಅಪ್ರಾಪ್ತೆ ಅತ್ಯಾಚಾರ, ಹತ್ಯೆಗೆ ಖಂಡನೆ

ಮೈಸೂರು: ಕಲಬುರಗಿ ಮೂಲದ ಬಡ ಕುಟುಂಬವೊಂದು ಹೊಟ್ಟೆಪಾಡಿಗಾಗಿ ಬಲೂನು ಮಾರಲು ಬಂದು, ತನ್ನ ತಂದೆ–ತಾಯಿಯೊಂದಿಗೆ ಬಯಲಲ್ಲಿ ಆಶ್ರಯ ಪಡೆದಿದ್ದಾಗ ಬಾಲಕಿ ಹೊತ್ತೊಯ್ದು ಅತ್ಯಾಚಾರ ನಡೆಸಿ, ಕೊಂದು ಹಾಕಿರುವುದು ಭಯಾನಕ ಘಟನೆ. ಅತ್ಯಾಚಾರ ಮಾಡುವವರು, ಕೊಲೆಗಡುಕರಿಗೆ ಯಾವುದೇ ಕಾನೂನಿನ ಭಯ ಇಲ್ಲದಂತಾಗಿದೆ. ಈ ಕಾಮುಕನ ಬಂಧಿಸಿದರೆ ಸಾಲದು, ಪೋಕ್ಸೋ ಕಾಯ್ದೆಯಡಿ ಕಠಿಣ ಶಿಕ್ಷೆ ಕೊಟ್ಟು ಆ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡಬೇಕೆಂದು ಎಂದು ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷೆ ಹೇಮಾ ನಂದೀಶ್ ಆಗ್ರಹಿಸಿದ್ದಾರೆ.

ದೇವೇಗೌಡರ ಆರೋಗ್ಯ ಸುಧಾರಣೆಗಾಗಿ ವಿಶೇಷ ಪೂಜೆ



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಶೀಘ್ರ ಗುಣಮುಖರಾಗಲೆಂದು ಮೈಸೂರಿನ ಪಡುವಾರಹಳ್ಳಿ ಶ್ರೀ ಮಹದೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಿಜೆಪಿ ನಗರಾಧ್ಯಕ್ಷರಾದ ಮಾಜಿ ಶಾಸಕ ಎಲ್.ನಾಗೇಂದ್ರ, ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ನಗರ ಪಾಲಿಕೆ ಮಾಜಿ ಸದಸ್ಯರಾದ ಎಂ.ಯು.ಸುಬ್ಬಯ್ಯ, ಶಿವಣ್ಣ, ಪ್ರೇಮಾ ಶಂಕರೇಗೌಡ, ರವೀಂದ್ರ ಮುಖಂಡರಾದ ದಿನೇಶ್, ಸೋಮಶೇಖರ್ ರಾಜು, ಚಿಕ್ಕವೆಂಕಟು, ಭೈರಪ್ಪ ಶ್ರೀರಾಮ, ಪುನೀತ್, ರಮೇಶ್, ರಾಮೇಗೌಡ, ಆಟೋ ಮಂಜು, ಸಿ.ಡಿ.ಕುಮಾರ್, ಮಧು, ಯೋಗ ನರಸಿಂಹೇಗೌಡ, ಸುಧಾ, ಛಾಯಾ, ಲಕ್ಷ್ಮಿ, ಬಸವರಾಜು, ನಾಗೇಶ್, ಜಯಣ್ಣ, ಅಶೋಕ್, ಹರೀಶ್, ಕಿರಣ್, ಅರ್ಜುನ್, ಶ್ರೀನಿವಾಸ್, ವೆಂಕಟೇಶ್ ಸೇರಿದಂತೆ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ನೌಕಾಪಡೆಯ ಹಿರಿಯ ಮುತ್ಸದ್ದಿ ಸುರೇಶ್ ನಿಧನ



ಮೈಸೂರು,ಅ.13–ನೌಕಾಪಡೆಯ ಹಿರಿಯ ಮುತ್ಸದ್ಧಿ, 1974ರ ಬ್ಯಾಚ್‌ನ ಮಾಜಿ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್ ಮತ್ತು ಮೈಸೂರಿನ ದಿವಾನ್ಸ್ ರಸ್ತೆ, ಸದ್ವಿದ್ಯಾ ಶಾಲೆ ಸಮೀಪವಿರುವ ಪ್ರೀಮಿಯರ್ ರೆಸಿಡೆನ್ಸಿ ನಿವಾಸಿ ಸುರೇಶ್ (77) ಸೋಮವಾರ ಜಯದೇವ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಇವರು 1971ರ ಇಂಡೋ–ಪಾಕ್ ಯುದ್ಧದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಮೃತರು ಪತ್ನಿ, ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಅ.14) ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಶ್ರೀಮತಿ ಚೆನ್ನಮ್ಮ

ಮೈಸೂರು, ಅ.13–ಮೈಸೂರು ವಕೀಲರ ಗೃಹ ನಿರ್ಮಾಣದ ಸಹಕಾರ ಸಂಘದ ಅಧ್ಯಕ್ಷ ಜೆ.ಲೋಕೇಶ್‌ಗೌಡ ಅವರ ತಾಯಿ ಶ್ರೀಮತಿ ಚೆನ್ನಮ್ಮ(74) ಅವರು ಭಾನುವಾರ(ಅ.12) ನಿಧನರಾದರು. ಮೃತರು ಪತಿ ಜವರೇಗೌಡ, ಐವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗದವರು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಇಂದು (ಸೋಮವಾರ) ಕಣಿಯನ ಹುಂಡಿ ಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. 'ಲಾ ಗೈಡ್' ಕನ್ನಡ ಕಾನೂನು ಪತ್ರಿಕೆಯ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಸಂತಾಪ ವ್ಯಕ್ತಪಡಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.10.2025 ಮಂಗಳವಾರ, ಮಳೆ ನಕ್ಷತ್ರ: ಚಿತ್ತ 11.10.2025 ರಿಂದ 23.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಮೂಲವ್ಯಾದಿ/ಪೈಲ್ಸ್, ಮಧುಮೇಹ ತೊಂದರೆ, ಲಕ್ವ/ಪ್ಯಾರಾಲಿಸಿಸ್‌ಗೆ ಚಿಕಿತ್ಸಾ ಶಿಬಿರ, ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ಗ್ರೀಟ್ ಡಾಟ್ ಟ್ರಸ್ಟ್, ಸೇಂಟ್ ಫಿಲೋಮಿನಾ ಕಾಲೇಜು:** ಮೆಂಟಲ್ ಹೆಲ್ತ್ ಇನ್ ಕ್ಯಾಟಸ್ಟ್ರೋಪ್ಸ್ ಅಂಡ್ ಎಮರ್ಜೆನ್ಸಿಸ್ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಹೆಚ್.ಅಮರನಾಥ್, ಮುಖ್ಯ ಅತಿಥಿಗಳು :ನ್ಯಾಯಾಧೀಶ ಸಿ.ಎನ್. ಚಂದನ್, ಮೈಸೂರು ಮೆಡಿಕಲ್ ಕಾಲೇಜು ಡೀನ್ ಡಾ. ಕೆ.ಆರ್.ದಾಕ್ಷಾಯಿಣಿ, ಕಾಲೇಜು ಪ್ರಿನ್ಸಿಪಾಲ್ ಡಾ.ರವಿ ಜೆ.ಡಿ. ಸಾಲ್ಡಾನಾ, ಪ್ರೊ.ಆರ್.ಶಿವಪ್ಪ, ಅಧ್ಯಕ್ಷತೆ: ರೆ. ಡಾ.ಲೂರ್ದ್ ಪ್ರಸಾದ್ ಜೋಸೆಫ್, ಸ್ಥಳ: ಸೆಂಟ್ ಫಿಲೋಮಿನಾ ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಮಕ್ಕಳಲ್ಲಿ ಕಂಡು ಬರುವ ಸೆರೆಬ್ರಲ್ ಪಾಲ್ಸಿ (ಮಾಂಸ ಖಂಡಗಳ ದೌರ್ಬಲ್ಯ, ನಿಲ್ಲಲು ಹಾಗೂ ನಡೆದಾಡಲು ಸಾಧ್ಯವಾಗದಿರುವುದು, ಕುಂಠಿತ ಬೆಳವಣಿಗೆ), ವಯಸ್ಕರಲ್ಲಿ ಕಂಡು ಬರುವ ಸಂಧಿ ನೋವು, ಮಂಡಿ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ:** 69ನೇ ಧಮ್ಮದೀಕ್ಷಾ ದಿನಾಚರಣೆ ಅಂಗವಾಗಿ ಭಾರತೀಯ ಪರಂಪರೆಯಲ್ಲಿ ಬೌದ್ಧ ತಾತ್ವಿಕತೆ ಕುರಿತು ವಿಶೇಷ ಉಪನ್ಯಾಸ, ಉದ್ಘಾಟನೆ: ಮಹಾಬೋಧಿ ಸಂಸ್ಥೆಯ ಭಿಕ್ಕು ಜಿನರಕ್ಕಿತ, ಸಂಸ್ಕೃತಿ ಚಿಂತಕ ಡಾ.ಎಸ್.ನಟರಾಜ್ ಬೂದಾಳ್ ಅವರಿಂದ ಉಪನ್ಯಾಸ, ಸ್ಥಳ: ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ವನ್ಯಜೀವಿ ಸಂರಕ್ಷಣೆ: ಮಾನವ ವನ್ಯಜೀವಿ ಸಂಘರ್ಷ ಮತ್ತು ವನ್ಯಜೀವಿ ಅಪರಾಧ ಕುರಿತು ಕಾರ್ಯಾಗಾರ, ಉದ್ಘಾಟನೆ : ವೈಲ್ಡ್‌ಲೈಫ್ ಕನ್ಸರ್‌ವೇಷನ್ ಫೌಂಡೇಷನ್ ಮ್ಯಾನೇಜಿಂಗ್ ಟ್ರಸ್ಟಿ ರಾಜ್‌ಕುಮಾರ್ ದೇವರಾಜೇ ಅರಸ್, ಅಧ್ಯಕ್ಷತೆ : ಫೌಂಡೇಷನ್‌ನ ಎ.ಎಸ್. ಪ್ರದೀಪ್, ಉಪಸ್ಥಿತರು : ಕಾಲೇಜು ಚೀಫ್ ಎಕ್ಸಿಕ್ಯೂಟಿವ್ ಪ್ರೊ. ಕೆ.ಎಸ್. ಸುರೇಶ್, ಪ್ರಿನ್ಸಿಪಾಲ್ ಡಾ. ಎನ್. ವಾಣಿಶ್ರೀ, ಶ್ರೀಮತಿ ಎಂ. ತೇಜಸ್ವಿನಿ, ಸ್ಥಳ: ಸಿಲ್ವರ್ ಜ್ಯೂಬಿಲಿ ಹಾಲ್, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು, ಕನ್ನಡ ಸಾಹಿತ್ಯ ಕಲಾಕೂಟ :** ಡಿವಿಜಿ ಅವರ ಮಂಕುತಿಮ್ಮನ ಕಗ್ಗದಲ್ಲಿ ಜೀವನ ಮೌಲ್ಯಗಳು–ಉಪನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ವಿದ್ವಾನ್ ಜಿ.ಎಸ್. ನಟೇಶ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಮುಖ್ಯ ಅತಿಥಿಗಳು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಪ್ರಿನ್ಸಿಪಾಲ್ ಡಾ. ಎಂ. ಶಾರದಾ, ಡಾ. ಜಿ. ಪ್ರಸಾದಮೂರ್ತಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸಮಠ, ಬೆಳಗ್ಗೆ 11ಕ್ಕೆ.

■ **ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಎಸ್‌ಸಿ/ಎಸ್‌ಟಿ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್:** ಡಾ.ಬಿ.ಆರ್.ಅಂಬೇಡ್ಕರ್‌ರವರ 134ನೇ ಜಯಂತ್ಯೋತ್ಸವ, ಉದ್ಘಾಟನೆ: ನಿವೃತ್ತ ಲೋಕಾಯುಕ್ತ ಡಾ.ಎನ್.ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ, ಮುಖ್ಯ ಅತಿಥಿಗಳು : ಜವಳಿ ಅಭಿವೃದ್ಧಿ ಆಯುಕ್ತೆ ಕೆ.ಜ್ಯೋತಿ, ಎಡಿಸಿ ಡಾ.ಪಿ. ಶಿವರಾಜು, ಸಂಘದ ಅಧ್ಯಕ್ಷ ಶಿವಸ್ವಾಮಿ, ಸ್ಥಳ: ಐಎಫ್‌ಟಿಟಿಸಿ ಸಭಾಂಗಣ, ಸಿಎಫ್‌ಟಿಆರ್‌ಐ, ಮಧ್ಯಾಹ್ನ 2.30ಕ್ಕೆ.

■ **ಸಾಧನ ಮಂದಿರ:** ಸರಸ್ವತಿ ಪೂಜಾ, ಸಂಜೆ 4.45ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ; ರಾತ್ರಿ 6ರಿಂದ ಶ್ರೀ ಕೃಷ್ಣಮಂದಿರ, ಗೋಕುಲಂ 3ನೇ ಹಂತ; ರಾತ್ರಿ 7ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.

■ **ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ :** 2025–26ನೇ ಸಾಲಿನ ಶೈಕ್ಷಣಿಕ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಹಕಾರ ವಿಷಯ ಕುರಿತು ಚರ್ಚಾ ಸ್ಪರ್ಧೆ, ಉದ್ಘಾಟನೆ: ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎಸ್. ಮಹೇಂದ್ರ ಕುಮಾರ್, ಅಧ್ಯಕ್ಷತೆ: ಮೈಸೂರು ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ. ಎನ್. ನಾಗರಾಜ್, ಮುಖ್ಯ ಅತಿಥಿಗಳು : ಕರ್ನಾಟಕ ಇನ್ಸ್‌ಟಿಟ್ಯೂಟ್ ಆಫ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ಪ್ರಿನ್ಸಿಪಾಲ್ ಪುಟ್ಟಸ್ವಾಮಿ, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಭಿಕ್ಕು ಸಂಘ, ರಾಜ್ಯ ಬೌದ್ಧ ಸಂಘ–ಸಂಸ್ಥೆಗಳು, ರಾಜ್ಯ ಅಂಬೇಡ್ಕರ್‌ವಾದಿ ಸಂಘಟನೆಗಳು ಮತ್ತು ವಿಶ್ವಮೈತ್ರಿ ಬುದ್ಧ ವಿಹಾರ:** ಬೌದ್ಧ ಮಹಾ ಸಮ್ಮೇಳನ, ಮಾನವ ಮೈತ್ರಿಯ ಪಯಣ... ಅಂತರರಾಷ್ಟ್ರೀಯ ಬೌದ್ಧ ಸಾಂಸ್ಕೃತಿಕ ಸಂಗಮ, ಬೆಳಗ್ಗೆ 8 ರಿಂದ ಬುದ್ಧನೆಡೆಗೆ... ಒಂದು ಸಾರ್ಥಕ ನಡಿಗೆ..., ಉಪಸ್ಥಿತರು: ಜೇತವನ ಬುದ್ಧವಿಹಾರ, ಕೊಳ್ಳೇಗಾಲದ ಪೂಜ್ಯ ಭಂತೆ ಮನೋರಕ್ಖಿತ, ವಿಶ್ವಮೈತ್ರಿ ಬುದ್ಧವಿಹಾರ, ಮೈಸೂರಿನ ಪೂಜ್ಯ ಭಂತೆ ಕಲ್ಯಾಣಸಿರಿ, ನಳಂದ ಬುದ್ಧವಿಹಾರ, ಟಿ. ನರಸೀಪುರದ ಪೂಜ್ಯ ಭಂತೆ ಬೋಧಿರತ್ನ, ಕೊಳತೂರು ಬುದ್ಧವಿಹಾರ, ಟಿ. ನರಸೀಪುರದ ಪೂಜ್ಯ ಭಂತೆ ಸುಗತಪಾಲ, ಸಾರನಾಥ ಬುದ್ಧವಿಹಾರ, ಅಂತರಸಂತೆ ಪೂಜ್ಯ ಭಂತೆ ಮಾತೆ ಗೌತಮಿ, ಬೌದ್ಧ ಭಿಕ್ಕು ಸಂಘ, ಧಮ್ಮಚಾರಿಗಳು ಹಾಗೂ ಉಪಾಸಕರು; ಧಮ್ಮ ಪಯಣ : ಪುರಭವನದ ಅಂಬೇಡ್ಕರ್ ಪುತ್ಥಳಿಯಿಂದ ಮಹಾರಾಜ ಕಾಲೇಜು ಮೈದಾನದವರೆಗೆ; ಬೆಳಗ್ಗೆ 10.35 ರಿಂದ ಮ. 1 ರವರೆಗೆ ನಳಂದ ವೇದಿಕೆ : ಬುದ್ಧಂ ನಮಾಮಿ, ಸಾನ್ನಿಧ್ಯ: ಬುದ್ಧ ವಿಹಾರ, ಲಾವೋಸ್‌ನ ಪೂಜ್ಯ ರಾಂಡಿಸೋಟ್, ಉದ್ಘಾಟನೆ: ಸಾಸನ ವಿಪುಲಾಮ ಬುದ್ಧ ತರಬೇತಿ ಕೇಂದ್ರ, ಮಾಯನ್ಮಾರ್ ಪೂಜ್ಯ ಪನಿಂದ ಸಯಡೋ, ಧಮ್ಮ ಧ್ವಜಾರೋಹಣ : ಗೋಕ್ ಹೋನ್ ಬುದ್ಧ ವಿಹಾರ, ವಿಯೆಟ್ನಾಂನ ಪೂಜ್ಯ ತಿಚ್ ಮಿನ್ ಹಾನ್, ತ್ರಿಪಿಟಕ ಅನಾವರಣ: ಧರ್ಮಗುರು ನಳಂದ ವಿಶ್ವವಿದ್ಯಾನಿಲಯ, ಬೈಲುಕುಪ್ಪೆ ಪೂಜ್ಯ ಕರ್ಮ ರಾನ್ರಿಯನ್ ಪುಂಚೆ, ಬುದ್ಧ ಮತ್ತು ಆತನ ಧಮ್ಮದ ಪ್ರತಿಕೃತಿ ಅನಾವರಣ: ಜೇತವನ ಬುದ್ಧ ವಿಹಾರ, ಕೊಳ್ಳೇಗಾಲ ಪೂಜ್ಯ ಭಂತೇ ಮನೋರಕ್ಖಿತ, ಬುದ್ಧ ವಿಹಾರ ಅಸ್ಸಾಂನ ಪೂಜ್ಯ ಭಿಕ್ಕು ಸೊಬಾನ ಭಂತೆ, ಬುದ್ಧ ವಿಹಾರ, ತ್ರಿಪುರ ಪೂಜ್ಯ ಭಿಕ್ಕು ಪನ್ಯಾಬೋಧಿ ಭಂತೆ, ಬುದ್ಧ ವಿಹಾರ, ಅರುಣಾಚಲ ಪ್ರದೇಶದ ಪೂಜ್ಯ ಭಂತೆ ವಿಸುದ್ಧಶೀಲ. ನಾಲ್ಕು ವೇದಿಕೆಗಳಲ್ಲಿ ನಡೆಯುವ ಗೋಷ್ಠಿಗಳಲ್ಲಿ ಖ್ಯಾತ ಸಾಹಿತಿಗಳು ಮತ್ತು ಹೋರಾಟಗಾರರಾದ ಕಾಂಚಾ ಈಳಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಪ್ರೊ.ರಹಮತ್ ತರೀಕೆರೆ, ಬಂಜಗೆರೆ ಜಯಪ್ರಕಾಶ್, ಪ್ರೊ.ಅಪ್ಪಗೆರೆ ಸೋಮಶೇಖರ್, ಕೆ.ದೀಪಕ್, ನಾಗಸಿದ್ಧಾರ್ಥ ಹೊಲೆಯಾರ್, ಹೆಚ್.ಎಸ್.ಅನುಪಮಾ, ಅಶೋಕ್, ಪ್ರೊ.ಸೋಸಲೆ ಚಿನ್ನಸ್ವಾಮಿ, ಮಲ್ಲಿಕಾರ್ಜುನ ಕನಕಪುರ, ಸೋಸಲೆ ಗಂಗಾಧರ್, ಅಮೃತ ಅತ್ರಾಡಿ, ವಡ್ಡಗೆರೆ ನಾಗರಾಜಯ್ಯ, ಡಾ.ವಿಠ್ಠಲ್ ವಗ್ಗನ್, ಪ್ರೊ.ಸೋಮಶೇಖರ್, ಡಾ.ಎಚ್.ಟಿ.ಪೋತೆ, ಪ್ರಕಾಶ್‌ರಾಜ್, ತಲಕಾಡು ರಂಗೇಗೌಡ, ಹರ್ಷಕುಮಾರ್ ಕುಗ್ವೆ, ಡಾ.ಕೃಷ್ಣಮೂರ್ತಿ ಚಮರಂ, ಡಾ.ಶಿವಕುಮಾರ, ಜಯದೇವಿ ತಾಯಿ ಲಿಗಾಡೆ, ಚೇತನ್ ಅಹಿಂಸಾ, ಪ್ರೊ.ಹರಿರಾಮ್, ಡಾ.ಜಿ.ಶ್ರೀನಿವಾಸ್, ಡಾ.ಹ.ರಾ. ಮಹೇಶ್, ಡಾ.ನಟರಾಜ್ ಬೂದಾಳ್, ಧರಣಿದೇವಿ ಮಾಲಗತ್ತಿ ಹಾಗೂ ಇನ್ನಿತರರಿಂದ ವಿವಿಧ ಗೋಷ್ಠಿಗಳಲ್ಲಿ ವಿಚಾರ ಮಂಡನೆ, ಸ್ಥಳ: ಕಲಾಮಂದಿರ.

■ **ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್:** ಡಾ.ಡಿವಿಜಿ ಅವರ ಮಂಕುತಿಮ್ಮನ ಕಗ್ಗ ಮುಕ್ತಕ ಕೃತಿ ಆಧಾರಿತ ಎರಡು ವಿಶೇಷ ಉಪನ್ಯಾಸಗಳು, ಡಾ.ಡಿವಿಜಿ ಮುಕ್ತಕ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ವಿದ್ವಾನ್ ಜಿ.ಎಸ್.ನಟೇಶ್ ಅವರಿಂದ ಸೌಂದರ್ಯ ಗುರು ಪ್ರಕೃತಿ ಕುರಿತು ಉಪನ್ಯಾಸ, ಸ್ಥಳ: ಸಂಗೀತ ಕಲಾನಿಧಿ ಶ್ರೀ ಕೆ.ವಾಸುದೇವಾಚಾರ್ಯ ಭವನ, ನಾದಬ್ರಹ್ಮ ಸಂಗೀತ ಸಭಾ ಕಟ್ಟಡ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ. ವಿಶ್ವನಾಥ್ ಹಾಗೂ ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಕೆ. ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು ಜಾನಪದ ಕ್ಷೇತ್ರದ ಸಾಧನೆಗಾಗಿ ಮೈಸೂರು ಆಕಾಶವಾಣಿ ಕೇಂದ್ರದಿಂದ ಸನ್ಮಾನಿತರಾದ ಜಾನಪದ ವಿದ್ವಾಂಸ ಡಾ. ಪಿ.ಕೆ. ರಾಜಶೇಖರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಡಾ. ಮೈಸೂರು ಉಮೇಶ್, 9.00 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮೇಘನ ಮೂರ್ತಿ ಬಲನಾಡು – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

ಮಧ್ಯಾಹ್ನ: 12.05 ವನಿತಾವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ವೀಣಾ ಶ್ರೀನಿವಾಸ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಪದ್ಮಾ ಶಂಕರ್–ವೈಯೋಲಿನ್ ವಾದನ, 4.00 ಕಥಾಕಾಲಕ್ಷೇಪ ಭೂ ಕೈಲಾಸ, ಪ್ರಸ್ತುತಿ– ಗುರುರಾಜು ನಾಯ್ಡು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮೀನುಗಾರಿಕೆಯಲ್ಲಿ ಮೀನುಗಾರರ ಸಹಕಾರ ಸಂಘಗಳ ಪಾತ್ರ ಮತ್ತು ಜವಾಬ್ದಾರಿ ಈ ಕುರಿತು ಮಂಡ್ಯದ ಮೀನುಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕರಾದ ಲೋಕೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು – ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್, ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ಬಿ. ದಿಗ್ವಿಜಯ್, 8.00 ಯುವವಾಣಿ–ಚಿತ್ರಚಿತ್ತಾರ, ವಿಷಯ:ವಿಶ್ವ ಆಹಾರದಿನ, ಪ್ರಸ್ತುತಿ:ಅದಿತಿ ಭಾರಧ್ವಾಜ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಯು.ಶ್ರೀನಿವಾಸ್–ಮ್ಯಾಂಡೋಲಿನ್ ವಾದನ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

ಮೈಸೂರು ಮಿತ್ರ

ಮಂಗಳವಾರ 14 ಅಕ್ಟೋಬರ್ 2025



ಸಾಕು ಪ್ರಾಣಿ–ಪಕ್ಷಿಗಳೊಂದಿಗೆ ಮಾಜಿ ಸಚಿವ ಸಾ.ರಾ.ಮಹೇಶರ ಕುಟುಂಬದ ಒಡನಾಟ

●ಅಚ್ಚುಮೆಚ್ಚಿನ ಕುದುರೆ ರೋಲೆಕ್ಸ್ ಮುಡಿಗೆ ಏಷ್ಯಾ ಮಟ್ಟದ ಪ್ರಶಸ್ತಿ ●ದೇಶಿ–ವಿದೇಶಿ ತಳಿಯ ಸಂರಕ್ಷಣೆ ಸವಾಲಿನ ಕೆಲಸ

ಪ್ರಾಣಿಗಿರುವ ನಿಯತ್ತು ಮನುಷ್ಯನಿಗೆ ಇಲ್ಲ ಎಂಬ ಗಾದೆ ಮಾತು ಅಕ್ಷರಶಃ ಸತ್ಯ. ಈ ಕಾರಣಕ್ಕೆ ರಾಜ ಮಹಾರಾಜರ ಕಾಲದಿಂದ ಇಲ್ಲಿಯವರೆಗೆ ಜನರು ಪ್ರಾಣಿಗಳನ್ನು ಪ್ರೀತಿಯಿಂದ ಸಾಕಿ–ಸಲಹುತ್ತಾ ಬಂದಿದ್ದಾರೆ. ಮಾಜಿ ಸಚಿವ ಸಾ.ರಾ.ಮಹೇಶ್ ಹಾಗೂ ಅವರ ಪುತ್ರರಾದ ಸಾ.ರಾ.ಜಯಂತ್ ಹಾಗೂ ಡಾ.ಸಾ.ರಾ.ಧನುಷ್ ಅವರು ನೂರಾರು ಪ್ರಾಣಿ, ಪಕ್ಷಿಗಳನ್ನು ಅಕ್ಕರೆಯಿಂದ ಸಾಕುತ್ತಿದ್ದಾರೆ. ಮೈಸೂರಿನ ದಟ್ಟಗಳ್ಳಿಯ ಅವರ ಫಾರಂ ಹೌಸ್‌ನಲ್ಲಿ ಮಿನಿ ಮೃಗಾಲಯವನ್ನೇ ರೂಪಿಸಿದ್ದಾರೆ. ಸಾ.ರಾ.ಜಯಂತ್ ಸಾಕಿರುವ ರೋಲೆಕ್ಸ್ ಎಂಬ ಕುದುರೆಗೆ ಏಷ್ಯಾದ ಅತಿ ದೊಡ್ಡ 'ದಿ ರಾಯಲ್ಟಿ ಹಾರ್ಸ್ ಶೋ'ನಲ್ಲಿ ಪ್ರಥಮ ಬಹುಮಾನ ಕೂಡ ಪಡೆದಿದೆ.

ತಮ್ಮ ಹುಟ್ಟೂರಾದ ಕೆ.ಆರ್.ನಗರ ತಾಲೂಕು ಸಾಲಿಗ್ರಾಮದಲ್ಲಿ ಚಿಕ್ಕ ವಯಸ್ಸಿನಿಂದಲೇ ಪ್ರಾಣಿಗಳನ್ನು ಸಾಕುವುದನ್ನು ಸಾ.ರಾ. ಮಹೇಶರವರು ಕರಗತ ಮಾಡಿಕೊಂಡಿದ್ದರು. ತಂದೆಯಂತೆ ಮಕ್ಕಳಿಗೂ ಕೂಡ ಪ್ರಾಣಿ–ಪಕ್ಷಿಗಳನ್ನು ಕಂಡರೆ ಬಲು ಪ್ರೀತಿ. ಅದರಲ್ಲೂ ಸಾ.ರಾ.ಜಯಂತ್ ಅವರಿಗೆ ಪ್ರತಿದಿನ, ಪ್ರತಿ ಕ್ಷಣ ಪ್ರಾಣಿ, ಪಕ್ಷಿಗಳ ಜೊತೆ ಒಡನಾಟವಿದೆ.

ಹಸು, ನಾಯಿ, ಪಕ್ಷಿ ಸೇರಿದಂತೆ ಇತರೆ ಪ್ರಾಣಿಗಳನ್ನು ಸಾಕುತ್ತಿದ್ದ ಸಾ.ರಾ.ಜಯಂತ್ ಅವರಿಗೆ ಕುದುರೆಯನ್ನು ಸಾಕಬೇಕೆಂಬ ಹಂಬಲವಿತ್ತು. ಆ ವೇಳೆ ರಾಜಸ್ಥಾನದಲ್ಲಿ ಕಳೆದ 60 ವರ್ಷಗಳಿಂದ ಕುದುರೆ ಸಾಕುತ್ತಿರುವ ಕಾಲೇಜು ಸ್ನೇಹಿತರನ್ನು ಸಂಪರ್ಕಿಸಿದರು. ಕುದುರೆ ಬಗ್ಗೆ ಅವರಿಂದ ಸಮಗ್ರ ಮಾಹಿತಿ ಪಡೆದು, ಅಧ್ಯಯನ ಕೂಡ ಮಾಡಿದರು. ತಮ್ಮ ಫಾರಂಹೌಸ್‌ನಲ್ಲಿ ಕುದುರೆ ಸಾಕಲು ನಿರ್ಧರಿಸಿದಾಗ ಸಾ.ರಾ.ಮಹೇಶ್ ಅವರು ಮಗನಿಗೆ ಉತ್ತೇಜನ ನೀಡಿದರು.

ಕುದುರೆ ಖರೀದಿಗಾಗಿ ಜಯಂತ್ ಅವರು ಗುಜರಾತ್ ಮತ್ತು ರಾಜಸ್ಥಾನಕ್ಕೂ ತೆರಳಿದ್ದರು. ಆ ವೇಳೆ ಅವರಿಗೆ ಕೆಲವು ಆಪ್ತ ಸ್ನೇಹಿತರು ಸಾಥ್ ನೀಡಿದರು. ಗುಜರಾತ್‌ನ ಸೂರತ್, ರಾಜಸ್ಥಾನದ ಜೈಪುರ್, ಜೋಧ್‌ಪುರ್‌ನಲ್ಲಿ ಕುದುರೆ ಖರೀದಿಗಾಗಿ ಸುತ್ತಾಡಿದರು. ಆದರೆ ತಮಗೆ ಇಷ್ಟವಾದ ಕುದುರೆ ಸಿಗಲಿಲ್ಲ. ಮೈಸೂರಿಗೆ ವಾಪಾಸ್ಸಾದ ಜಯಂತ್, ಕುದುರೆ ಸಾಕುವ ಛಲ ಬಿಡಲಿಲ್ಲ. ಮತ್ತೆ ಕುದುರೆ ಖರೀದಿಗೆ ರಾಜಸ್ಥಾನ್‌ಗೆ ಹೊರಟರು. ಹತ್ತಾರು ದಿನ ಅಲೆದು ಕೊನೆಗೂ ತಮಗೆ ಇಷ್ಟವಾದ ಕುದುರೆ ಪತ್ತೆ ಮಾಡಿದರು.

ಕುದುರೆ ಖರೀದಿ ಮಾಡುವಾಗ ಅದರ ತಂದೆ, ತಾಯಿ, ತಾತ, ಮುತ್ತಾತನ ಇತಿಹಾಸ ಸೇರಿದಂತೆ ಇತರೆ ವಿಚಾರ ತಿಳಿದು ನಾಲ್ಕು ಕುದುರೆ ಖರೀದಿಸಿದರು. ಕುದುರೆ ನಿಲ್ಲಲು ಸ್ಟ್ಯಾಂಡ್ ಹಾಗೂ ಏರ್ ಕಂಡಿಷನರ್ ಇರುವ ಆಂಬ್ಯುಲೆನ್ಸ್ ಸಿದ್ಧಪಡಿಸಿ, ರಾಜಸ್ಥಾನದಿಂದ ಮೈಸೂರಿಗೆ 4 ಕುದುರೆ ತಂದಿದ್ದಾರೆ.

ನಾಲ್ಕು ಕುದುರೆಗಳಿಗೆ ವಿಭಿನ್ನ ಹೆಸರುಗಳನ್ನು ನಾಮಕರಣ ಮಾಡಿದ್ದಾರೆ. ರಾಜಸ್ಥಾನದ ಪುಷ್ಕರ್‌ನಿಂದ ತಂದಿರುವ ಕಪ್ಪು ಬಣ್ಣದ ಕುದುರೆಗೆ 'ರೋಲೆಕ್ಸ್', ಬಿಳಿ ಬಣ್ಣದ ಕುದುರೆಗೆ 'ಸಾರಾ..' ಜೋಧ್‌ಪುರ್‌ನಿಂದ ತಂದಿರುವ ಪಂಚ ಕಲ್ಯಾಣದ ಕುದುರೆಗೆ 'ಮ್ಯಾಕ್ಸಿಮಸ್' ಹಾಗೂ ಜೈಪುರ್‌ನಿಂದ ತಂದಿರುವ ಕುದುರೆಗೆ 'ಅರ್ಜುನ' ಹೆಸರಿಟ್ಟಿದ್ದಾರೆ. ಈ 4 ಕುದುರೆಗಳು ಸಾ.ರಾ. ಫಾರಂನಲ್ಲಿದ್ದು, ಸಾ.ರಾ.ಮಹೇಶ್ ಅವರ ಇಡೀ ಕುಟುಂಬಕ್ಕೆ ಪ್ರೀತಿ ಪಾತ್ರವಾಗಿವೆ. 4 ಕುದುರೆಗಳು ವಿಭಿನ್ನ ತಳಿಗಳಿಗೆ ಸೇರಿದೆ. ರೋಲೆಕ್ಸ್, ಮ್ಯಾಕ್ಸಿಮಸ್ ಮಾರ್‌ವಾರಿ ತಳಿಗೆ ಸೇರಿದ್ದರೆ, ಸಾ.ರಾ. ಮತ್ತು ಅರ್ಜುನ ಕಾಟೇವಾರಿ ತಳಿಗೆ ಸೇರಿವೆ. ಇವೆಲ್ಲವೂ ಭಾರತದ ಮೂಲ ತಳಿಯ ಕುದುರೆಗಳಾಗಿದ್ದು, ಮಕ್ಕಳು ಕೂಡ ಓಡಿಸುವಷ್ಟು ಸೌಮ್ಯ ಸ್ವಭಾವದವು.





ಈ ಕುದುರೆಗಳಿಗೆ ಬಿಸ್ಲರಿ ನೀರೆ ಬೇಕು, 10 ಲೀಟರ್ ಹಾಲು ಕೊಡಬೇಕು

ಕುದುರೆ ಸಾಕುವುದು ಅಷ್ಟು ಸುಲಭದ ಮಾತಲ್ಲ. ಬಿಳಿ ಆನೆ ಸಾಕುವುದಕ್ಕಿಂತ ದುಬಾರಿ. ಇವುಗಳ ಸಾಕಾಣಿಕೆಗೆ ಅನುಭವ ಬೇಕು. ತೋಟದಲ್ಲೇ ಸಾಕುತ್ತಿರುವ ನಾಟಿ ಹಸುವಿನಿಂದ ಕರೆದ 10 ಲೀಟರ್ ಹಾಲು, ತಲಾ ಕಾಲು ಕೆ.ಜಿ. ಗೋಡಂಬಿ, ಬಾದಾಮಿ, 4 ನಾಟಿ ಕೋಳಿ ಮೊಟ್ಟೆ, ಸೇಬು, ಕ್ಯಾರೆಟ್, ಬೆಲ್ಲ, ಸಾಸಿವೆ ಎಣ್ಣೆ, 30ರಿಂದ 40 ಲೀಟರ್ ಬಿಸ್ಲರಿ ನೀರು, ಓಟ್ಸ್, ಚೆನ್ನ, ಹುರುಳಿ, ಹೆಸರು ಬೇಳೆ, ಬಾಜ್ರಾ, ಗೋಧಿ ಬೂಸ, ಗರಿಕೆ ಹುಲ್ಲು, ಮೆಂತ್ಯಾ ಸೇರಿದಂತೆ ಇತರೆ ಪೌಷ್ಟಿಕ ಆಹಾರ ನೀಡಲಾಗುತ್ತದೆ. ಈ ಎಲ್ಲಾ ಆಹಾರವನ್ನು ಪ್ರತಿದಿನ ಮೂರು ಹೊತ್ತು ನೀಡಲಾಗುತ್ತಿದೆ. ಸಾಮಾನ್ಯವಾಗಿ ಕುದುರೆಗಳಿಗೆ 'ಕಾಲಿಗ್' ಎಂಬ ದೈಹಿಕ ಸಮಸ್ಯೆ ಕಾಡುತ್ತದೆ. ಕುದುರೆಗೆ ಈ ಸಮಸ್ಯೆ ಬರಬಾರದೆಂದು ಪಿಂಕ್ ಸಾಲ್ಟ್ ನೀಡಲಾಗುತ್ತದೆ. ಪಿಂಕ್ ಸಾಲ್ಟ್ ಸೇವಿಸುವ ಹಿನ್ನೆಲೆಯಲ್ಲಿ ಕುದುರೆ ಹೆಚ್ಚಾಗಿ ನೀರು ಕುಡಿಯುತ್ತದೆ. ಇದರಿಂದ 'ಕಾಲಿಗ್' ಸಮಸ್ಯೆಯಿಂದ ಕುದುರೆ ಪಾರಾಗುತ್ತದೆ. ನಾಲ್ಕು ಕುದುರೆಗಳಿಗೆ ಪ್ರತಿದಿನ 25 ನಿಮಿಷಗಳ ಕಾಲ ಕ್ಯಾಂಟರ್ ಹಾಗೂ ಟ್ರಾಟಿಂಗ್ ವಾಕ್ ಮಾಡಿಸಲಾಗುತ್ತದೆ. ಈ ಮೂಲಕ ಸಾ.ರಾ. ಮಹೇಶ್ ಅವರ ಕುಟುಂಬ ಕುದುರೆಗಳನ್ನು ಮಗುವಿನಂತೆ ಸಾಕುತ್ತಿದೆ.

ಸಾರಾ ಫಾರಂನಲ್ಲಿ ಪ್ರಾಣಿ, ಪಕ್ಷಿಗಳ ಕಲರವ

ಮೈಸೂರಿನ ದಟ್ಟಗಳ್ಳಿಯಲ್ಲಿರುವ ಸಾ.ರಾ.ಮಹೇಶ್ ಅವರ ಸಾ.ರಾ.ಫಾರಂ ಮಿನಿ ಮೃಗಾಲಯ. ಫಾರಂ ಪ್ರವೇಶಿಸಿದರೆ ನೂರಾರು ಪ್ರಾಣಿ, ಪಕ್ಷಿಗಳ ಕಲರವ ವಿಶಿಷ್ಟ ಅನುಭವ



ನೀಡುತ್ತದೆ. ಸಾ.ರಾ.ಮಹೇಶ್ ಹಾಗೂ ಅವರ ಮಕ್ಕಳು ಪ್ರಾಣಿ, ಪಕ್ಷಿಗಳನ್ನು ಎಷ್ಟರ ಮಟ್ಟಿಗೆ ಪ್ರೀತಿ–ವಾತ್ಸಲ್ಯ ಮಾಡುತ್ತಾರೊ, ಅವು ಕೂಡ ಅಷ್ಟೇ ಅಚ್ಚು ಮೆಚ್ಚಿನಿಂದ ಅವರ ಹಿಂದೆ ಮುಂದೆ ಓಡಾಡುತ್ತವೆ. ಸಾರಾ ಫಾರಂನಲ್ಲಿ ಒಟ್ಟು 60 ಹಸುಗಳಿವೆ. ಜರ್ಸಿ 20, ಗೀರ್ 12, ಪುಂಗನೂರು 7, ಮುರ್ರಾ 1, ಪಂಜಾಬ್‌ನ ಹಳ್ಳಿಕಾರ್, ಜೆಲ್ಲಿ ಕಟ್ಟು ಮಲೆನಾಡು ಗಿಡ್ಡು ಎಂಬ ಹಲವು ತಳಿಯ ಹಸುಗಳನ್ನು ಸಾಕುತ್ತಿದ್ದಾರೆ. ಸ್ವದೇಶಿ ಹಾಗೂ ವಿದೇಶದ ಹಲವು ತಳಿಯ ಶ್ವಾನಗಳು ರೋಮಾಂಚನಗೊಳಿಸುತ್ತವೆ. ಕತ್ತಿಗೆ ಹಾಕಿರುವ ಚೈನ್‌ನನ್ನು ಇಬ್ಬರೂ ಹಿಡಿದು ಎಳೆದರೂ ನಿಯಂತ್ರಣಕ್ಕೆ ಬಾರದಷ್ಟು ಶಕ್ತಿಶಾಲಿಯಾಗಿರುವ ಹಲವು ಶ್ವಾನಗಳಿವೆ. ಪಿಟ್ ಬುಲ್ 2, ಕೇನ್ ಕೊಸೋರ್ 1, ರಾಟ್ ವ್ಹೀಲರ್ 2, ಸೈಬೇರಿಯನ್ ಹಸ್ಕಿ 1, ಬೆಲ್ಜಿಯಂ ಮಾಲಿನೋಯಿಸ್, ಗ್ರೇ ಹೌಂಡ್ ಜೊತೆಗೆ ಬೀದಿಯಲ್ಲಿ ರಕ್ಷಿಸಲ್ಪಟ್ಟ 15 ನಾಯಿಗಳನ್ನು ಸಾಕುತ್ತಿದ್ದಾರೆ. ಏಷ್ಯಾದ ಎರಡನೇ ದೊಡ್ಡ ಪಕ್ಷಿ ಹೇಮೊ ಆಸ್ಟ್ರಿಚ್, ಗಿನ್ನಿ ಫೌಲ್, ಟರ್ಕಿ ಕೋಳಿ, ಫೈಟಿಂಗ್ ಕೋಳಿ, ಬಾತು ಕೋಳಿ, ಆಮೆ ಸೇರಿದಂತೆ ಹಲವು ಪ್ರಾಣಿ ಪಕ್ಷಿಗಳನ್ನು ಸಾಕಿ–ಸಲುಹುತ್ತಿದ್ದಾರೆ.











> "ರೇಸ್‌ಗಳಲ್ಲಿ ಬಳಕೆ ಮಾಡುವ ಉದ್ದೇಶದಿಂದ ನಾವು ಕುದುರೆ ಖರೀದಿ ಮಾಡಲಿಲ್ಲ. ಚಿಕ್ಕ ವಯಸ್ಸಿನಿಂದ ಕುದುರೆ ಸಾಕಬೇಕೆಂಬ ಹೆಬ್ಬಯಕೆಯಿಂದ ಕುದುರೆ ಖರೀದಿಸಿ, ಸಾಕುತ್ತಿದ್ದೇನೆ. 20 ತಿಂಗಳ ಹಿಂದೆ ತಲಾ 1.3ರಿಂದ 2.5 ಲಕ್ಷದವರೆಗೆ ನಾಲ್ಕು ಕುದುರೆ ಖರೀದಿಸಿದ್ದೇವೆ. ಬೆಂಗಳೂರಿನ ಯಲಹಂಕದ ಮಾರ್ವಾರಿ ಹಾರ್ಸ್ ಶೋ ಸ್ಪರ್ಧೆಯಲ್ಲಿ ನಾವು ಸಾಕಿರುವ ರೋಲೆಕ್ಸ್‌ಗೆ ಪ್ರಥಮ ಬಹುಮಾನ ದೊರೆತಿದೆ. ಟು ಟೀಥ್ (ಎರಡು ಹಲ್ಲು) ಕುದುರೆ ಇದಾಗಿದ್ದು, ಎಲ್ಲರ ಆಕರ್ಷಣೆ ಕೇಂದ್ರ ಬಿಂದುವಾಗಿತ್ತು. ಕುದುರೆಯ ಹಾವಾ–ಭಾವ, ಉಗುರು, ನಡೆಯುವ ಶೈಲಿ, ಎತ್ತರ ಸೇರಿದಂತೆ ಇತರೆ ಮಾನದಂಡಗಳನ್ನು ಆಧರಿಸಿ ಕುದುರೆಗೆ ಬಹುಮಾನ ನೀಡಲಾಗುತ್ತದೆ. ಭಾರತದಲ್ಲಿ ಇಂತಹ ಅಪರೂಪದ ಕುದುರೆಗಳ ಸ್ಪರ್ಧೆಗಳು ಆಗಾಗ್ಗೆ ನಡೆಯಲಿದ್ದು, ಅದರಲ್ಲೂ ನಮ್ಮ ಕುದುರೆಗಳನ್ನು ಪ್ರದರ್ಶಿಸಲಾಗುವುದು.
>
> –ಸಾ.ರಾ.ಜಯಂತ್, ಮಾಜಿ ಸಚಿವ ಸಾ.ರಾ.ಮಹೇಶ್ ಪುತ್ರ









ನಕ್ಕರೆ ಅದೇ ಸ್ವರ್ಗ

ಗಂಡ : ನಾನು ದುಬೈಗೆ ಹೋಗ್ತೀನಿ
ಹೆಂಡ್ತಿ : ನಾನು ಬರ್ತೇನೆ ಬಂಗಾರ ತರಬೇಕು.
ಗಂಡ : ನಾನು ಲಂಡನ್‌ಗೆ ಹೋಗ್ತೀನಿ
ಹೆಂಡ್ತಿ : ನಾನು ಬರ್ತೇನೆ ಮೇಕಪ್ ಕಿಟ್ ತರಬೇಕು.
ಗಂಡ : ನಾನು ನರಕಕ್ಕೇ ಹೋಗ್ತೀನಿ.
ಹೆಂಡ್ತಿ : ನಾನು ಬರೋಲ್ಲ ದೇವ್ರು ನನಗೆ ಎಲ್ಲಾ ಕೊಟ್ಟಿದ್ದಾನೆ.

ಮೈಸೂರು ಮಿತ್ರ

ಮಂಗಳವಾರ, 14 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಸೂರ್ಯನಂತೆ ಹೊಳೆಯುವ ಆಸೆ ನಿಮಗಿದ್ದರೆ ಮೊದಲು ಸೂರ್ಯನಂತೆ ಹೊತ್ತಿ ಉರಿಯುವುದನ್ನು ಕಲಿಯಿರಿ. –ಡಾ. ಎಪಿಜೆ ಅಬ್ದುಲ್ ಕಲಾಂ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಳೆ ನೀರನ್ನು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿದ ಹಾಗೆ.

ನಿಮ್ಮ ಪತ್ರಗಳು

ಪಾಲಿಕೆ ಆರೋಗ್ಯಾಧಿಕಾರಿಗಳು ಗಮನಿಸುವರೇ?

ಮಾನ್ಯರೆ,

ಸ್ವಚ್ಛ ಮೈಸೂರು ಆಗಬೇಕಾದರೆ ಪಾಲಿಕೆ ನಿಯಮಿತವಾಗಿ ಮನೆ ಮನೆಯಿಂದ ಕಸವನ್ನು ಸಂಗ್ರಹಿಸುವುದು ಅತ್ಯಗತ್ಯ. ಆದರೆ ನಗರದಲ್ಲಿ ವಾರದಲ್ಲಿ ಐದೇ ದಿವಸ ಕಸವನ್ನು ಸಂಗ್ರಹಿಸುತ್ತಿದ್ದು, ಕಸದ ವಾಹನ ಕೈಕೊಡುವ ಸಂದರ್ಭಗಳು ಹೆಚ್ಚಾಗುತ್ತಿದೆ. ತುಂಬಿದ ಕಸದ ಬಕೆಟುಗಳನ್ನಿಟ್ಟುಕೊಂಡು ಏನಪ್ಪಾ ಮಾಡುವುದು ಎನ್ನುವ ಚಿಂತೆ ನಾಗರಿಕರನ್ನು ಕಾಡುತ್ತಿದೆ. ಮನೆಯ ಬಳಿ ಬರುವ ವಾಹನವನ್ನು ಕೇಳಿದರೆ ಕಸವನ್ನೆತ್ತಿಕೊಳ್ಳಲು ಜನರೇ ಬರುತ್ತಿಲ್ಲ. ಇದ್ದವರನ್ನು ಬೇರೆ ಕೆಲಸಕ್ಕೆ ಕಳಿಸುತ್ತಾರೆ. ನಾವೇನು ಮಾಡಲು ಆಗುತ್ತದೆ ಎಂದು ಹೇಳಿ ಎಂದು ನಮ್ಮನ್ನೇ ಪ್ರಶ್ನಿಸುತ್ತಾರೆ ಕಸದ ವಾಹನದವರು. ಪಾಲಿಕೆಯು ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕು. ದಿನದ ಕಸವನ್ನು ಸಂಗ್ರಹಿಸಿದ ನಂತರವಷ್ಟೇ ಆ ವಾಹನವನ್ನು ಬೇರೆಡೆಗೆ ಕಳಿಸಬೇಕು. ಆರೋಗ್ಯಾಧಿಕಾರಿಗಳು ಗಮನ ನೀಡುವರೇ?

–ಕೊ.ಸು. ನರಸಿಂಹಮೂರ್ತಿ, ಹಿರಿಯ ನಾಗರಿಕ, ಮೈಸೂರು.

ಮರದ ಕೊಂಬೆ ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ ಹೃದಯ ಭಾಗ ನಜರ್‌ಬಾದ್‌ನ ಎಸ್‌ಪಿ ಆಫೀಸ್ ಸರ್ಕಲ್‌ನಿಂದ ಹಾರ್ಡಿಂಗ್ ಸರ್ಕಲ್‌ಗೆ ಹೋಗುವ ಹೋಗುವ ಥಿಯೋಬಾಲ್ಡ್ ರಸ್ತೆಯ ಉದ್ದಕ್ಕೂ ಸುಮಾರು ಒಂದು ವಾರದಿಂದ ಮರದ ಕೊಂಬೆಗಳು ಬಿದ್ದಿದ್ದು, ಪಾದಚಾರಿಗಳು, ವಾಹನಗಳ ಓಡಾಡಕ್ಕೆ ತುಂಬಾ ತೊಂದರೆಯಾಗಿದೆ. ದಯವಿಟ್ಟು ಸಂಬಂಧಪಟ್ಟವರು ತೆರವುಗೊಳಿಸಿ ಸಾರ್ವಜನಿಕರು, ವಾಹನ ಸಂಚಾರಕ್ಕೆ ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮಾನವಿ.

–ಲಿಂಗೇಶ್ ಕುಮಾರ್, ಮೈಸೂರು

ಋತುಚಕ್ರ ರಜೆ ಗೌರವ ಸೂಚಕವೋ, ಲಿಂಗಭೇದದ ಎಚ್ಚರಿಕೆಯೋ?


ಮಾನ್ಯರೆ,

ಕರ್ನಾಟಕ ಸರ್ಕಾರ ಘೋಷಿಸಿರುವ ಪ್ರತಿ ತಿಂಗಳು ಒಂದು ದಿನದ ಋತುಚಕ್ರ ರಜೆ ನೀತಿ ಮಹಿಳೆಯರ ಆರೋಗ್ಯ, ಗೌರವ ಮತ್ತು ಕಾರ್ಯಸ್ಥಳದ ಸಮಾನತೆಯನ್ನು ಬಲಪಡಿಸುವ ಪ್ರಮುಖ ಹೆಜ್ಜೆ. ಆದರೆ ಇದರ ಅನುಷ್ಠಾನ ಹಾಗೂ ಸಮಾಜದ ಮನೋಭಾವ ಹೇಗಿರಬೇಕು ಎಂಬ ಪ್ರಶ್ನೆ ಮಹತ್ವದಾಗಿದೆ. ಋತುಚಕ್ರದ ಅವಧಿಯಲ್ಲಿ ನೋವು, ದೌರ್ಬಲ್ಯ ಹಾಗೂ ಮಾನಸಿಕ ಒತ್ತಡ ಅನುಭವಿಸುವುದು ಸಹಜ. ಒಂದು ದಿನದ ವಿಶ್ರಾಂತಿ ನೀಡುವುದು ಮಾನವೀಯತೆ ಮತ್ತು ಸಂವೇದನೆಯ ಸಂಕೇತ. ಇದು ಮಹಿಳೆಯರ ದೇಹದ ನೈಜ ಅಗತ್ಯಗಳಿಗೆ ಗೌರವ ತೋರಿಸುವ ನಿಟ್ಟಿನಲ್ಲಿ ಶ್ಲಾಘನೀಯ ಕ್ರಮವಾಗಿದೆ.

ಆದರೆ, ಈ ನೀತಿಯ ಪರಿಣಾಮವಾಗಿ ಕೆಲವು ಉದ್ಯಮಗಳು ಮಹಿಳೆಯರನ್ನು ನೇಮಿಸುವಲ್ಲಿ ಹಿಂಜರಿಯಬಹುದೆಂಬ ಆತಂಕವಿದೆ. ಇಂತಹ ಭಾವನೆಗಳು ಲಿಂಗಭೇದವನ್ನು ಎತ್ತಿತೋರುಸುತ್ತದೆ ಎಂಬ ಭಯವಿದೆ. ಮಹಿಳೆಯರು ಹೆಚ್ಚು ರಜೆ ತೆಗೆದುಕೊಳ್ಳುತ್ತಾರೆ ಎಂಬ ತಪ್ಪು ಕಲ್ಪನೆಗೆ ಬದಲು, ಅವರ ಕೌಶಲ್ಯ ಮತ್ತು ನಿಷ್ಠೆಯನ್ನು ಗುರುತಿಸುವ ಮನಸ್ಥಿತಿ ಬೆಳೆಸಬೇಕು. ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ಈ ನೀತಿಯ ನಿಜವಾದ ಉದ್ದೇಶವನ್ನು ಸ್ಪಷ್ಟವಾಗಿ ಸಾರಬೇಕು. ಇದನ್ನು ವಿಶ್ರಾಂತಿಯ ಹಕ್ಕು ಎಂದಲ್ಲ, ಗೌರವದ ಹಕ್ಕು ಎಂದು ಪರಿಗಣಿಸುವ ಸಂವೇದನೆ ಅಗತ್ಯ. ಕಾರ್ಯಸ್ಥಳದಲ್ಲಿ ನಂಬಿಕೆ ಮತ್ತು ಸಹಕಾರದ ವಾತಾವರಣ ಬೆಳೆಯುವಾಗ ಮಾತ್ರ ಈ ನೀತಿ ಯಶಸ್ವಿಯಾಗಲಿದೆ. ಋತುಚಕ್ರ ರಜೆ ಕೇವಲ ರಜೆ ನೀಡುವ ಕ್ರಮವಲ್ಲ; ಅದು ಮಹಿಳೆಯರ ದೈಹಿಕ, ಮಾನಸಿಕ ಮತ್ತು ವೃತ್ತಿಜೀವನದ ಸಮತೋಲನ ಸಾಧಿಸಲು ತೆಗೆದುಕೊಳ್ಳಲಾದ ಪ್ರಗತಿಪರ ಹೆಜ್ಜೆ. ನಮ್ಮ ಸಮಾಜ ಹೆಚ್ಚು ಸಂವೇದನಾಶೀಲ ಮತ್ತು ಗೌರವಪೂರ್ಣವಾಗಲಿ.

–ಡಾ. ಎಚ್.ಕೆ. ವಿಜಯಕುಮಾರ್, ಮೈಸೂರು.

ಕಸದ ರಾಶಿ ತೆರವುಗೊಳಿಸಿ



ಮಾನ್ಯರೆ,

ಆಲನಹಳ್ಳಿ ಗ್ರಾಮದ ಒಳಗಿನಿಂದ ಜೆಎಸ್‌ಎಸ್ ಆಯುರ್ವೇದಿಕ್ ಆಸ್ಪತ್ರೆಗೆ ಹೋಗುವ ಹಾದಿಯಲ್ಲಿ ಕಸದ ರಾಶಿ ಬಿದ್ದಿದ್ದು, ದುರ್ನಾತ ಬೀರುತ್ತಿದೆ. ಇದರಿಂದ ಓಡಾಡಲು ಕಷ್ಟವಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿ ವರ್ಗದವರು ದಯಮಾಡಿ ಕಸದ ರಾಶಿ ತೆರವುಗೊಳಿಸಿ ಸ್ವಚ್ಛತೆಯ ಅರಿವು ಮೂಡಿಸಬೇಕಾಗಿ ವಿನಂತಿ.

–ಗ್ರಾಮಸ್ಥರು, ಆಲನಹಳ್ಳಿ



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ರೌಡಿ ಪ್ರತಿಬಂಧಕ ದಳ ಮರು ಸ್ಥಾಪಿಸಬೇಕಿದೆ!

ಮೈಸೂರು ನಗರ ಪೊಲೀಸ್ ಕಮಿಷನರ್ ಸೀಮಾ ಲಾಟ್ಕರ್ ಕೊನೆಗೂ ಎಚ್ಚೆತ್ತು ರೌಡಿಗಳ ಉಪಟಳ ಹತ್ತಿಕ್ಕುವ ಸಲುವಾಗಿ ರೌಡಿ ಪ್ರತಿಬಂಧಕ ದಳ ರಚಿಸುವ ತೀರ್ಮಾನಕ್ಕೆ ಬಂದಿದ್ದಾರೆ.

2023ರಲ್ಲೇ 'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕರಾದ ವಿಕ್ರಮ್ ಮುತ್ತಣ್ಣನವರು ರೌಡಿ ಪ್ರತಿಬಂಧಕ ದಳ ರಚನೆಯ ಅನಿವಾರ್ಯತೆಯನ್ನು ತಮ್ಮ 'ಬಿಚ್ಚು ನುಡಿ' ಅಂಕಣದ ಲೇಖನದಲ್ಲಿ ಬಲವಾಗಿ ಪ್ರತಿಪಾದಿಸಿದ್ದರು. ಡಿಸೆಂಬರ್ 16, 2023ರಲ್ಲಿ ಪ್ರಕಟವಾಗಿದ್ದ ಆ ಲೇಖನವನ್ನು ಪುನರ್ ಪ್ರಕಟಿಸುತ್ತಿದ್ದೇವೆ. – ಸಂ.



ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಯಾವುದೇ ಸಮಾಜಘಾತುಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದಂತೆ ರೌಡಿಶೀಟರ್‌ಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡುತ್ತಿರುವುದನ್ನು ಕಾಣಬಹುದು (ಡಿಸೆಂಬರ್ 13, 2022ರ ಸಂಗ್ರಹ ಚಿತ್ರ)

ಇತ್ತೀಚೆಗೆ, ಕಚೇರಿ ಆವರಣದಲ್ಲಿ ಧೂಮಪಾನ ಮಾಡಬೇಡಪ್ಪಾ ಎಂದಿದ್ದಕ್ಕೆ ಯುವಕನೊಬ್ಬ ನಮ್ಮ ಮೈಸೂರು ನಗರ ಪಾಲಿಕೆಯ ರೆವಿನ್ಯೂ ಇನ್ಸ್‌ಪೆಕ್ಟರ್ ಮೇಲೆ ಹಲ್ಲೆ ಮಾಡಿದ್ದಾನೆ.

ಇದಕ್ಕೂ ಕೆಲ ವಾರದ ಹಿಂದೆ ಏಕಮುಖ ಸಂಚಾರವಿರುವ ರಸ್ತೆಯಲ್ಲಿ ಬೈಕ್‌ನಲ್ಲಿ ನುಗ್ಗಿದ ಮೂವರು ಯುವಕರನ್ನು ಎಚ್ಚರಿಸಿದ ಕಾರಣಕ್ಕೆ ಒಬ್ಬ ಮಧ್ಯ ವಯಸ್ಕರ ಮೇಲೆ ಆ ಪುಂಡರು ಹಲ್ಲೆ ನಡೆಸಿದ ಬಗ್ಗೆ ವರದಿಯಾಗಿತ್ತು.

ಕೆಲವು ವಾರಗಳ ಹಿಂದೆ ಕ್ರಾಫರ್ಡ್ ಹಾಲ್ ಬಳಿ ನಾನೇ ಒಂದು ಅಪಘಾತಕ್ಕೆ ಸಾಕ್ಷಿ. ಅಲ್ಲಿ ಓರ್ವ ಹಿರಿಯ ನಾಗರಿಕರು ನಿಧಾನವಾಗಿ ವೃತ್ತದಲ್ಲಿ ತಮ್ಮ ಕಾರನ್ನು ತಿರುಗಿಸಿಕೊಳ್ಳುತ್ತಿರುವಾಗ ಯಾವ ಕಡೆಯಿಂದಲೋ ಬೈಕ್‌ನಲ್ಲಿ ನುಗ್ಗಿದ ಇಬ್ಬರು ಯುವಕರು ಸೀದಾ ಬಂದು ಕಾರಿಗೆ ಗುದ್ದಿದರು.

ಈ ಅಪಘಾತದ ನಂತರ ಎದ್ದು, ಕುಂಟುತ್ತಾ ಬಂದ ಆ ಹುಡುಗರು *"ಹೆ ಮುದಿಯಾ... ನಾನು ವೇಗವಾಗಿ ಬರುತ್ತಿರೋದು ಕಾಣಲಿಲ್ವಾ? ಬ್ರೇಕ್ ಹಾಕಬೇಕು ಅಂತ ನಿನಗೆ ಗೊತ್ತಾಗಲಿಲ್ವಾ?"* ಎಂದು ರೇಗಾಡಿದರು.

ಆ ಯುವಕ ಎಷ್ಟರ ಮಟ್ಟಿಗೆ ಅವರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ಅಂದರೆ ಅವನು ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದರಿಂದ ಬೇರೆಲ್ಲಾ ವಾಹನಗಳು ಬ್ರೇಕ್ ಹಾಕಬೇಕಾಗಿತ್ತಂತೆ. ಇವನದು ಎಂಥಾ ಉಡಾಫೆ. ಅಬ್ಬಾ..!

ಓರ್ವ ಸಹ ಪ್ರಯಾಣಿಕರು **'ಆ ರೀತಿ ವೇಗವಾಗಿ ವಾಹನ ಚಾಲನೆ ಮಾಡುವುದು ತಪ್ಪು ಕಣ್ರಪ್ಪಾ'** ಎಂದು ಹೇಳಿದ್ದಕ್ಕೆ ಆ ಪುಂಡ ಹುಡುಗರು ಅವರಿಗೂ ಬೆದರಿಕೆ ಹಾಕಿ, 'ತೆ ಮುಚ್ಕೊಂಡ್ ಹೋಗೋ...' ಎಂದು ಅವಾಚ್ಯ ಶಬ್ದಗಳಿಂದ ಜೋರಾಗಿ ನಿಂದಿಸಿದರು. ಅವರು ಅಲ್ಲಿದ್ದ ಪೊಲೀಸರಿಗೂ ಕೇರ್ ಮಾಡದ್ದನ್ನು ಮತ್ತು ಆ ಪೊಲೀಸ್ ಸಹ ನಿಸ್ಸಹಾಯಕರಾಗಿ ನಿಂತಿದ್ದನ್ನು ನೋಡಿ ಅಲ್ಲಿ ನೆರೆದಿದ್ದವರು ಪುಂಡರ ಅಟ್ಟಹಾಸದಿಂದ ಹೆದರಿ ಸುಮ್ಮನೆ ಜಾಗ ಖಾಲಿ ಮಾಡಿದರು.

ಇಂತಹ ಘಟನೆಗಳಲ್ಲಿ ಪುಂಡ–ಪೋಕರಿಗಳು ಜನರನ್ನು ಹೆದರಿಸಿ–ಬೆದರಿಸುವುದು, ಮನಬಂದಂತೆ ಹಲ್ಲೆ ನಡೆಸುವುದು, ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ನಗರ ಬೆಳೆದಂತೆ ಇನ್ನೂ ಹೆಚ್ಚಾಗುವ ಸಾಧ್ಯತೆಯೂ ಇದೆ. ಈಗ ನೀವೇ ನೋಡುತ್ತಿದ್ದೀರಲ್ಲ.

ಮೈಸೂರು ಪೊಲೀಸರು ಸಣ್ಣಪುಟ್ಟ ಹಲ್ಲೆ ಪ್ರಕರಣಗಳನ್ನು ಸಹ ಹತ್ತಿಕ್ಕುವುದರಲ್ಲಿ ಸೋತಿದ್ದಾರೆ ಅನ್ನಿಸುತ್ತದೆ. ಇಂತಹ ಪ್ರಕರಣಗಳನ್ನು ಪೊಲೀಸರು **'ಬರೀ ವಾಗ್ವಾದ'** ಅಥವಾ **'ಸಣ್ಣ ಗದ್ದಲ'** ಎಂದು ಪರಿಗಣಿಸುತ್ತಾರೆ. ಹಾಗಾಗಿ ದೂರು ದಾಖಲಿಸಲು ಹೋಗುವುದಿಲ್ಲ. ಹಾಗೆಯೇ ಗದರಿಸಿಯೋ, ಎಚ್ಚರಿಸಿಯೋ ಕಳುಹಿಸಿಬಿಡುತ್ತಾರೆ.

ಕೆಲವು ಸಲ ದಿನವೆಲ್ಲಾ, ಕೆಲವೊಮ್ಮೆ ಹಲವು ದಿನ ಪೊಲೀಸ್ ಠಾಣೆಯಲ್ಲಿ ಕಳೆಯಬೇಕಾಗಬಹುದು ಎಂಬ ಕಾರಣದಿಂದಲೂ ಸಂತ್ರಸ್ತರು ದೂರು ಕೊಡಲು ಹೋಗುವುದಿಲ್ಲ. ಯುವಕರ ಇಂತಹ ದುರ್ವರ್ತನೆಗೆ ಇನ್ನೂ ಎರಡು ಕಾರಣಗಳಿವೆ.

ಮೊದಲನೆಯದಾಗಿ 'ವೇದಿಕೆಗಳು' ಮತ್ತು 'ಅಭಿಮಾನಿ ಸಂಘ'ಗಳಿಗೆ ಸದಸ್ಯರಾಗಿರುವವರಿಗೆ ಇರುವಂತಹ ರಾಜಕೀಯ ಬೆಂಬಲ. ಅಂತಹ ಸಂಘಗಳ ಸದಸ್ಯರಾಗಿರುವ ಯುವಕರ ಮೇಲೆ ಕ್ರಮ ಕೈಗೊಳ್ಳದಂತೆ ಪೊಲೀಸರ ಮೇಲೆ ಸಹಜವಾಗಿಯೇ ರಾಜಕೀಯ ಒತ್ತಡ ಇದ್ದೇ ಇರುತ್ತದೆ.

> ಒಂದು ಕೆಟ್ಟ ಸಂಗತಿ ಎಂದರೆ, ಈಗೀಗ ಪೊಲೀಸ್ ಅಧಿಕಾರಿಗಳು ಪ್ರಶ್ನಾರ್ಹ ಹಿನ್ನೆಲೆಯುಳ್ಳಂತಹ ವ್ಯಕ್ತಿಗಳೊಂದಿಗೆ ಬಾರ್, ರೆಸ್ಟೋರೆಂಟ್‌ಗಳಲ್ಲಿ ಕುಳಿತು ತಿಂದು–ಕುಡಿಯುವುದು, ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ ಬಿಂಬಿಸಿಕೊಳ್ಳುವುದು ಪೊಲೀಸ್ ಇಲಾಖೆಗೆ ಒಪ್ಪುವಂತಹದ್ದಲ್ಲ. ಸಾಮಾನ್ಯ ಜನ ಯಾರ ಮೇಲೆ ದೂರು ನೀಡಲು ಬಯಸುತ್ತಾರೋ ಅವರ ಜೊತೆ ಪೊಲೀಸರು ಕುಡಿದು, ಮೋಜು–ಮಸ್ತಿ ಮಾಡುತ್ತಿದ್ದರೆ ಅವರ ಬಗ್ಗೆ ಸಾರ್ವಜನಿಕರಲ್ಲಿ ನಂಬಿಕೆ ಹುಟ್ಟುವುದಾದರು ಹೇಗೆ?

ಎರಡನೆಯದಾಗಿ ಕಾನೂನು ಪಾಲಕರಿಗೆ, ಕಾನೂನು ಧಿಕ್ಕರಿಸುವವರಿಂದ ಸನ್ಮಾನ, ಸತ್ಕಾರವೂ ಕಾರಣ. ಪ್ರತೀ ಭಾರೀ ನಗರಕ್ಕೆ ಹೊಸ ಪೊಲೀಸ್ ಅಧಿಕಾರಿ ಬಂದು, ಅಧಿಕಾರ ವಹಿಸಿಕೊಂಡಾಗ ಅವರನ್ನು ಮೊದಲು ಸ್ವಾಗತಿಸಿ, ಸನ್ಮಾನಿಸಿ, ಸತ್ಕರಿಸುವವರು ಹೆಚ್ಚಾಗಿ ನಾಗರಿಕ ಕಾನೂನು ಉಲ್ಲಂಘಿಸುವವರೇ ಆಗಿದ್ದಾರೆ.

ಒಂದು ಕೆಟ್ಟ ಸಂಗತಿ ಎಂದರೆ, ಈಗೀಗ ಪೊಲೀಸ್ ಅಧಿಕಾರಿಗಳು ಪ್ರಶ್ನಾರ್ಹ ಹಿನ್ನೆಲೆಯುಳ್ಳಂತಹ ವ್ಯಕ್ತಿಗಳೊಂದಿಗೆ ಬಾರ್, ರೆಸ್ಟೋರೆಂಟ್‌ಗಳಲ್ಲಿ ಕುಳಿತು ತಿಂದು–ಕುಡಿಯುವುದು, ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ ಬಿಂಬಿಸಿಕೊಳ್ಳುವುದು ಪೊಲೀಸ್ ಇಲಾಖೆಗೆ ಒಪ್ಪುವಂತಹದ್ದಲ್ಲ.

ಸಾಮಾನ್ಯ ಜನ ಯಾರ ಮೇಲೆ ದೂರು ನೀಡಲು ಬಯಸುತ್ತಾರೋ ಅವರ ಜೊತೆಯೇ ಪೊಲೀಸರು ಕುಡಿದು, ಮೋಜು–ಮಸ್ತಿ ಮಾಡುತ್ತಿದ್ದರೆ ಅವರ ಬಗ್ಗೆ ಸಾರ್ವಜನಿಕರಲ್ಲಿ ನಂಬಿಕೆ ಹುಟ್ಟುವುದಾದರು ಹೇಗೆ?

ಸಣ್ಣಪುಟ್ಟ ಹಲ್ಲೆ, ಗಲಾಟೆ–ಗದ್ದಲಗಳಂತಹ ಪ್ರಕರಣಗಳು ಹೆಚ್ಚಿದಂತೆ ನಾಗರಿಕರು ಏನು ಮಾಡಬೇಕು? ನಾವು ಪೊಲೀಸರಂತೆ ಬಾಡಿ ಕ್ಯಾಮ್‌ಗಳನ್ನು ಧರಿಸುವುದಕ್ಕೆ ಶುರು ಮಾಡಬೇಕೆ? ಆ ರೀತಿ ನಮಗೆ ನ್ಯಾಯ ದೊರೆಯದಿದ್ದರೆ ಸಾಮಾಜಿಕ ಜಾಲತಾಣಗಳಲ್ಲಿ ನಾವು ಆ ವೀಡಿಯೋಗಳನ್ನು ಹಾಕಿ ರೌಡಿಗಳ ಅಟ್ಟಹಾಸದ ಬಗ್ಗೆ ಎಚ್ಚರಿಸಬಹುದು.

'ರೌಡಿ ಪ್ರತಿಬಂಧಕ ದಳ'ವನ್ನು ಪುನಃ ತರುವ ಸಮಯ ಈಗ ಬಂದಿದೆ ಆದರೆ, ಅದು ಪೊಲೀಸರು ನಿತ್ಯವೂ ನಗರದಾದ್ಯಂತ ಗಸ್ತು ತಿರುಗುವಂತಹ ನಿರಂತರ ಪ್ರಕ್ರಿಯೆ ಆಗಿರಬೇಕು.

1990ರ ದಶಕದ ಆರಂಭದಲ್ಲಿ, ಮೈಸೂರಲ್ಲಿ ರೌಡಿಗಳ ಹಾವಳಿ ಹೆಚ್ಚಾಗಿತ್ತು. ಆಗ, 1993ರಲ್ಲಿ ಚಾಮರಾಜ ಜೋಡಿ ರಸ್ತೆಯ ಗಾಯತ್ರಿ ಚಿತ್ರಮಂದಿರದ ಬಳಿ ಇಬ್ಬರು ಕಾರ್ಯನಿರತ ಪೇದೆಗಳ ಮೇಲೆ ಪುಂಡರ ದಾಳಿ ನಡೆದಿತ್ತು.

ಪರಿಸ್ಥಿತಿಯ ಗಂಭೀರತೆ ಅರಿತಂತಹ ಆಗಿನ ಮೈಸೂರು ನಗರ ಪೊಲೀಸ್ ಆಯುಕ್ತರಾಗಿದ್ದ ಹೆಚ್.ಆರ್. ಕಸ್ತೂರಿ ರಂಗನ್ ಅವರು ಖಡಕ್ ಪೊಲೀಸ್ ಇನ್ಸ್‌ಪೆಕ್ಟರ್ ಕೆ.ಎಸ್. ತಮ್ಮಯ್ಯನವರ ನೇತೃತ್ವದಲ್ಲಿ ರೌಡಿ ಪ್ರತಿಬಂಧಕದಳ (Anti-Rowdy Squad-ARS) ವನ್ನು ರಚಿಸಿದರು.

ಆಗ, ಪೊಲೀಸ್ ವಶದಿಂದ ತಪ್ಪಿಸಿಕೊಂಡು 'ಪರಾರಿ' ಆಗಲು ಯತ್ನಿಸಿದ ರೌಡಿಶೀಟರ್ ಲಕ್ಷ್ಮಣ ಅಲಿಯಾಸ್ 'ಚಿಂಪಾಂಜಿ' ಹಳೆ ಸಂತೇಪೇಟೆ ಪ್ರದೇಶದಲ್ಲಿ ಎನ್‌ಕೌಂಟರ್‌ಗೆ ಬಲಿಯಾದ.

ನಾವು ಪತ್ರಕರ್ತರು, ARS ಎಂದು ಕರೆಯುತ್ತಿದ್ದ ಆ ಪಡೆಯು ರೌಡಿಗಳ, ಅದರಲ್ಲೂ ರೌಡಿಗಳಾಗಬೇಕೆಂದಿದ್ದವರ ಎದೆಯಲ್ಲಿ ನಡುಕ ಸೃಷ್ಟಿಸಿತು.

ಎರಡೇ ವರ್ಷಗಳಲ್ಲಿ ರೌಡಿಗಳು, ಪೋಲಿ–ಪಟಾಲಂಗಳು ಪೂರ್ತಿಯಾಗಿ ತಣ್ಣಗಾದರು. ನಂತರದ ದಿನಗಳ ರೌಡಿ ಪ್ರತಿಬಂಧಕ ದಳವನ್ನು ನಗರ ಅಪರಾಧ ದಳ (ಸಿಸಿಬಿ) ವಿಭಾಗದಲ್ಲಿ ಸೇರ್ಪಡೆಗೊಳಿಸಲಾಗಿತ್ತು. ಈಗ ಅದು ನಿಷ್ಕ್ರಿಯವಾಗಿದೆ. ನಮ್ಮ ಮೈಸೂರು ನಗರ ಪೊಲೀಸ್ ಆಯುಕ್ತರಾದ ರಮೇಶ್ ಬಾನೋತ್ ಅವರು ಅದಕ್ಕೆ ಮರು ಜೀವ ನೀಡಬಹುದೇ?

ಒಂದು ವೇಳೆ ಹಾಟ್‌ಲೈನ್‌ನೊಂದಿಗೆ ಪೊಲೀಸ್ ಕಮಿಷನರ್ 'ಅಲ್ಟ್ರಾಲೈಟ್' ರೌಡಿ ಪ್ರತಿಬಂಧಕ ದಳ ರಚನೆ ಮಾಡಿದ್ದೇ ಆದರೆ ಈ ಪುಡಿ ರೌಡಿಗಳಿಗೆ ಹಿರಿಯ ನಾಗರಿಕರು ಹಾಗೂ ಸಾಮಾನ್ಯ ಜನರು ಹೆದರಬೇಕಾದಂತಹ ಪರಿಸ್ಥಿತಿ ಬರುವುದಿಲ್ಲ. ರೌಡಿಗಳ ಅಟ್ಟಹಾಸಕ್ಕೆ ಇದುವೇ ಅಂತ್ಯ ಹಾಡುವ ತಕ್ಕ ವಿಧಾನವಾಗಬಲ್ಲದು.

ಮೇಲಾಗಿ ರೌಡಿ ಪ್ರತಿಬಂಧಕದಳವನ್ನು ಪೊಲೀಸರು ಸಮರ್ಥ ರೀತಿಯಲ್ಲಿ ಪುನರ್‌ರಚನೆ ಮಾಡಿದ್ದೇ ಆದಲ್ಲಿ ಮೈಸೂರಿಗರಿಗೆ ಸುರಕ್ಷತೆ ಭರವಸೆಯೊಂದಿಗೆ ಪೊಲೀಸರ ಮೇಲೆ ವಿಶ್ವಾಸ ಮೂಡಲಿದೆ.

ರೌಡಿ ಪ್ರತಿಬಂಧಕ ದಳ; ಮೈಸೂರೇತರ ಅಧಿಕಾರಿಗಳ ಒಳಗೊಂಡಿರಲಿ...!?


ಮೈಸೂರಿನ ಕೆಲವು ಪೊಲೀಸ್ ಅಧಿಕಾರಿಗಳು ಮತ್ತು ಕಾನೂನು ಉಲ್ಲಂಘಿಸುವವರ (ಸಮಾಜ ಘಾತುಕರ) ನಡುವೆ ಸುದೀರ್ಘ ಕಾಲದ ಬಲವಾದ ಹಾಗೂ ಪರಸ್ಪರ ಲಾಭದಾಯಕ ಸಂಬಂಧವಿದೆ ಎಂಬ ಹಲವಾರು ಸಾಂದರ್ಭಿಕ ವರದಿಗಳನ್ನು ಸರ್ಕಾರ ಪರಿಗಣಿಸಿ, ಮೈಸೂರು ಜಿಲ್ಲೆಯ ಹೊರತಾದ ಅಧಿಕಾರಿಗಳನ್ನು ರೌಡಿ ಪ್ರತಿಬಂಧ ದಳಕ್ಕೆ (ಎಆರ್‌ಎಸ್) ನಿಯೋಜಿಸಬೇಕು. ಇಂತಹ ವಿಚಾರಗಳನ್ನು ಪರಿಗಣಿಸದೇ ಹೋದಲ್ಲಿ ಎಆರ್‌ಎಸ್ (ಪುನರ್‌ರಚನೆ) ಉದ್ದೇಶ ಸಫಲವಾಗದು.

Email: vikram@starofmysore.com

ಇಂದು, ನಾಳೆ ಮೈಸೂರಲ್ಲಿ 'ಬೌದ್ಧ ಮಹಾ ಸಮ್ಮೇಳನ'

ಮೈಸೂರು, ಅ.13– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಎರಡು ದಿನಗಳ 'ಬೌದ್ಧ ಮಹಾ ಸಮ್ಮೇಳನ'ಕ್ಕೆ ಮಂಗಳವಾರ(ಅ.14) ಚಾಲನೆ ದೊರಕಲಿದೆ.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಬೌದ್ಧ ಧಮ್ಮ ಸ್ವೀಕರಿಸಿ 70 ವರ್ಷ ಸಂದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಭಿಕ್ಖು ಸಂಘ, ರಾಜ್ಯ ಬೌದ್ಧ ಸಂಘ–ಸಂಸ್ಥೆಗಳು, ಅಂಬೇಡ್ಕರ್‌ವಾದಿ ಸಂಘ–ಸಂಸ್ಥೆಗಳು ಹಾಗೂ ವಿಶ್ವಮೈತ್ರಿ ಬುದ್ಧವಿಹಾರದ ಸಹಯೋಗದಲ್ಲಿ ಮಾನವ ಮೈತ್ರಿಯ ಪಯಣ ಆಶಯದೊಂದಿಗೆ ನಾಳೆ(ಅ.14) ಮತ್ತು ಅ.15ರಂದು ನಡೆಯಲಿರುವ ಅಂತಾರಾಷ್ಟ್ರೀಯ ಬೌದ್ಧ ಮಹಾ ಸಮ್ಮೇಳನದಲ್ಲಿ 30 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ.



ಬುದ್ಧ



ಅಂಬೇಡ್ಕರ್

ಮಂಗಳವಾರ ಬೆಳಗ್ಗೆ 8ಕ್ಕೆ ಬುದ್ಧನೆಡೆಗೆ ಒಂದು ಸಾರ್ಥಕ ನಡಿಗೆ ಶೀರ್ಷಿಕೆಯಡಿ ಪುರಭವನ ಆವರಣದ ಅಂಬೇಡ್ಕರ್ ಪ್ರತಿಮೆಯಿಂದ ಮಹಾರಾಜ ಕಾಲೇಜು ಮೈದಾನದವರೆಗೆ ಧಮ್ಮ ಪಯಣ ನಡೆಯಲಿದ್ದು, ಬೆಳಗ್ಗೆ 10.35ರಿಂದ ನಳಂದ ವೇದಿಕೆ, ಸಾಮ್ರಾಟ್ ಅಶೋಕ ವೇದಿಕೆ, ರಾಜ ಕಾನಿಷ್ಕ ವೇದಿಕೆ, ರಾಜ ಹರ್ಷವರ್ಧನ ವೇದಿಕೆ, ಬಾಬಾ ಸಾಹೇಬ್ ಅಂಬೇಡ್ಕರ್ ವೇದಿಕೆಗಳಲ್ಲಿ ವಿವಿಧ ಬುದ್ಧವಿಹಾರಗಳ ಭಂತೇಜಿಗಳು ಹಾಗೂ ಗಣ್ಯರ ಸಮ್ಮುಖದಲ್ಲಿ ಕಾರ್ಯಕ್ರಮಗಳು ನಡೆಯಲಿವೆ.

ಕಾಂಚಾ ಈಳಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಪ್ರೊ.ರಹಮತ್ ತರೀಕೆರೆ, ಬಂಜಗೆರೆ ಜಯಪ್ರಕಾಶ್, ಪ್ರೊ.ಅಪ್ಪಗೆರೆ ಸೋಮಶೇಖರ್, ಕೆ.ದೀಪಕ್, ನಾಗಸಿದ್ಧಾರ್ಥ ಹೊಲೆಯಾರ್, ಎಚ್.ಎಸ್. ಅನುಪಮಾ, ಅಶೋಕ್, ಪ್ರೊ.ಸೋಸಲೆ ಚಿನ್ನಸ್ವಾಮಿ, ಮಲ್ಲಿಕಾರ್ಜುನ ಕನಕಪುರ, ಸೋಸಲೆ ಗಂಗಾಧರ್, ಅಮೃತ ಅತ್ರಾಡಿ, ವಡ್ಡಗೆರೆ ನಾಗರಾಜಯ್ಯ, ಡಾ.ವಿಠ್ಠಲ್ ವಗ್ಗನ್, ಪ್ರೊ.ಸೋಮಶೇಖರ್, ಡಾ.ಎಚ್.ಟಿ. ಪೋತೆ, ಪ್ರಕಾಶ್ ರಾಜ್, ತಲಕಾಡು ರಂಗೇಗೌಡ, ಹರ್ಷಕುಮಾರ್ ಕುಗ್ವೆ, ಡಾ.ಕೃಷ್ಣಮೂರ್ತಿ ಚಮರಂ, ಡಾ.ಶಿವಕುಮಾರ, ಜಯದೇವಿ ತಾಯಿ ಲಿಗಾಡೆ, ಚೇತನ್ ಅಹಿಂಸಾ, ಪ್ರೊ.ಹರಿರಾಮ್, ಡಾ.ಜಿ.ಶ್ರೀನಿವಾಸ್, ಡಾ.ಹ.ರಾ. ಮಹೇಶ್, ಡಾ.ನಟರಾಜ್ ಬೂದಾಳ್, ಧರಣಿದೇವಿ ಮಾಲಗತ್ತಿ ಸೇರಿದಂತೆ ಖ್ಯಾತ ಸಾಹಿತಿಗಳು, ಹೋರಾಟಗಾರರು, ಬೌದ್ಧ ಚಿಂತಕರು ಗೋಷ್ಠಿಗಳಲ್ಲಿ ಭಾಗವಹಿಸಿ, ವಿಚಾರ ಮಂಡಿಸಲಿದ್ದಾರೆ.

ಅ.15ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಗೃಹ ಸಚಿವ ಡಾ.ಜಿ. ಪರಮೇಶ್ವರ, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಸಚಿವರಾದ ಕೆ.ಹೆಚ್.ಮುನಿಯಪ್ಪ ಸತೀಶ್ ಜಾರಕಿಹೊಳಿ, ಪ್ರಿಯಾಂಕ ಖರ್ಗೆ, ಕೆ.ವೆಂಕಟೇಶ್ ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ.



ಪುರುಷೋತ್ತಮ್

ವಸ್ತುಪ್ರದರ್ಶನ, ಪುಸ್ತಕ ಮೇಳ, ವಿದ್ಯಾರ್ಥಿಗಳಿಗೆ ಪ್ರಬಂಧ, ಚಿತ್ರಕಲಾ ಸ್ಪರ್ಧೆ, ಗಾಯನ, ನಾಟಕ ಪ್ರದರ್ಶನ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿದೆ. ಬೌದ್ಧ ಮಹಾ ಸಮ್ಮೇಳನಕ್ಕೆ ಬೃಹತ್ ವೇದಿಕೆ, ಸಭಿಕರಿಗೆ ವಾಟರ್ ಪ್ರೂಫ್ ಜರ್ಮನ್ ಟೆಂಟ್ ಹಾಗೂ ಆಸನ ವ್ಯವಸ್ಥೆ ಮಾಡಲಾಗಿದೆ.

ಆಹಾರ ವಿತರಣೆಗೆ ಸೂಕ್ತ ಕೌಂಟರ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 14 ಮಂಗಳವಾರ 2025

46

ಸಂಪುಟ: 46 | ಸಂಚಿಕೆ: 177 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ವಿಕ್ರಂ ಮುತ್ತಣ್ಣ ಅವರ 'ಬಿಚ್ಚುನುಡಿ'ಯಲ್ಲಿ 'ರೌಡಿ ಪ್ರತಿಬಂಧಕ ದಳ ಮರು ಸ್ಥಾಪಿಸಬೇಕಿದೆ!' ವಿಶೇಷ ಲೇಖನ ಮೊದಲು ಡಿ.16, 2023ರಲ್ಲಿ ಪ್ರಕಟವಾಗಿತ್ತು. ಅದನ್ನು ಇಂದು ಮರು ಪ್ರಕಟಿಸುತ್ತಿದ್ದೇವೆ. –ಸಂ.

■ ಪುಟ–4

ವರಿಷ್ಠರ ಆಶೀರ್ವಾದ, ಶಾಸಕರ ಬೆಂಬಲ ಇದ್ದರೆ

ಮುಖ್ಯಮಂತ್ರಿ ಆಗಬಹುದು!

■ ಡಿಸಿಎಂ ಡಿ.ಕೆ. ಶಿವಕುಮಾರ್‌ಗೆ ಸಿಎಂ ಸಿದ್ದರಾಮಯ್ಯ ಟಾಂಗ್ ■ ಶಾಸಕರ ಬೆಂಬಲವಿಲ್ಲದವರು ಶಾಸಕಾಂಗ ಪಕ್ಷದ ನಾಯಕರಾಗಲು ಸಾಧ್ಯವಿಲ್ಲ; ಕುಹಕ ನುಡಿ



ಬೆಂಗಳೂರು, ಅ.13(ಕೆಎಂಶಿ)– ಕಾಂಗ್ರೆಸ್ ವರಿಷ್ಠರ ಆಶೀರ್ವಾದದ ಜೊತೆಗೆ ಶಾಸಕರ ಬೆಂಬಲ ಹೊಂದಿದವರು ಮಾತ್ರ ಮುಖ್ಯಮಂತ್ರಿಯಾಗಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲು ಶಾಸಕರ ಸಂಖ್ಯಾಬಲ ಅಗತ್ಯವಿಲ್ಲ. ಹೈಕಮಾಂಡ್ ಕೃಪೆ ಇದ್ದರೆ ಸಾಕು ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ನಾನು ಅವರ ಹೇಳಿಕೆಗೆ ಏನನ್ನೂ ಹೇಳುವುದಿಲ್ಲ. ಆದರೆ, ಶಾಸಕರ ಬೆಂಬಲ ಇಲ್ಲದೆ ಯಾರೂ ಶಾಸಕಾಂಗ ಪಕ್ಷದ ನಾಯಕರಾಗಲು ಸಾಧ್ಯವಿಲ್ಲ. ಇದು ಎಲ್ಲರಿಗೂ ತಿಳಿದಿರುವ ವಿಚಾರ ಅಲ್ಲವೇ ಎಂದು ಕುಹಕವಾಗಿ ನುಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿ ನಮ್ಮ ಕಾಂಗ್ರೆಸ್ ವರಿಷ್ಠರು ತೆಗೆದುಕೊಳ್ಳುವ ನಿರ್ಧಾರ ಅಂತಿಮ ಎಂದರು.

ಆದರೆ, ಶಾಸಕರ ಬೆಂಬಲ ಇಲ್ಲದೇ ಯಾರೂ ಮುಖ್ಯಮಂತ್ರಿ ಆಗುವುದಕ್ಕೆ ಸಾಧ್ಯವಿಲ್ಲ. ಬಹುಮತದ ಜೊತೆಗೆ ವರಿಷ್ಠರ ಕೃಪೆಯೂ ಇರಬೇಕು. ನವೆಂಬರ್‌ನಲ್ಲಿ ರಾಜ್ಯ ಕಾಂಗ್ರೆಸ್‌ನಲ್ಲಿ ಕ್ರಾಂತಿ ಆಗುತ್ತದೆ ಎಂಬ ವದಂತಿಗಳನ್ನು ತಳ್ಳಿಹಾಕಿದ ಮುಖ್ಯಮಂತ್ರಿ, ಯಾವ ಕ್ರಾಂತಿಯೂ ಇಲ್ಲ, ಭ್ರಾಂತಿಯೂ ಇಲ್ಲ.

ಕಳೆದ ಎರಡೂವರೆ ವರ್ಷಗಳಿಂದ ಒಳ್ಳೆ ಆಡಳಿತ ನೀಡಿದ್ದು, ಮುಂದಿನ ಅವಧಿಗೂ ಒಳ್ಳೆ ಕಾರ್ಯಕ್ರಮ ನೀಡಿ ಜನರ ಮುಂದೆ ಹೋಗುತ್ತೇವೆ.

ಸಚಿವರ ಔತಣಕೂಟ ವಿಶೇಷವೇನಲ್ಲ. ದಸರಾ, ದೀಪಾವಳಿ ಪ್ರಯುಕ್ತ ಸಹೋದ್ಯೋಗಿಗಳ ಜೊತೆ ಒಂದೆಡೆ ಕುಳಿತು ಊಟ ಮಾಡುವುದು ಅಷ್ಟೇ.

ಡಿನ್ನರ್ ಪಾರ್ಟಿಗೂ ಸಂಪುಟ ಪುನರ್ ರಚನೆಗೂ ಯಾವುದೇ ಸಂಬಂಧವಿಲ್ಲ. ಆದರೆ, ನಿಮಗೆ (ಮಾಧ್ಯಮಗಳಿಗೆ) ಮತ್ತು ಬಿಜೆಪಿಯವರಿಗೆ ಇದು ವಿಶೇಷವಾಗಿ ಕಾಣುತ್ತಿದೆ.


■ 9ನೇ ಪುಟಕ್ಕೆ

ಊಟಕ್ಕೆ ಸೇರೋದು ಅಪರಾಧವಾ...

ಬೆಂಗಳೂರು, ಅ.13(ಕೆಎಂಶಿ)– ಸಚಿವ ಸಹೋದ್ಯೋಗಿಗಳು ಆಗಾಗ್ಗೆ ಊಟಕ್ಕೆ ಸೇರುತ್ತೇವೆ. ಊಟಕ್ಕೆ ಸೇರುವುದು ದೊಡ್ಡ ಅಪರಾಧವೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಪ್ರಶ್ನಿಸಿದ್ದಾರೆ. ರಾಜ್ಯ ಪ್ರವಾಸಕ್ಕೆ ತೆರಳುವ ಮುನ್ನ ಕಿತ್ತೂರು ಉತ್ಸವ ಜ್ಯೋತಿಗೆ ಚಾಲನೆ ನೀಡಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ತಮ್ಮ ಸಂಪುಟ ಸದಸ್ಯರಿಗಾಗಿ ಭೋಜನ ಕೂಟ ಆಯೋಜಿಸಲಾಗಿದೆ. ಇದರಲ್ಲಿ ತಪ್ಪೇನು ಎಂದು ಪ್ರತಿಕ್ರಿಯಿಸಿದರು.

ಶಾಸಕರ ಅಭಿಪ್ರಾಯ ಪಡೆದೇ ಹೈಕಮಾಂಡ್ ಸಿಎಂ ಆಯ್ಕೆ ಮಾಡುತ್ತೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಗೃಹ ಸಚಿವ ಡಾ.ಜಿ. ಪರಮೇಶ್ವರ್ ತಿರುಗೇಟು



ಡಾ.ಜಿ.ಪರಮೇಶ್ವರ್

ಬೆಂಗಳೂರು, ಅ.13– ಶಾಸಕರ ಅಭಿಪ್ರಾಯ ಪಡೆದೇ ಹೈಕಮಾಂಡ್ ಮುಖ್ಯಮಂತ್ರಿ ಆಯ್ಕೆ ಮಾಡುತ್ತದೆ ಎಂದು ಹೇಳುವ ಮೂಲಕ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ತಿರುಗೇಟು ನೀಡಿದ್ದಾರೆ.

ಸಿಎಂ ಆಯ್ಕೆಗೆ ಶಾಸಕರ ಬಲ ಬೇಡ ಹೈಕಮಾಂಡ್ ತೀರ್ಮಾನ ಸಾಕು ಎಂಬ ಡಿಸಿಎಂ ಡಿ.ಕೆ ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ನಮ್ಮಲ್ಲಿ ಒಂದು ನಿಯಮ ಇದೆ. ಒಂದು ಪಕ್ಷ ಆಯ್ಕೆ ಆದ ಮೇಲೆ ಸರ್ಕಾರ ಮಾಡುವಾಗ, ಸಿಎಲ್‌ಪಿ ಲೀಡರ್ ಅಂದರೆ ಮುಖ್ಯಮಂತ್ರಿಗಳ ನೇಮಕ ಮಾಡುವಾಗ ಶಾಸಕರ ಅಭಿಪ್ರಾಯ ಕೇಳಲು ಹೈಕಮಾಂಡ್‌ನಿಂದ ವೀಕ್ಷಕರು ಬರುತ್ತಾರೆ. ಅವರು ಶಾಸಕರ ಅಭಿಪ್ರಾಯ ಪಡೆದು ಹೈಕಮಾಂಡ್‌ಗೆ ತಿಳಿಸುತ್ತಾರೆ. ಇಂತಹವರ ಪರ ಇಷ್ಟು ಜನ ಇದ್ದಾರೆ ಎಂದು ಹೇಳುತ್ತಾರೆ. ಯಾರಿಗೆ ಸಿಎಂಗೆ ಮೆಜಾರಿಟಿ ಬಂದಿದೆ ಎಂದು ಆ ನಂತರ ಹೆಸರು ಘೋಷಣೆ ಮಾಡುತ್ತಾರೆ ಎಂದರು.

ಸಿದ್ದರಾಮಯ್ಯನವರನ್ನು ಎರಡು ಬಾರಿ ಆಯ್ಕೆ ಮಾಡಿದ್ದು ಇದೇ ರೀತಿಯಲ್ಲಿ. ಹಿಂದೆ ಎಸ್.ಎಂ.ಕೃಷ್ಣ ಅವರನ್ನು ಆಯ್ಕೆ ಮಾಡುವಾಗಲೂ ಇದೇ ರೀತಿಯಲ್ಲಿ ಮಾಡಿದ್ದೇವೆ. ಇವಾಗಲೂ ಕೂಡ ಶಾಸಕರ ಅಭಿಪ್ರಾಯ ಪಡೆಯಬೇಕೆಂಬುದು ಪದ್ಧತಿ. ಇಲ್ಲ ಹೈಕಮಾಂಡ್ ತೀರ್ಮಾನ ಮಾಡುತ್ತೇವೆ ಎಂದರೆ ಅದು ಅವರಿಗೆ ಬಿಟ್ಟಿದ್ದು. ಅದಕ್ಕೇ ನಾವು ಹೈಕಮಾಂಡ್ ತೀರ್ಮಾನ ಅನ್ನೋದು. ಹೈಕಮಾಂಡ್ ತೀರ್ಮಾನಕ್ಕೆ ಎಲ್ಲರೂ ಗೌರವ ಕೊಡುತ್ತಾರೆ ಎಂದರು.

ದೇಶದ ಮೊದಲ ಆದಾಯ ಸಮೀಕ್ಷೆ ಫೆಬ್ರವರಿಯಲ್ಲಿ ಆರಂಭ

ನವದೆಹಲಿ: ರಾಜ್ಯದಲ್ಲಿ ಜಾತಿಗಣತಿ ಹೊತ್ತಲ್ಲೇ ಮುಂದಿನ ವರ್ಷದ ಫೆಬ್ರವರಿಯಿಂದ ಕೇಂದ್ರ ಸರ್ಕಾರ ದೇಶಾದ್ಯಂತ ಆದಾಯ ಸಮೀಕ್ಷೆ ಕಾರ್ಯ ಆರಂಭಿಸಲಿದೆ. ಇದೇ ಮೊದಲ ಬಾರಿಗೆ ಮನೆ ಮಂದಿಯ ಜೀವನ ಸ್ಥಿತಿ, ಆದಾಯ, ಖರ್ಚಿನ ಡೇಟಾ ಸಂಗ್ರಹಿಸಲಿದ್ದು, ದೇಶದ ಬಡತನ ಸ್ಥಿತಿಗತಿ ಬಗ್ಗೆ ತಿಳಿದು ಬರಲಿದೆ.


ಕೇಂದ್ರ ಸರ್ಕಾರದ ಅಂಕಿ ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಅಧೀನದಲ್ಲಿರುವ ರಾಷ್ಟ್ರೀಯ ಅಂಕಿ–ಅಂಶ ಕಚೇರಿ ವತಿಯಿಂದ ರಾಷ್ಟ್ರೀಯ ಗೃಹ ಆದಾಯ ಸಮೀಕ್ಷೆ ಪ್ರಾರಂಭಿಸಲು ನಿರ್ಧರಿಸಲಾಗಿದೆ.

ಈ ಸಮೀಕ್ಷೆಯು ಮನೆಯ ಆದಾಯವನ್ನು ಅಳೆಯುವತ್ತ ಗಮನಹರಿಸಿದ ಮೊದಲ ಪ್ಯಾನ್–ಇಂಡಿಯಾ ಸಮೀಕ್ಷೆಯಾಗಿದ್ದು, ಭಾರತದ ಸಾಮಾಜಿಕ–ಆರ್ಥಿಕ ಅಂಕಿಅಂಶಗಳ ವ್ಯವಸ್ಥೆಯಲ್ಲಿ ದೀರ್ಘಕಾಲದ ದತ್ತಾಂಶ ಅಂತರವನ್ನು ತೋರುವ ಮಹತ್ವದ ಹೆಜ್ಜೆ ಇದಾಗಿದೆ.

ರಾಷ್ಟ್ರೀಯ ಗೃಹ ಆದಾಯ ಸಮೀಕ್ಷೆ ಜನರ ಜೀವನ ಪರಿಸ್ಥಿತಿಗಳು ಮತ್ತು ಆದಾಯ ಮತ್ತು ವೆಚ್ಚದ ಮಾದರಿಗಳ ಮಾಹಿತಿಯನ್ನು ಒದಗಿಸುತ್ತದೆ. ಪ್ರಪಂಚದಾದ್ಯಂತದ ದೇಶಗಳಲ್ಲಿನ ಸಮುದಾಯಗಳಲ್ಲಿನ ಬಡತನ

■ 9ನೇ ಪುಟಕ್ಕೆ

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ: ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ ಸರ್ಕಾರ



ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಸಂಗ್ರಹಿಸಲಾಗುತ್ತಿರುವ ದತ್ತಾಂಶ ಸಂರಕ್ಷಣೆಯನ್ನು ಹೇಗೆ ಮಾಡಲಾಗುತ್ತಿದೆ ಎಂಬುದರ ವಿವರಗಳನ್ನು ವಿಸ್ತೃತ ಪ್ರಮಾಣಪತ್ರದ ಮೂಲಕ ಕೋರ್ಟ್‌ಗೆ ಈಗಾಗಲೇ ಸಲ್ಲಿಸಲಾಗಿದೆ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ–1995ರ ಕಲಂ 9ಕ್ಕೆ ತರಲಾಗಿರುವ ತಿದ್ದುಪಡಿ ರದ್ದುಗೊಳಿಸುವಂತೆ ಕೋರಿ ಎಚ್.ಕಾಂತರಾಜ ಸಮಿತಿ ವರದಿಯನ್ನು ಆಕ್ಷೇಪಿಸಿ, ಬೀದರ್‌ನ ಶಿವರಾಜ್ ಕಣಶೆಟ್ಟಿ ಮತ್ತಿತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಮಾಜ ಸಂಪರ್ಕ ವೇದಿಕೆ ಪರ ಹಾಜರಿದ್ದ ಹೈಕೋರ್ಟ್ ವಕೀಲ ಕೆ.ಅಭಿಷೇಕ್, ಕಳೆದ ಸೆಪ್ಟೆಂಬರ್ 25ರಂದು ನಡೆದ ವಿಚಾರಣೆ ವೇಳೆ ನ್ಯಾಯಪೀಠ, ಸಮೀಕ್ಷೆ ಮುಂದುವರಿಕೆಗೆ ಅನುಮತಿಸಿತ್ತು ಸಂಗ್ರಹಿಸಲಾಗುವ ದತ್ತಾಂಶಗಳ ಸಂರಕ್ಷಣೆಯ ಕುರಿತು ಪ್ರಮಾಣ ಪತ್ರ ಸಲ್ಲಿಸಬೇಕು ಎಂದು ಆಯೋಗಕ್ಕೆ ನಿರ್ದೇಶಿಸಿತ್ತು. ಆದರೆ, ಈತನಕ ಸರ್ಕಾರ ಪ್ರಮಾಣಪತ್ರ ಸಲ್ಲಿಸಿಲ್ಲ ಅಥವಾ ಅದರ ಪ್ರತಿಯನ್ನು ನಮಗೆ ಒದಗಿಸಿಲ್ಲ ಎಂದು ಆಕ್ಷೇಪಿಸಿದರು. ಇದಕ್ಕೆ ನ್ಯಾಯಪೀಠ, ಪ್ರಮಾಣಪತ್ರ ಸಲ್ಲಿಸಲು ಆಯೋಗಕ್ಕೆ ಒಂದು ವಾರ ಕಾಲಾವಕಾಶ ನೀಡಲಾಗಿತ್ತಲ್ಲವೇ? ಪರಿಶೀಲನೆ

■ 9ನೇ ಪುಟಕ್ಕೆ

ಹೆಚ್.ಡಿ.ದೇವೇಗೌಡರು ಆಸ್ಪತ್ರೆಯಿಂದ ಡಿಸ್ಚಾರ್ಜ್




ಬೆಂಗಳೂರು, ಅ.13(ಕೆಎಂಶಿ)– ಆರೋಗ್ಯದಲ್ಲಿ ಚೇತರಿಕೆ ಹಿನ್ನೆಲೆಯಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಆಸ್ಪತ್ರೆಯಿಂದ ಮನೆಗೆ ಹಿಂತಿರುಗಿದ್ದಾರೆ.

ಜ್ವರದಿಂದ ಬಳಲುತ್ತಿದ್ದ ಅವರು ಕಳೆದ ಒಂದು ವಾರದಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು.

ಇದೀಗ ಆರೋಗ್ಯದಲ್ಲಿ ಚೇತರಿಕೆ ಹಿನ್ನೆಲೆಯಲ್ಲಿ ವೈದ್ಯರ ಸಲಹೆ ಮೇರೆಗೆ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ದೀಪಾವಳಿ ಹಬ್ಬಕ್ಕೆ 2500 ಹೆಚ್ಚುವರಿ ಬಸ್ ವ್ಯವಸ್ಥೆ



ಬೆಂಗಳೂರು: ದೀಪಾವಳಿ ಹಬ್ಬಕ್ಕೆ ಹಬ್ಬಕ್ಕಾಗಿ ಊರಿಗೆ ತೆರಳುವ ಪ್ರಯಾಣಿಕರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ರಾಜ್ಯಾದ್ಯಂತ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಿದೆ.

ಸೆಪ್ಟೆಂಬರ್ 17ರಿಂದ 20 ರವರೆಗೆ ಹೆಚ್ಚುವರಿ ಬಸ್‌ಗಳ ಕಾರ್ಯಾಚರಣೆಯನ್ನು ಹಮ್ಮಿಕೊಂಡಿದೆ. ಮೆಜೆಸ್ಟಿಕ್‌ನಿಂದ ರಾಜ್ಯದ ವಿವಿಧ

■ 9ನೇ ಪುಟಕ್ಕೆ

ಮುಖ್ಯಮಂತ್ರಿಗಳ ಔತಣಕೂಟದಲ್ಲಿ ಸಂಪುಟ ಪುನರ್‌ರಚನೆ, ಪಕ್ಷ ಸಂಘಟನೆ ಪ್ರಸ್ತಾಪ

● ನಾಯಕತ್ವ ಬದಲಾವಣೆ ಬಗ್ಗೆ ಚಿಂತೆ ಮಾಡಬೇಡಿ; ಅಭಿವೃದ್ಧಿಯತ್ತ ಗಮನಹರಿಸಿ ● ನಿಮ್ಮ ಬಗ್ಗೆ ಶಾಸಕರಿಗೆ ಅಸಮಾಧಾನವಿದೆ; ಕೆಲ ಸಚಿವರಿಗೆ ಸಿಎಂ ಕಿವಿಮಾತು ● ಡಿಸಿಎಂ ಡಿ.ಕೆ.ಶಿವಕುಮಾರ್ ನಿರ್ಗಮನದ ಬಳಿಕ 'ಆಪ್ತ' ಸಮಾಲೋಚನೆ

ಬೆಂಗಳೂರು, ಅ.13– ಮುಖ್ಯಮಂತ್ರಿ ಬದಲಾವಣೆ ಹಾಗೂ ಸಂಪುಟ ಪುನಾರಚನೆ ಬಗ್ಗೆ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಆಯೋಜಿಸಿದ್ದ ಡಿನ್ನರ್ ಪಾರ್ಟಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಸಚಿವರಿಗೆ ಔತಣ ಕೂಟವೋ ಅಥವಾ ಬೀಳ್ಕೊಡುಗೆಯೋ ಎನ್ನುವ ಚರ್ಚೆಗೆ ಗ್ರಾಸವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಕಾವೇರಿ ನಿವಾಸದಲ್ಲಿ ಸಚಿವರುಗಳಿಗೆ ಆಯೋಜಿಸಿದ್ದ ಡಿನ್ನರ್ ಪಾರ್ಟಿಯಲ್ಲಿ ವೆರೈಟಿ ಊಟದ ಜೊತೆಗೆ ಪ್ರಸಕ್ತ ರಾಜಕೀಯ ಬೆಳವಣಿಗೆ ಬಗ್ಗೆ ಬಿಸಿ ಬಿಸಿ ಚರ್ಚೆಗಳು ನಡೆದಿವೆ. ಈ ವೇಳೆ ಸಿದ್ದರಾಮಯ್ಯನವರು ಸಚಿವರಿಗೆ ಕೆಲ ಕಿವಿಮಾತು ಹೇಳಿದ್ದಾರೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಪೂರ್ಣ ಆಗಬೇಕು. ಈ ಬಗ್ಗೆ ಜಿಲ್ಲೆಯ ಪ್ರತಿ ಬಗ್ಗೆ ನಿಗಾ ವಹಿಸಿ. ನಮ್ಮ ಸರ್ಕಾರದ ಅವಧಿಯಲ್ಲೇ ವರದಿ ಜಾರಿ ಮಾಡೋಣ. ಇದರಿಂದ ಎಲ್ಲಾ ವರ್ಗಗಳ ಬಡವರಿಗೆ ಶಕ್ತಿ ತುಂಬಿದಂತಾಗುತ್ತದೆ. ಇನ್ನು ಸಂಪುಟ ಪುನಾರಚನೆಗೆ ಸಾಕಷ್ಟು ಒತ್ತಡ ಇದೆ. ಕೆಲವರನ್ನು ಅನಿವಾರ್ಯವಾಗಿ, ಇನ್ನು ಕೆಲವರನ್ನು ನಿಷ್ಠುರವಾಗಿ ಸಂಪುಟದಿಂದ ಕೈಬಿಡಬೇಕಾಗಿದೆ ಎಂದ ಸಿದ್ದರಾಮಯ್ಯ, ಪಕ್ಷ ಸಂಘಟನೆ ಜವಾಬ್ದಾರಿ ನೀಡಿದರೆ ತೆಗೆದುಕೊಳ್ಳಲು ಸಿದ್ಧರಾಗಿ ಎಂದು ಸಚಿವರಿಗೆ ಹೇಳಿದ್ದಾರೆ. ಈ ಮೂಲಕ ಪರೋಕ್ಷವಾಗಿ ಸಂಪುಟ ಪುನಾರಚನೆ ಬಗ್ಗೆ ಸ್ಪಷ್ಟಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕೆಲ ಸಚಿವರ ಬಗ್ಗೆ ಶಾಸಕರು ಅಸಮಾಧಾನ ಹೊರ ಹಾಕಿರುವ ಬಗ್ಗೆಯೂ ಚರ್ಚಿಸಲಾಗಿದ್ದು, ಉಸ್ತುವಾರಿ ಮಂತ್ರಿಗಳು ಆ ಜಿಲ್ಲೆಯ ಶಾಸಕರನ್ನು ವಿಶ್ವಾಸಕ್ಕೆ ಪಡೆಯಿರಿ. ಕೆಲ ಸಚಿವರ ವಿರುದ್ಧ ಶಾಸಕರು ದೂರು ನೀಡಿದ್ದಾರೆ. ಆ ಜಿಲ್ಲೆಯ, ಕ್ಷೇತ್ರಗಳ ಕೆಲಸವನ್ನು ಅವರನ್ನೇ ಮುಂದಿಟ್ಟುಕೊಂಡು ಮಾಡಿ. ಇದರಿಂದ ಪಕ್ಷಕ್ಕೂ ಒಳ್ಳೆಯದು, ಸರ್ಕಾರಕ್ಕೂ ಒಳ್ಳೆಯದು ಅಂತ ಔತಣಕೂಟದಲ್ಲಿ ಸಂಪುಟ ಸಹೋದ್ಯೋಗಿಗಳಿಗೆ ಸಿಎಂ ಸಲಹೆ ಸೂಚನೆ ನೀಡಿದ್ದಾರಂತೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನ ತಮ್ಮ ಕಾವೇರಿ ನಿವಾಸದಲ್ಲಿ ಸೋಮವಾರ ಸಂಜೆ ಸಚಿವರುಗಳ ಡಿನ್ನರ್ ಮೀಟಿಂಗ್ ನಡೆಸಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಬಹುತೇಕ ಸಚಿವರು ಹಾಜರಿದ್ದರು.

ಪ್ರಮುಖ 6 ವಿಷಯಗಳ ಬಗ್ಗೆ ಚರ್ಚೆ: ಪ್ರಮುಖವಾಗಿ ಸರ್ಕಾರಿ ಆಸ್ತಿಗಳಲ್ಲಿ ಆರ್‌ಎಸ್‌ಎಸ್

■ 9ನೇ ಪುಟಕ್ಕೆ

ಮೈಸೂರಲ್ಲಿ ರೌಡಿ ಪ್ರತಿಬಂಧಕ ದಳ ಮತ್ತೆ ಅಸ್ತಿತ್ವಕ್ಕೆ

1993–94ರಲ್ಲಿ ಕಮಿಷನರ್ ಕಸ್ತೂರಿರಂಗನ್ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ದಳ; 1999ರ ನಂತರ ನಿಷ್ಕ್ರೀಯ

ಮೈಸೂರು, ಅ.13 (ಆರ್‌ಕೆ)– ರೌಡಿಗಳ ಅಟ್ಟಹಾಸ, ಪುಡಿ ರೌಡಿಗಳ ಹಾವಳಿ, ಕೊಲೆ, ಬೆದರಿಕೆ, ನಕಲಿ ಅಪಘಾತದ ಸೋಗಿನಲ್ಲಿ ದುಷ್ಕರ್ಮಿಗಳ ಸುಲಿಗೆ, ಡಕಾಯಿತಿ, ಅತ್ಯಾಚಾರ, ರಿಯಲ್ ಎಸ್ಟೇಟ್ ಮಾಫಿಯಾ ದಂಧೆಯಿಂದ ಜನಸಾಮಾನ್ಯರು ತತ್ತರಿಸಿ ಹೋಗಿದ್ದು, ಕೊನೆಗೂ ಎಚ್ಚೆತ್ತ ಮೈಸೂರು ನಗರ ಪೊಲೀಸರಿಗೆ ರೌಡಿ ಪ್ರತಿಬಂಧಕ ದಳ ಅಗತ್ಯ ಎನಿಸಿದೆ.



ಮೊಹಮ್ಮದ್ ಷರೀಫ್ ರಾವುತರ್

ಹಾಗಾಗಿ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಸಿಸಿಬಿ ಎಸಿಪಿ ಮೊಹಮ್ಮದ್ ಷರೀಫ್ ರಾವುತರ್ ನೇತೃತ್ವದಲ್ಲಿ ರೌಡಿ ನಿಗ್ರಹ ದಳಕ್ಕೆ ಮರು ಚಾಲನೆ ನೀಡಿದ್ದಾರೆ.

1993–94ರಲ್ಲಿ ಹೆಚ್.ಆರ್. ಕಸ್ತೂರಿ ರಂಗನ್ ನಗರ ಪೊಲೀಸ್ ಆಯುಕ್ತರಾಗಿದ್ದು, ಮೈಸೂರಿನಗರ ನಿದ್ರೆಗೆಡಿಸಿದ್ದ ರೌಡಿ ಹಾವಳಿ ಹತ್ತಿಕ್ಕಲು ರೌಡಿ ಪ್ರತಿಬಂಧಕ ದಳ ರಚಿಸಿ, ದಕ್ಷ ಅಧಿಕಾರಿಗಳನ್ನು ಅದಕ್ಕೆ ನಿಯೋಜಿಸಿ ಜನರಿಗೆ ನೆಮ್ಮದಿ ತಂದಿದ್ದರು. ಆಗ ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಉಲ್ಫತ್ ಹುಸೇನ್ ಹಾಗೂ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೇಶವಯ್ಯ ಸಾಥ್ ನೀಡಿದ್ದರು.

ಅಂದಿನ ರೌಡಿ ನಿಗ್ರಹದಳಕ್ಕೆ ಎಸಿಪಿ ಬಿ.ಪಿ. ಉತ್ತಪ್ಪ ನೇತೃತ್ವ ವಹಿಸಿದ್ದರು, ಇನ್ಸ್‌ಪೆಕ್ಟರ್‌ಗಳಾದ ಕೆ.ಎಸ್. ತಮ್ಮಯ್ಯ, ಪುಟ್ಟಸ್ವಾಮಿಗೌಡ, ಟಿ.ಕೆ. ಧರ್ಮೇಶ್, ಸಬ್–ಇನ್ಸ್‌ಪೆಕ್ಟರ್‌ಗಳಾದ ಪಿ. ಮಹದೇವಪ್ಪ, ಮಹದೇವು, ಟಿ.ಎಂ. ಪಾಷಾ, ಮರಿಲಿಂಗಯ್ಯ, ರಮೇಶ್, ಜಯಶೀಲ, ಗಂಗಾಧರ, ಜಾರ್ಜ್, ವಿಜಯಕುಮಾರ್, ಸಣ್ಣಬೈರ, ರವಿಕುಮಾರ್, ಅನಿಲ್ ಸಂಕಪಾಲ್, ಓಂಪ್ರಕಾಶ್, ರಾಜೇಂದ್ರ, ಚೆನ್ನಬಸವಯ್ಯ, ನಾಗೇಂದ್ರ, ನಟರಾಜ್, ವಸಂತಕುಮಾರ್, ನಾಗುಬಾಯಿ ಮತ್ತು ವೇದಾವತಿ ದಳದಲ್ಲಿದ್ದರು.



ಮೈಸೂರು ನಗರ ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಬಿಂದುಮಣಿ ನೇತೃತ್ವದಲ್ಲಿ ರೌಡಿ ನಿಗ್ರಹ ದಳ ಪೊಲೀಸರು ಸೋಮವಾರವೂ ರಾತ್ರಿ ಕಾರ್ಯಾಚರಣೆ ನಡೆಸಿದರು.

ಈ ದಳದ ಅಧಿಕಾರಿಗಳು ಮೈಸೂರು ನಗರದಾದ್ಯಂತ ಸಕ್ರಿಯವಾಗಿದ್ದ ರೌಡಿಗಳನ್ನು ಪಟ್ಟಿ ಮಾಡಿ, ಪೆರೇಡ್ ನಡೆಸುವ ಮೂಲಕ ಅವರ ಚಟುವಟಿಕೆಗಳಿಗೆ ಬ್ರೇಕ್ ಹಾಕಿದ್ದರು. ಪರಿಣಾಮ ಮೈಸೂರು ನಗರದಲ್ಲಿ ರೌಡಿಗಳ ಅಟ್ಟಹಾಸ ಹತೋಟಿಗೆ ಬಂದಿತ್ತು. ನಂತರ 1995ರಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ಕುಚ್ಚಣ್ಣ ಶ್ರೀನಿವಾಸ್, 1996 ರಿಂದ 1999 ರವರೆಗೆ ಆಯುಕ್ತರಾಗಿದ್ದ ಕೆಂಪಯ್ಯ, ರೌಡಿ ನಿಗ್ರಹ ದಳದ ಮುಂದುವರೆಸಿದ್ದರು.



ನಾನು ನಗರ ಪೊಲೀಸ್ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ಬಳಿಕ, ಪುಡಿ ರೌಡಿಗಳು, ಸಮಾಜಘಾತುಕ ಚಟುವಟಿಕೆಗಳ ಮೇಲೆ ನಿಗಾ ಇರಿಸಿದ್ದು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಇತ್ತೀಚೆಗೆ ನಡೆದ ಅಪರಾಧ ಕೃತ್ಯಗಳ ಹಿನ್ನೆಲೆಯಲ್ಲಿ ರೌಡಿ ನಿಗ್ರಹ ದಳವನ್ನು ಪುನರ್ ಅಸ್ತಿತ್ವಕ್ಕೆ ತಂದಿದ್ದೇನೆ. ಕಾನೂನು ಮತ್ತು ಸುವ್ಯವಸ್ಥೆ ಡಿಸಿಪಿ ಆರ್.ಎನ್. ಬಿಂದುಮಣಿಯವರು ದಳದ ಕಾರ್ಯಾಚರಣೆಯ ಮೇಲ್ವಿಚಾರಣೆ ಮಾಡಲಿದ್ದಾರೆ.

–ಸೀಮಾ ಲಾಟ್ಕರ್, ಮೈಸೂರು ನಗರ ಪೊಲೀಸ್ ಆಯುಕ್ತೆ

1998ರ ಏ.12 ರಂದು ಅಂದಿನ ರೌಡಿ ನಿಗ್ರಹ ದಳದ ಇನ್ಸ್‌ಪೆಕ್ಟರ್ ಕೆ.ಎಸ್.ತಮ್ಮಯ್ಯ, ಕುಖ್ಯಾತ ರೌಡಿ ಲಕ್ಷ್ಮಣ್‌ನನ್ನು ಗುಂಡಿಕ್ಕಿ ಕೊಂದಿದ್ದರು. ಇದು ಮೈಸೂರು ನಗರದಾದ್ಯಂತ ರೌಡಿಗಳಲ್ಲಿ ಭಯವನ್ನುಂಟುಮಾಡಿತ್ತು. ಕೆಂಪಯ್ಯ ವರ್ಗಾವಣೆಯಾದ ನಂತರ ಪೊಲೀಸ್ ಆಯುಕ್ತರಾಗಿ ಬಂದಂತಹವರು ಈ ದಳ ಮುಂದುವರೆಸುವ ಆಸಕ್ತಿ ತೋರಲಿಲ್ಲ.

ಈ ನಡುವೆ 2006–2007ರಲ್ಲಿ ರಿಯಲ್ ಎಸ್ಟೇಟ್ ಉದ್ಯಮವು ಉತ್ತುಂಗಕ್ಕೇರುತ್ತಿದ್ದಂತೆಯೇ ಪುಡಿ ರೌಡಿಗಳು ಮೈಸೂರಿನಲ್ಲಿ ಭೂಮಾಲೀಕರಿಗೆ ಬೆದರಿಕೆ, ಹಲ್ಲೆ, ಸುಲಿಗೆಯಂತಹ ಅಪರಾಧ ಕೃತ್ಯಗಳನ್ನು ಎಸಗ ತೊಡಗಿದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಅಂತಹವರನ್ನು ಜೈಲಿಗಟ್ಟಿದರಾದರೂ, ಜಾಮೀನಿನ ಮೇಲೆ ಹೊರ ಬಂದ ಬಳಿಕ, ಅವರು ಮತ್ತೆ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. ಪೊಲೀಸರ ಭಯವೇ ಇಲ್ಲದಂತಹ ಪರಿಸ್ಥಿತಿ ನೆಲೆಸಿತು. ಈಗಲೂ ಕೊಲೆ, ಸುಲಿಗೆ,

■ 9ನೇ ಪುಟಕ್ಕೆ

ಪಾಂಡವಪುರದಲ್ಲಿ ಅದ್ದೂರಿ ಗಣೇಶಮೂರ್ತಿ ಮೆರವಣಿಗೆ

ಮೆರವಣಿಗೆಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಚಾಲನೆ

ಸಾರ್ವಜನಿಕರ ಗಮನ ಸೆಳೆದ ವಿವಿಧ ಕಲಾತಂಡಗಳು



ಗಣೇಶಮೂರ್ತಿ ಮೆರವಣಿಗೆಗೆ ಮಾಜಿ ಸಚಿವ ಸಿ.ಎಸ್‌ಪುಟ್ಟರಾಜು ಚಾಲನೆ ನೀಡಿದರು.

ಪಾಂಡವಪುರ, ಅ.13– ಪಟ್ಟಣದ ಹಳೇ ಬಸ್ ನಿಲ್ದಾಣದ ಬಳಿ ಸಿದ್ದಿ ವಿನಾಯಕ ಸೇವಾ ಸಮಿತಿಯಿಂದ ಪ್ರತಿಷ್ಠಾಪಿಸಿದ್ದ ಬೃಹತ್ ಗಣೇಶ ಮೂರ್ತಿ ಯನ್ನು ಭಾನುವಾರ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಅದ್ದೂರಿಯಾಗಿ ಮೆರವಣಿಗೆ ಮಾಡುವ ಮೂಲಕ ವಿಸರ್ಜನೆ ಮಾಡಲಾಯಿತು.



ಮೆರವಣಿಗೆಯಲ್ಲಿ ಕಾಳಿ ಕುಣಿತ ಕಲಾವಿದರನ್ನು ಕಾಣಬಹುದು

ಗಣೇಶ ಮೂರ್ತಿಗೆ ಸಚಿವ ಸಿ.ಎಸ್. ಪುಟ್ಟರಾಜು ಪುಷ್ಪಾರ್ಚನೆ ಮಾಡಿ, ಉತ್ಸವದ ವಾಹನಕ್ಕೆ ಸಾರಥಿಯಾಗುವ ಮೂಲಕ ಮೆರವಣಿಗೆಗೆ ವಿಧ್ಯುಕ್ತ ಚಾಲನೆ ನೀಡಿದರು. ಸಿದ್ದಿವಿನಾಯಕ ಸೇವಾ ಸಮಿತಿ 45ನೇ ವರ್ಷದ ಅಂಗವಾಗಿ ಬೃಹತ್ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿ 45 ದಿನಗಳ ಕಾಲ ಪ್ರತಿಷ್ಠಾಪಿಸಿ ನಿತ್ಯ ವಿಶೇಷ ಪೂಜೆ, ಹೋಮ, ವಿನೂತನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿದ್ದರು. ಗಣೇಶ ಮೂರ್ತಿ ವಿಸರ್ಜನೆಗೂ 2 ದಿನಗಳ ಹಿಂದೆ ಅನ್ನ ಸಂತರ್ಪಣೆಯನ್ನು ಹಮ್ಮಿಕೊಂಡಿದ್ದರು.

ಅಂತಿಮವಾಗಿ ಭಾನುವಾರ ಮಧ್ಯಾಹ್ನ ಆರಂಭಗೊಂಡ ಮೆರವಣಿಗೆಯಲ್ಲಿ ಗಣೇಶ ಮೂರ್ತಿ ಜೊತೆಗೆ ಈಶ್ವರ, ಭದ್ರ ಕಾಳಿ ಮೂರ್ತಿಗಳನ್ನು ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ನಾಸಿಕ್ ಡೋಲು, ಹುಲಿವೇಷ, ವೀರಗಾಸೆ ಕುಣಿತ, ಮಹಿಳೆಯರ ವೀರಗಾಸೆ ಕುಣಿತ, ಮಂಗಳವಾದ್ಯ, ಡೋಲು, ಕಾಳಿ ಕುಣಿತ ಜೊತೆಗೆ ಹಳ್ಳಿಕಾರ್ ತಳಿಯ ಜೋಡೆತ್ತುಗಳು ಸಾರ್ವಜನಿಕರ ಮನಸೂರೆಗೊಂಡವು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಕಲಾ ತಂಡಗಳೊಂದಿಗೆ ಆಗಮಿಸಿ ಕಲಾವಿದರಿಗೆ ಶುಭ ಹಾರೈಸಿದರು.

> 6 ಪಟ್ಟಣದ ಹಳೇ ಬಸ್ ನಿಲ್ದಾಣದಲ್ಲಿ ಪ್ರತಿಷ್ಠಾಪಿಸಿದ್ದ ಬೃಹತ್ ಗಣೇಶ ಮೂರ್ತಿಯನ್ನು ಸಮಿತಿ ಸದಸ್ಯರು ವಿವಿಧ ಕಲಾ ತಂಡಗಳೊಂದಿಗೆ ಅದ್ದೂರಿ ಮೆರವಣಿಗೆ ನಡೆಸುವ ಮೂಲಕ ವಿಸರ್ಜನೆ ನಡೆಸಿದ್ದಾರೆ. ವಿಶೇಷವಾಗಿ ನಾಸಿಕ್‌ನಿಂದ ಡೋಲು ತಂಡದ ಕಲಾವಿದರನ್ನು ಕರೆಸುವ ಮೂಲಕ ವಿಶೇಷ ಗಮನ ಸೆಳೆದಿದ್ದಾರೆ. ನಾನು ಸಹ ಉತ್ಸವದಲ್ಲಿ ಭಾಗಹಿಸಿ ಮೆರವಣಿಗೆ ಚಾಲನೆ ನೀಡುವ ಮೂಲಕ ದೇವರ ಕೃಪೆಗೆ ಪಾತ್ರನಾಗಿದ್ದೇನೆ.
>
> – ಸಿ.ಎಸ್.ಪುಟ್ಟರಾಜು ಮಾಜಿ ಸಚಿವ.

ಹಳೇ ಬಸ್ ನಿಲ್ದಾಣದ ಗಣಪತಿ ಪೆಂಡಾಲ್‌ನಿಂದ ಆರಂಭ' ಗೊಂಡ ಮೆರವಣಿಗೆ ಪೇಟೆ ಬೀದಿ ಮಾರ್ಗವಾಗಿ ಪೊಲೀಸ್ ಠಾಣೆ ರಸ್ತೆ, ಹಿರೇಮರಳಿ ವೃತ್ತ, ಬೀರಶೆಟ್ಟಹಳ್ಳಿ ರಸ್ತೆ, ಬಸ್ ಡಿಪೋ ವೃತ್ತ, ನಾಗಮಂಗಲ ಮುಖ್ಯ ರಸ್ತೆ ಮಾರ್ಗವಾಗಿ ಕೆರೆಕೋಡಿ ವೃತ್ತದ ಮೂಲಕ ಮಂಡ್ಯ ಸರ್ಕಲ್, ಐದು ದೀಪದ ವೃತ್ತ, ಕೆಆರ್‌ಎಸ್ ರಸ್ತೆ, ಶಿಕ್ಷಕರ ಭವನ ರಸ್ತೆ, ವಿಜಯ ಬ್ಯಾಂಕ್ ರಸ್ತೆಯ, ಬಾಲಕಿಯರ ಪದವಿಪೂರ್ವ ಕಾಲೇಜು ವೃತ್ತದ ಮಾರ್ಗವಾಗಿ ಚಲಿಸಿ ಅಂತಿಮವಾಗಿ ವಿಸಿ ನಾಲೆಯಲ್ಲಿ ಕ್ರೇನ್ ಮೂಲಕ ಬೃಹತ್ ಗಣೇಶಮೂರ್ತಿಯನ್ನು ವಿಸರ್ಜನೆ ಮಾಡಲಾಯಿತು.

ನಾಲೆಗೆ ನೀರು ಬಿಡಿಸಿದ ಸಿಎಸ್‌ಪಿ: ತಾಲೂಕಿನಲ್ಲಿ ಅತಿಯಾಗಿ ಮಳೆಯಾದ ಹಿನ್ನೆಲೆಯಲ್ಲಿ ಅಧಿಕಾರಿಗಳು ವಿಸಿ ನಾಲೆ ನೀರು ನಿಲ್ಲಿಸಿದ್ದರು. ಇದರಿಂದ ಗಣಪತಿ ವಿಸರ್ಜನೆ ಮಾಡಲು ಸಮಿತಿ ಸದಸ್ಯರು ಪಜೀತಿಗೆ ಸಿಲುಕಿದ್ದರು. ಈ ವೇಳೆ ಸದಸ್ಯರ ಮನವಿ ಮೇರೆಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಧಿಕಾರಿಗಳೊಂದಿಗೆ ಚರ್ಚಿಸಿ ವಿಸಿ ನಾಲೆಗೆ ನೀರು ಹರಿಸುವ ಮೂಲಕ ಗಣಪತಿ ವಿಸರ್ಜನೆಗೆ ಸಹಕರಿಸಿದರು.

ಮೆರವಣಿಗೆಯಲ್ಲಿ ಸಮಿತಿ ಸುಬ್ರಹ್ಮಣ್ಯ, ಮನೋಜ್ ಸೇರಿದಂತೆ ಸಮಿತಿಯ ಎಲ್ಲಾ ಸದಸ್ಯರು ಹಾಗೂ ಸಾವಿರಾರು ಸಾರ್ವಜನಿಕರು ಭಾಗವಹಿಸಿದ್ದರು.

ಆರ್‌ಎಸ್‌ಎಸ್ ನಿಷೇಧಿಸಲು ನೆಹರು, ಇಂದಿರಾ, ರಾಜೀವ್ ಗಾಂಧಿಯಿಂದಲೇ ಸಾಧ್ಯವಾಗಲಿಲ್ಲ, ನಿಮ್ಮಿಂದ ಸಾಧ್ಯವಾ?

ಸಚಿವ ಪ್ರಿಯಾಂಕ್ ಖರ್ಗೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ಪ್ರಶ್ನೆ

- ಪ್ರಿಯಾಂಕ್ ಖರ್ಗೆ ಕೂಗುಮಾರಿ
- ಹಣ ಲೂಟಿಯಷ್ಟೆ ಇವರ ಕೆಲಸ
- ರಾಜ್ಯ ರಾಜಕೀಯದಲ್ಲಿ ಇವರಿಗೆ ಮನ್ನಣೆ ಇಲ್ಲ
- ಸಿದ್ದರಾಮಯ್ಯ ಇಂತಹವರ ಬಾಯಿ ಮುಚ್ಚಿಸಬೇಕು

ಮೈಸೂರು, ಅ.13(ಬಿಎಲ್ ಯು)– ಆರ್‌ಎಸ್‌ಎಸ್ ಬ್ಯಾನ್ ಮಾಡಲು ನೆಹರು, ಇಂದಿರಾ ಗಾಂಧಿ, ರಾಜೀವ್ ಗಾಂಧಿ ಅವರಿಂದಲೇ ಆಗಲಿಲ್ಲ, ಇನ್ನು ನಿಮ್ಮಿಂದ ಸಾಧ್ಯವಾ? ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಪ್ರಶ್ನಿಸಿದ್ದಾರೆ.



ಪ್ರತಾಪ್ ಸಿಂಹ

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಸರ್ಕಾರಿ ಕಚೇರಿ ಆವರಣದಲ್ಲಿ ಆರ್‌ಎಸ್‌ಎಸ್ ಕಾರ್ಯಕ್ರಮಗಳನ್ನು ಬ್ಯಾನ್ ಮಾಡಬೇಕೆಂಬ ಸಚಿವ ಪ್ರಿಯಾಂಕ ಖರ್ಗೆ ಆಗ್ರಹಕ್ಕೆ ತಿರುಗೇಟು ನೀಡಿದ್ದಾರೆ.

ಪ್ರಿಯಾಂಕ್ ಖರ್ಗೆಗೆ ಪ್ರಚಾರದ ಗೀಳು ಹೆಚ್ಚಾಗಿದೆ. ಮಂತ್ರಿಯಾಗಿರುವ ನನಗೆ ಪ್ರಚಾರ ಸಿಗುತ್ತದೆ ಎಂಬ ಭ್ರಮೆಯಲ್ಲಿ ಕೂಗುಮಾರಿಯಂತೆ ವರ್ತಿಸುತ್ತಿದ್ದಾರೆ ಎಂದು ಛೇಡಿಸಿದರು.

ತಮ್ಮ ತವರು ಜಿಲ್ಲೆ ಕಲ್ಬುರ್ಗಿ ಅಭಿವೃದ್ಧಿ ಮಾಡಲು ಸಾಧ್ಯವಾಗದ ಇವರಿಗೆ ರಾಜ್ಯ ರಾಜಕೀಯದಲ್ಲಿ ಮನ್ನಣೆ ಸಿಗುವುದೇ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ ಅವರು, ಪಿಯುಸಿ ಫೇಲ್ ಆಗಿರುವ ಇವರಿಂದ ಏನನ್ನು ನಿರೀಕ್ಷಿಸಲು ಸಾಧ್ಯ ಎಂದು ಪ್ರಶ್ನಿಸಿದರು. ಹಳಸಿರುವ ಲಾಡು ಪ್ರಿಯಾಂಕ್ ಖರ್ಗೆ ಹಾಗೂ ಡ್ರೋನ್ ಪ್ರದೀಪ್ ಈಶ್ವರ್, ಈ ಇಬ್ಬರೂ ಕೂಗುಮಾರಿಗಳು, ಇಂತಹವರಿಂದ ಆರ್‌ಎಸ್‌ಎಸ್ ಬ್ಯಾನ್ ಮಾಡಲು ಸಾಧ್ಯವೇ? ಎಂದು ಮರು ಪ್ರಶ್ನಿಸಿದರು. ಬಿಟ್ ಕಾಯಿನ್ ಬಗ್ಗೆ ಮಾತನಾಡುತ್ತಿದ್ದ ಪ್ರಿಯಾಂಕ್ ಖರ್ಗೆ ಈಗ ಮೌನ ವಹಿಸಿದ್ದಾರೆ. ಇವರು ಜವಾಬ್ದಾರಿ ಹೊತ್ತಿರುವ ಇಲಾಖೆಯಲ್ಲೂ ಯಾವುದೇ ಅಭಿವೃದ್ಧಿ ಸಾಧಿಸಿಲ್ಲ. ಆದರೂ ತಾವು ಪ್ರಭಾವಶಾಲಿ ರಾಜಕಾರಣಿ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ಹಣ ಲೂಟಿ ಮಾಡುವುದಷ್ಟೆ ಇವರ ಕೆಲಸವಾಗಿದೆ. ಸಿದ್ದರಾಮಯ್ಯ ಅವರು ಇಂತಹವರ ಬಾಯಿ ಮುಚ್ಚಿಸಬೇಕು. ಧ್ವಜ ಸಂಹಿತೆ ತಿಳಿಸಬೇಕು ಎಂದು ಪ್ರತಾಪ್ ಸಿಂಹ ಸಲಹೆ ನೀಡಿದರು.

ನೂರೈವತ್ತು ಕೋಟಿ ಕೊಟ್ಟರೆ ಸಿದ್ದರಾಮಯ್ಯ ಬದಲು ಡಿಕೆಶಿ ಸಿಎಂ!

ದುಡ್ಡು ಕೊಟ್ಟರೆ ಸಿದ್ದರಾಮಯ್ಯ ಸಿಎಂ ಆಗಿ ಮುಂದುವರೆಯುತ್ತಾರೆ, ನೂರೈವತ್ತು ಕೋಟಿ ಕೊಟ್ಟರೆ ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಗೇಲಿ ಮಾಡಿದ್ದಾರೆ.

ಅಧಿಕಾರ ಹಂಚಿಕೆ ಹೈಕಮಾಂಡ್ ತೀರ್ಮಾನಕ್ಕೆ ಬಿಟ್ಟ ವಿಚಾರ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಪ್ರತಾಪ್ ಸಿಂಹ, ಕಾಂಗ್ರೆಸ್ ಹೈಕಮಾಂಡ್ ಶಾಸಕರನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಯಾರು ಹೆಚ್ಚು ಹಣ ಕೊಡುತ್ತಾರೊ ಅವರಿಗೆ ಅಧಿಕಾರ ನೀಡುತ್ತದೆ ಎಂದು ಟೀಕಿಸಿದರು.

ಶಾಸಕ ಮುನಿರತ್ನಗೆ ಹೇಯ್ ಕರಿ ಟೋಪಿ ಬಾ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಕಿಡಿಕಾರಿದ ಪ್ರತಾಪ್ ಸಿಂಹ, ಡಿ.ಕೆ.ಶಿವಕುಮಾರ್ ಅವರು ಸಿಎಂ ಆಗುವ ಕನಸು ಕಾಣುತ್ತಿದ್ದಾರೆ. ಸಿಎಂ ಅಂತಹ ಉನ್ನತ ಹುದ್ದೆ ಬಗ್ಗೆ ಕನಸು ಕಾಣುವುದು ತಪ್ಪಲ್ಲ, ಆದರೆ ಆ ಹುದ್ದೆಗೆ ತಕ್ಕಂತೆ ಒಳ್ಳೆಯ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಡಿ.ಕೆ.ಶಿವಕುಮಾರ್ ಅವರ ಮಾತು, ವರ್ತನೆ ರೌಡಿಗಳ ರೀತಿ ಇದೆ. ಮುನಿರತ್ನರನ್ನ ಕರಿ ಟೋಪಿ ಎಂಎಲ್‌ಎ ಬಾ ಅಂತ ಕರೆದಿದ್ದಾರೆ. ಅದೇ ಜಾಗದಲ್ಲಿ ಜಮೀರ್ ಅಹಮ್ಮದ್ ಇದ್ದರೆ ಬಿಳಿ ಟೋಪಿ ಸಾಬಣ್ಣ ಬಾ ಎಂದು ಕರೆಯುತ್ತಿದ್ದರೆ! ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಒಬ್ಬ ಚುನಾಯಿತ ಪ್ರತಿನಿಧಿಯನ್ನು ಏಕವಚನದಲ್ಲಿ ಕರೆಯುತ್ತಿರುವುದು ಅವರ ಗುಣವನ್ನು ತೋರಿಸುತ್ತದೆ ಎಂದರು.

ಆರ್‌ಎಸ್‌ಎಸ್ ಗಣವೇಷದಲ್ಲೆ ವಿಧಾನಸಭೆಗೆ ಬರುತ್ತೇವೆ, ಏನು ಮಾಡುತ್ತೀರಾ!

ಸರ್ಕಾರಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಪ್ರಶ್ನೆ

ಮೈಸೂರು, ಅ.13(ಬಿಎಲ್‌ಯು)– ಆರ್‌ಎಸ್‌ಎಸ್ ಗಣವೇಷದಲ್ಲೇ ವಿಧಾನಸಭೆಗೆ ಬರುತ್ತೇವೆ ಏನು ಮಾಡುತ್ತೀರಾ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಪ್ರಶ್ನಿಸಿದ್ದಾರೆ.



ಟಿ.ಎಸ್.ಶ್ರೀವತ್ಸ

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಆರ್‌ಎಸ್‌ಎಸ್ ಬಗ್ಗೆ ಪ್ರಿಯಾಂಕ್ ಖರ್ಗೆಗೆ ಅರಿವಿಲ್ಲ. ಪ್ರಿಯಾಂಕ್ ಖರ್ಗೆ ಒಂದು ಗಂಟೆ ಬಂದು ನಮ್ಮ ಶಾಖೆಯಲ್ಲಿ ಕುಳಿತುಕೊಳ್ಳಲಿ. ಆಗ ಸಂಘದ ಮಹತ್ವ ತಿಳಿಯುತ್ತದೆ ಎಂದು ಸಲಹೆ ನೀಡಿದರು.

ಆರ್‌ಎಸ್‌ಎಸ್ ಅಂದರೆ ಪ್ರಿಯಾಂಕ್ ಖರ್ಗೆಗೆ ಏಕೆ ಅಲರ್ಜಿ ಎಂದು ಪ್ರಶ್ನಿಸಿದ ಶ್ರೀವತ್ಸ ಅವರು, ನೀವು ಈಗ ಏನು ಮಾಡುತ್ತೀರೊ ಮಾಡಿ, ನಾವು ಅಧಿಕಾರಕ್ಕೆ ಬಂದಾಗ ನಿಮ್ಮನ್ನು ವಿರೋಧಿಸುವಂತೆ ಮಾಡುತ್ತೇವೆ ಎಂದು ಸವಾಲು ಹಾಕಿದರು.

ಮನೆ ಮನೆಯಲ್ಲೂ ಆರ್‌ಎಸ್‌ಎಸ್ ಶಾಖೆ ಮಾಡುತ್ತಿದ್ದೇವೆ. ಹಿಂದುತ್ವದ ಬಗ್ಗೆ ಮಾತನಾಡುವುದು, ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವುದು, ಅಂಬೇಡ್ಕರ್ ತತ್ವ ಸಿದ್ಧಾಂತವನ್ನು ಜನರಿಗೆ ತಿಳಿಸುವುದು ನಮ್ಮ ಬ್ರೈನ್ ವಾಶೇ? ಎಂದು ಪ್ರಶ್ನಿಸಿದರು.

ಆರ್‌ಎಸ್‌ಎಸ್ ಬ್ಯಾನ್ ಮಾಡುವಂತೆ ಪ್ರಿಯಾಂಕ್ ಖರ್ಗೆ ಪತ್ರ ಬರೆದಿರುವುದು ಮೂರ್ಖತನದ ಪರಮಾವಧಿ, ಆ ಪತ್ರಕ್ಕೆ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿರುವುದು ಅದಕ್ಕಿಂತ ದೊಡ್ಡ ಮೂರ್ಖತನ ಎಂದು ಟೀಕಿಸಿದರು.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆ ಭರ್ತಿಗೆ ಆಗ್ರಹಿಸಿ ಉದ್ಯೋಗಾಕಾಂಕ್ಷಿ ಹೋರಾಟ ಸಮಿತಿ ಪ್ರತಿಭಟನೆ



ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಸೊಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಅ.13(ಎಂಕೆ)– ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡುವಂತೆ ಆಗ್ರಹಿಸಿ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ವತಿಯಿಂದ ಸೊಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು, 'ಉದ್ಯೋಗ ನಮ್ಮ ಹಕ್ಕು', 'ಯುವಕ–ಯುವತಿಯರಿಗೆ ಉದ್ಯೋಗ ಕೊಡಿ' ಎಂಬಿತ್ಯಾದಿ ಫಲಕಗಳನ್ನಿಡಿದು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷ ತುಂಬಿದ್ದರೂ ಒಳ ಮೀಸಲಾತಿಯಡಿ ಯಾವುದೇ ನೇಮಕಾತಿ ಮಾಡಿಲ್ಲ. ಉದ್ಯೋಗ ಗ್ಯಾರಂಟಿ ಜಾರಿಗೊಳಿಸುತ್ತಾರೆ ಎಂಬ ನಿರೀಕ್ಷೆ ಹುಸಿಯಾಗಿದೆ. 2025–26ನೇ ಸಾಲಿಗೆ ರಾಜ್ಯದ 43 ಇಲಾಖೆಗಳಲ್ಲಿ 2,84,881 ಹುದ್ದೆಗಳು ಖಾಲಿ ಬಿದ್ದಿವೆ. ಅವುಗಳ ನೇಮಕಕ್ಕೆ ಕಿಂಚಿತ್ತು ಪ್ರಯತ್ನ ನಡೆಯುತ್ತಿಲ್ಲ. ಕುಂಟುನೆಪಗಳನ್ನು ಹೇಳುತ್ತಾ ನೇಮಕಾತಿಗಳನ್ನು ಮುಂದೂಡಲಾಗುತ್ತಿದೆ ಎಂದು ಕಿಡಿಕಾರಿದರು.

ಕೂಡಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಎಲ್ಲಾ ಇಲಾಖೆಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಶೀಘ್ರದಲ್ಲಿ ಭರ್ತಿಮಾಡಲು ಕ್ರಮ ಕೈಗೊಳ್ಳಬೇಕು. ನೇಮಕಾತಿಗಳಲ್ಲಿ ಅಕ್ರಮ ತಡೆಗಟ್ಟಿ, ಪಾರದರ್ಶಕತೆ ಕಾಪಾಡಲು ಸೂಕ್ತಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ಸರಿಯಾಗಿ ನೇಮಕಾತಿಗಳು ನಡೆಯದ ಹಿನ್ನೆಲೆಯಲ್ಲಿ ಎಲ್ಲಾ ನೇಮಕಾತಿಗಳಿಗೆ ಅರ್ಹ ವಯೋಮಿತಿಯನ್ನು ಕನಿಷ್ಠ ಐದು ವರ್ಷಗಳ ಸಡಿಲಿಕೆ ಮಾಡಬೇಕು. ಪೊಲೀಸ್ ಕಾನ್ಸ್‌ಟೇಬಲ್ ವಯೋಮಿತಿಯನ್ನು ಸಾಮಾನ್ಯ ಅಭ್ಯರ್ಥಿಗಳಿಗೆ 30 ವರ್ಷ ಹಾಗೂ ಎಸ್ಸಿ–ಎಸ್ಟಿ ಮತ್ತು ಒಬಿಸಿಗೆ 33 ವರ್ಷಗಳಿಗೆ ಸಡಿಲಿಕೆ ಮಾಡಬೇಕು. ಸರ್ಕಾರಿ ಇಲಾಖೆಗಳಲ್ಲಿ ದಿನಗೂಲಿ, ಗುತ್ತಿಗೆ, ಹೊರಗುತ್ತಿಗೆ ಪದ್ಧತಿ ಕೈ ಬಿಟ್ಟು ಎಲ್ಲಾ ಹುದ್ದೆಗಳನ್ನು ಕಾಯಂ ಆಧಾರದಲ್ಲಿ ನೇಮಕಾತಿ ಮಾಡಬೇಕು ಹಾಗೂ ಇತ್ತೀಚೆಗೆ ಕೆ.ಇ.ಎ. ಹೊರಡಿಸಿರುವ ನೋಟಿಫಿಕೇಶನ್‌ನಲ್ಲಿ ನಿಗದಿಪಡಿಸಿರುವ ದುಬಾರಿ ಅರ್ಜಿ ಶುಲ್ಕವನ್ನು ಕೈಬಿಡಬೇಕು ಎಂದು ಆಗ್ರಹಿಸಿದರು.

ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ಮೈಸೂರು ಜಿಲ್ಲಾ ಘಟಕದ ಎಸ್.ವಿ.ನೀತುಶ್ರೀ, ಟಿ.ಆರ್.ಸುನೀಲ್, ಎಸ್.ಸುಮಾ, ಪೂರ್ಣಿಮಾ, ರಣಜೀತ್, ಗಿರೀಶ್, ಶಶಾಂಕ್, ನಂಜುಂಡ, ಪವನ್, ಆದರ್ಶ, ಅಶ್ವಥ್, ಉಲ್ಲಾಸ್, ಪೃಥ್ವಿರಾಜ್, ರಕ್ಷಿತ್ ಮತ್ತಿತರರು ಭಾಗವಹಿಸಿದ್ದರು.

ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಹೇಳಿಕೆಗೆ ಬಸವಪರ ಸಂಘಟನೆಗಳ ಖಂಡನೆ

ಮೈಸೂರು,ಅ.13(ಜಿಎ)–ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಕಣ್ಣೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಬಸವ ಸಂಸ್ಕೃತಿ ಅಭಿಯಾನ ಮತ್ತು ಲಿಂಗಾಯತ ಮಠಾಧೀಶರ ಬಗ್ಗೆ ಬಳಸಿರುವ ಪದಗಳನ್ನು ಮೈಸೂರಿನ ಬಸವ ಪರ ಸಂಘಟನೆಗಳು ಖಂಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಮಹದೇವಪ್ಪ ಮಾತನಾಡಿ, ಇತ್ತೀಚೆಗೆ ಸಾಂಗ್ಲಿ ಜಿಲ್ಲೆಯ ಜತ್ತ ತಾಲೂಕಿನ ಬೀಳೂರ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಡಸಿದ್ದೇಶ್ವರ ಸ್ವಾಮೀಜಿಯವರು ಬಸವ ಸಂಸ್ಕೃತಿ ಅಭಿಯಾನ ಮತ್ತು ಲಿಂಗಾಯತ ಮಠಾಧೀಶರ ಬಗ್ಗೆ ಕೀಳು ಭಾಷೆಯಲ್ಲಿ ಅಪಮಾನ ಮಾಡಿದ್ದು, ಸ್ವಾಮೀಜಿ ಅವರ ಮಾತುಗಳಿಂದ ಬಸವ ಅಭಿಮಾನಿಗಳಿಗೆ ಬಹಳ ನೋವಾಗಿದೆ ಎಂದು ಹೇಳಿದರು.

ರಾಜ್ಯದಾದ್ಯಂತ ಬಸವಣ್ಣ ಅವರ ಲಕ್ಷಾಂತರ ಅನುಯಾಯಿಗಳು ಮತ್ತು ಅಭಿಮಾನಿಗಳು ಬಸವಣ್ಣನವರನ್ನು ಲಿಂಗಾಯತ ಧರ್ಮ ಸ್ಥಾಪಕರೆಂದು ಹಾಗೂ ಧರ್ಮ ಗುರುಗಳೆಂದು ನಂಬಿದ್ದಾರೆ. ಮಠಾಧೀಶರ ಬಗ್ಗೆ ಗೌರವ ಪೂರ್ವಕವಾಗಿ ನಂಬಿಕೆ ಮತ್ತು ಶ್ರದ್ಧೆ ಹೊಂದಿದ್ದಾರೆ. ಬಸವಾದಿ ಶರಣರ ವಚನ ಸಾಹಿತ್ಯ ಮತ್ತು ಅವರ ತತ್ವ ಸಿದ್ಧಾಂತವನ್ನು, ಆದರ್ಶವನ್ನು ಜೀವನದಲ್ಲಿ ಅಳವಡಿಸಿಕೊಂಡು ಶರಣರ ಮಾರ್ಗದಲ್ಲಿ ಸಾಗುತ್ತಿದ್ದಾರೆ. ಆದರೆ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರು ಸಭೆಯಲ್ಲಿ ಬಸವಣ್ಣನವರನ್ನುದ್ದೇಶಿಸಿ ಮಾತನಾಡುವಾಗ ಬಸವ ಸಂಸ್ಕೃತಿ ಅಭಿಯಾನ ಮುಖ್ಯಮಂತ್ರಿ ಸಿದ್ದರಾಮಯ್ಯ ಕೃಪಾ ಪೋಷಿತ ನಾಟಕ ಕಂಪನಿ, ಆ ಅಭಿಯಾನದಲ್ಲಿ ಪಾಲ್ಗೊಂಡಿರುವ ಮಠಾಧೀಶರು ಕಲಾವಿದರು ಎಂದು ಹೇಳುವ ಜೊತೆಗೆ ಅತ್ಯಂತ ಕೀಳು ಮಟ್ಟದ ಪದ ಪ್ರಯೋಗ ಮಾಡಿ ಮಠಾಧೀಶರನ್ನು ನಿಂದಿಸಿದ್ದಾರೆ. ಇದು ಅಶಾಂತಿ ಸೃಷ್ಟಿಸುವ, ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಕೃತ್ಯವಾಗಿದೆ. ಹೀಗಾಗಿ ಇದನ್ನು ಬಸವ ಅಭಿಮಾನಿಗಳು ಖಂಡಿಸುತ್ತಿದ್ದಾರೆ ಎಂದರು.

ಸ್ವಾಮೀಜಿ ಕೂಡಲೇ ತಮ್ಮ ಹೇಳಿಕೆ ವಾಪಸ್ ಪಡೆದು, ಸಮುದಾಯದ ಕ್ಷಮೆ ಯಾಚಿಸಬೇಕು. ಇಲ್ಲದಿದ್ದಲ್ಲಿ ಉಗ್ರ ಪ್ರತಿಭಟನೆ, ಕಾನೂನು ಹೋರಾಟ ನಡೆಸುವುದಾಗಿ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಕೆ.ಎಸ್.ಪ್ರಕಾಶ್, ಬಿ.ಕೆ.ನಾಗರಾಜ್, ಜಯಶಂಕರ್, ಗಂಗಾಧರಸ್ವಾಮಿ, ಚಂದ್ರಶೇಖರ್, ದೇವಪ್ಪ ಮತ್ತಿತರರು ಉಪಸ್ಥಿತರಿದ್ದರು.

ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹರೀಶ್‌ಗೌಡ ಚಾಲನೆ

ಮೈಸೂರು, ಅ.13(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.6ರ ವ್ಯಾಪ್ತಿಯ ಗೋಕುಲಂ ಡಾಕ್ಟರ್ಸ್ ಕಾರ್ನರ್, ಬೃಂದಾವನ ಚರ್ಚ್ ಹಾಗೂ ವಾರ್ಡ್ ನಂ.18ರ ವ್ಯಾಪ್ತಿಯ ಮೇದಾರ್ ಬ್ಲಾಕ್‌ನಲ್ಲಿ 1 ಕೋಟಿ ರೂ.ವೆಚ್ಚದ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಸೋಮವಾರ ಗುದ್ದಲಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಎಸ್‌ಎಫ್‌ಸಿ ವಿಶೇಷ ಅನುದಾನದಡಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡಲಾಗಿದೆ. ಮಳೆಗಾಲದಲ್ಲಿ ಸಾಕಷ್ಟು ತೊಂದರೆಯಾಗುತ್ತಿದೆ. ರಸ್ತೆ ಮತ್ತು ಚರಂಡಿ ಅಭಿವೃದ್ಧಿಯಾಗಬೇಕು ಎಂದು ಸ್ಥಳೀಯರು ಮನವಿ ಮಾಡಿದ್ದರಿಂದ ಸ್ಥಳ ಪರಿಶೀಲಿಸಿ, ಈಗ ಗುದ್ದಲಿಪೂಜೆ ನೆರವೇರಿಸಲಾಗಿದೆ. ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಿದ್ದು, ಬಾಕಿ ಇರುವ ದೊಡ್ಡ ಚರಂಡಿಯ ಗೋಡೆ ಎತ್ತರಿಸುವುದು ಮತ್ತು ಉಳಿದ ರಸ್ತೆಗಳ ಅಭಿವೃದ್ಧಿ ಕೆಲಸವನ್ನು ಶೀಘ್ರದಲ್ಲಿಯೇ ಮಾಡಿಸಲಾಗುವುದು ಎಂದರು.

ಸ್ಥಳೀಯ ಮುಖಂಡರಾದ ಸುಧಾಕರ್, ಪ್ರವೀಣ್‌ಶೆಟ್ಟಿ, ಅರುಣ್‌ಕುಮಾರ್, ಮಹೇಶ್, ಚೇತನ್, ಮಂಜುನಾಥ್, ಟೆಂಟ್ ಶ್ರೀನಿವಾಸ್, ತೇಜಸ್, ದಿನೇಶ್, ಕುಮಾರ್, ದರ್ಶನ್, ಡಿಸೋಜ, ನಿಶಾಂತ್, ಸಭಾಪತಿ, ಸೋಮಣ್ಣ, ಗಣೇಶ್, ಶಿವು, ರವಿ ಮತ್ತಿತರರಿದ್ದರು.



ಮೈಸೂರಿನ ಬೃಂದಾವನ ಬಡಾವಣೆಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು..

ನಾಳೆ ಮೈಸೂರಲ್ಲಿ ಡಾ.ವಿಷ್ಣುವರ್ಧನ್ ಹಿಟ್ಸ್ ಗಾಯನ ಕಾರ್ಯಕ್ರಮ

ಮೈಸೂರು,ಅ.13(ಜಿಎ)–ಡಾ.ರಾಜ್ ಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ ಅ.15ರಂದು ಸಂಜೆ 5ಕ್ಕೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಡಾ.ವಿಷ್ಣುವರ್ಧನ್ ಅವರ 75ನೇ ಹುಟ್ಟುಹಬ್ಬದ ಪ್ರಯುಕ್ತ 'ಘರ್ಜನೆ' ಶೀರ್ಷಿಕೆ ಅಡಿ ಡಾ.ವಿಷ್ಣುವರ್ಧನ್ ಹಿಟ್ಸ್ ಕಾರ್ಯಕ್ರಮ ಆಯೋಜಿಸಲಾಗಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಡಾ.ರಾಜ್ ಕುಮಾರ್ ಮ್ಯೂಸಿಕಲ್ ಗ್ರೂಪ್ ಆಯೋಜಕ ಮೈಸೂರು ಜಯರಾಂ ಈ ವಿಷಯ ತಿಳಿಸಿ, ಇದು ಕರೊಕೆ ಕಾರ್ಯಕ್ರಮವಾಗಿದ್ದು, ವಿವಿಧ ಗಾಯಕ, ಗಾಯಕಿಯರು ವಿಷ್ಣುವರ್ಧನ್ ಚಿತ್ರಗಳ ಸುಮಾರು 40 ಗೀತೆ ಹಾಡಲಿದ್ದಾರೆ. ಇಳೈ ಆಳ್ವಾರ್ ಸ್ವಾಮೀಜಿ, ಜಿಪಂ ಮಾಜಿ ಅಧ್ಯಕ್ಷೆ ಪರಿಮಳ ಶ್ಯಾಮ್‌ಸುಂದರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿಪ್ರ ಮುಖಂಡ ಡಿ.ಟಿ.ಪ್ರಕಾಶ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಇನ್ನಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಸುಧೀಂದ್ರ, ಸುರೇಶ್, ಅನಿತಾ, ಲತಾ ಬಾಲಕೃಷ್ಣ, ಚಂದ್ರಶೇಖರ್ ಇದ್ದರು.

ನೈಪುಣ್ಯ ವಿದ್ಯಾರ್ಥಿಗಳ ತೋಟಗಾರಿಕಾ ನೈಪುಣ್ಯತೆ



ಮೈಸೂರು, ಅ.13–ಮೈಸೂರಿನ ದಟ್ಟಗಳ್ಳಿಯಲ್ಲಿರುವ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಮೂಡಿಸುವ ಸಲುವಾಗಿ ಶಾಲೆಯ ಹಸಿರು ಶಿಕ್ಷಣ ವಿಭಾಗದಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅದರ ಭಾಗವಾಗಿ ಈ ವಿಭಾಗದ ಮಾರ್ಗದರ್ಶನದಲ್ಲಿ ಶಾಲೆಯ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳೇ ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಸೋಮವಾರ ವಿದ್ಯಾಥಿಗಳು ಕ್ಯಾಂಪಸ್‌ನಲ್ಲಿ ತಾವು ಬೆಳೆದ ತರಕಾರಿಯನ್ನು ಸಂಸ್ಥೆಯ ಮುಖ್ಯಸ್ಥ ಆರ್. ರಘು ಕೌಟಿಲ್ಯ ಅವರಿಗೆ ಮಾರಾಟ ಮಾಡಿದರು. ವಿದ್ಯಾರ್ಥಿಗಳು ತಂದ ತರಕಾರಿಯನ್ನು ರಘು ಕೌಟಿಲ್ಯ ಅವರು ಸಂತೋಷದಿಂದಲೇ ಖರೀದಿಸಿ, ಹಣ ನೀಡಿದರು. ಅಲ್ಲದೇ, ವಿದ್ಯಾರ್ಥಿಗಳು ತರಕಾರಿ ಮಾರಾಟದಿಂದ ಬಂದ ಹಣವನ್ನು ತೋಟಗಾರಿಕೆಗೆ ಬಂಡವಾಳ ಹಾಕುವುದಾಗಿ ರಘು ಅವರಿಗೆ ತಿಳಿಸಿದ್ದಾರೆ.

ಈಗಾಗಲೇ ಕೆಲ ವಿದ್ಯಾಥಿಗಳು ತಮ್ಮ ಮನೆಗಳಲ್ಲಿ ಗಿಡ ನೆಟ್ಟು ಪೋಷಿಸುತ್ತಿದ್ದಾರೆ. ಶಾಲೆಯಲ್ಲಿ ಹಸಿರು ಶಿಕ್ಷಣ ವಿಭಾಗದ ಮಾರ್ಗದರ್ಶನ ಪಡೆದು ಶಾಲಾ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳೇ ತರಕಾರಿಗಳನ್ನು ಬೆಳೆಯುತ್ತಿದ್ದು, ತಾವು ಬೆಳೆದ ತರಕಾರಿಯನ್ನು ಮಾರಾಟ ಮಾಡುವ ಮೂಲಕ ಭವಿಷ್ಯತ್ತಿನಲ್ಲಿ ತೋಟಗಾರಿಕೆ ಹಾಗೂ ಕೃಷಿ ಚಟುವಟಿಕೆಯು ಬದುಕಿನ ಮಹತ್ವದ ಭಾಗವಾಗುತ್ತದೆ ಎಂಬ ಸಂದೇಶ ರವಾನಿಸಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಆರ್.ರಘು ಅವರು ತಿಳಿಸಿದ್ದಾರೆ.

ಸಾಗರೆ ಗ್ರಾಮದಲ್ಲಿ ಸಾಮಾಜಿಕ ಬಹಿಷ್ಕಾರ; ಪ್ರಜಾಪಾರ್ಟಿ ಖಂಡನೆ

ಮೈಸೂರು,ಅ.13(ಜಿಎ)–ಮೈಸೂರಿನ ಸರಗೂರು ತಾಲೂಕಿನ ಸಾಗರೆ ಗ್ರಾಮ ದಲ್ಲಿ ಕುಟುಂಬವನ್ನು ಕ್ಷುಲ್ಲಕ ಕಾರಣಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಿದ್ದು ಈ ಬಗ್ಗೆ ಜಿಲ್ಲಾಧಿಕಾರಿ, ಎಸ್‌ಪಿಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ. ದಸರಾ ಮಹೋತ್ಸವದ ನೆಪವೊಡ್ಡಿ ಇಷ್ಟು ದಿನ ಸಮಸ್ಯೆ ಬಗೆಹರಿಸಲು ಯಾವುದೇ ಅಧಿಕಾರಿ ಭೇಟಿ ನೀಡಿಲ್ಲ. ಶೀಘ್ರವಾಗಿ ಸಮಸ್ಯೆ ಬಗೆಹರಿಸದಿದ್ದರೆ ಪ್ರತಿಭಟನೆ ಮಾಡುತ್ತೇವೆ ಎಂದು ಕರ್ನಾಟಕ ಪ್ರಜಾಪಾರ್ಟಿ(ರೈತ ಪರ್ವ) ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ಎಚ್ಚರಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದ ನಂಜೇಗೌಡ ಹಾಗೂ ಅವರ ಪತ್ನಿ ದೊಡ್ಡತಾಯಮ್ಮ ಸತತವಾಗಿ ಸಾಗರೆ ಗ್ರಾಪಂ ಅಧ್ಯಕ್ಷರು ಮತ್ತು ಸದಸ್ಯರಾಗಿ ಗ್ರಾಮಕ್ಕೆ ಮಾತ್ರವಲ್ಲದೆ, ಇತರರಿಗೂ ನೆರವಾಗಿದ್ದಾರೆ. ಇದನ್ನು ಗ್ರಾಮದ ಕೆಲ ಸಮುದಾಯ ಸಹಿಸುತ್ತಿಲ್ಲ. ಹೀಗಾಗಿ ನಂಜೇಗೌಡ ಅವರು ಮನೆ ನಿರ್ಮಿಸಿಕೊಂಡಿರುವ ಜಾಗ ಖರಾಬು ಎಂದು ಸುಳ್ಳು ಹೇಳಿ 3 ತಿಂಗಳೊಳಗಾಗಿ ಮನೆ ಖಾಲಿ ಮಾಡಿ, ಜಾಗ ನೀಡಬೇಕು ಎಂದು ಬೆದರಿಕೆ ಹಾಕಿದ್ದರು. ಇದಕ್ಕೆ ಇವರು ಜಗ್ಗದಿದ್ದಾಗ ಅವರ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ. ಈ ಕುರಿತು ಜಿಲ್ಲಾಧಿಕಾರಿ, ಎಸ್‌ಪಿ, ತಹಶೀಲ್ದಾರರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಹೀಗಾಗಿ ಸಂಬಂಧಿಸಿದವರು ಕ್ರಮ ಕೈಗೊಳ್ಳದಿದ್ದರೆ ಸಾಗರೆ ಗ್ರಾಪಂ ಎದುರು ಪ್ರತಿಭಟನೆ ನಡೆಸಿ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವುದಾಗಿ ಎಚ್ಚರಿಸಿದರು.

ದೊಡ್ಡತಾಯಮ್ಮ ಮಾತನಾಡಿ, ಗ್ರಾಮದ ಕೆಲವರು ನಮಗೆ ಬಹಿಷ್ಕಾರ ಹಾಕಿರುವುದರಿಂದ ಗ್ರಾಮದಲ್ಲಿ ಯಾರು ನಮ್ಮೊಟ್ಟಿಗೆ ಮಾತನಾಡುತ್ತಿಲ್ಲ. ಅಂಗಡಿಯಲ್ಲಿ ಸಾಮಾಗ್ರಿಗಳನ್ನು ನೀಡುತ್ತಿಲ್ಲ. ಅಕ್ಕಿ, ಗೋಧಿ, ರಾಗಿಯನ್ನು ಫ್ಲೋರ್ ಮಿಲ್‌ಗೆ ತೆಗೆದುಕೊಂಡು ಹೋದರೆ, 'ನಿಮಗೆ ಏನೂ ಮಾಡಿಕೊಡುವುದಿಲ್ಲ. ಗ್ರಾಮದಲ್ಲಿ ಬಹಿಷ್ಕಾರ ಹಾಕಿದ್ದಾರೆ' ಎಂದು ಹೇಳುತ್ತಿದ್ದಾರೆ ಎಂದು ಅವರು ಅಳಲು ತೋಡಿಕೊಂಡರು.

ಸುದ್ದಿಗೋಷ್ಠಿಯಲ್ಲಿ ಎಸ್.ಎಂ.ನಂಜೇಗೌಡ, ಪುತ್ರ ವಕೀಲ ಸಾಗರೆ ಶಿವಕುಮಾರ್, ಪಕ್ಷದ ಪದಾಧಿಕಾರಿಗಳಾದ ಭಾಗ್ಯಮ್ಮ, ವರಕೋಡು ಕೃಷ್ಣೇಗೌಡ, ಸಿಂಧುವಳ್ಳಿ ಶಿವಕುಮಾರ್, ಪ್ರದೀಪ್, ಶ್ರೀನಿವಾಸ್ ಉಪಸ್ಥಿತರಿದ್ದರು.

ಪ್ರಧಾನಿ ಮೋದಿ ಭೇಟಿಯಾದ ಬಿ.ಎಸ್. ಯಡಿಯೂರಪ್ಪ

ನವದೆಹಲಿ, ಅ.13– ನವದೆಹಲಿಯಲ್ಲಿ ಇಂದು ಪ್ರಧಾನಿ ನರೇಂದ್ರ ಮೋದಿಯವರನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಭೇಟಿಯಾದರು. ಈ ಕುರಿತು ಅವರು ಎಕ್ಸ್ ಖಾತೆಯಲ್ಲಿ ಮೋದಿ ಜೊತೆಗಿನ ಫೋಟೊ ಹಂಚಿ ಕೊಂಡು ಪ್ರಧಾನಿ ಅವರನ್ನು ಭೇಟಿಯಾಗಿ ಮುಂಬರುವ ದೀಪಾವಳಿ ಶುಭಾಶಯಗಳನ್ನು ತಿಳಿಸಿದೆ ಎಂದು ಹೇಳಿಕೊಂಡಿದ್ದಾರೆ.



ಇದಕ್ಕೂ ಮುನ್ನ ಬಿಹಾರ ವಿಧಾನಸಭಾ ಚುನಾವಣೆ ಹಿನ್ನಲೆಯಲ್ಲಿ ಇಂದು ನವದೆಹಲಿಯಲ್ಲಿ ನಡೆದ ಕೇಂದ್ರೀಯ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸಭೆಯಲ್ಲಿ ಯಡಿಯೂರಪ್ಪ ಪಾಲ್ಗೊಂಡಿದ್ದಾರೆ. ಈ ಸಭೆಯಲ್ಲಿ ಪ್ರಧಾನಿ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಹಾಗೂ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಹಿರಿಯ ನಾಯಕರ ಉಪಸ್ಥಿತಿಯಲ್ಲಿ ಅವರು ಪಾಲ್ಗೊಂಡಿದ್ದರು.

ದೇಶ – ವಿದೇಶ

ನೇಪಾಳ ಜೈಲಿನಿಂದ ತಪ್ಪಿಸಿಕೊಂಡ ಶಂಕಿತ ಪಾಕ್ ಮಹಿಳೆ ತ್ರಿಪುರಾದಲ್ಲಿ ಸೆರೆ

ಗುವಾಹತಿ: ಮಾದಕ ವಸ್ತು ಕಳ್ಳಸಾಗಣೆ ಜಾಲದಲ್ಲಿ ಶಾಮೀಲಾಗಿ, ನೇಪಾಳ ಜೈಲಿನಿಂದ ತಪ್ಪಿಸಿಕೊಂಡಿದ್ದ 65 ವರ್ಷದ ಶಂಕಿತ ಪಾಕಿಸ್ತಾನಿ ಮಹಿಳೆಯನ್ನು ದಕ್ಷಿಣ ತ್ರಿಪುರಾ ಜಿಲ್ಲೆಯ ಗಡಿ ಪಟ್ಟಣ ಸಬ್ರೂಮ್‌ನಲ್ಲಿ ಬಂಧಿಸಲಾಗಿದೆ. ಬಂಧಿತ ಮಹಿಳೆಯನ್ನು ಲೂಯಿಸ್ ನಿಗಾತ್ ಅಖ್ತರ್ ಬಾನೊ ಎಂದು ಗುರುತಿಸಲಾಗಿದ್ದು, ಸಬ್ರೂಮ್ ರೈಲು ನಿಲ್ದಾಣದಲ್ಲಿ ಸರ್ಕಾರಿ ರೈಲ್ವೆ ಪೊಲೀಸರು ಆಕೆಯನ್ನು ಬಂಧಿಸಿ ಬಳಿಕ ವಿಚಾರಣೆಗಾಗಿ ಸ್ಥಳೀಯ ಪೊಲೀಸರಿಗೆ ಹಸ್ತಾಂತರಿಸಿದ್ದಾರೆ ಎಂದು ಸಬ್ರೂಮ್ ಠಾಣಾಧಿಕಾರಿ ನಿತ್ಯಾನಂದ ಸರ್ಕಾರ್ ಹೇಳಿದ್ದಾರೆ. ಆರೋಪಿ ಮಹಿಳೆ ಗಡಿಯ ಇನ್ನೊಂದು ಭಾಗಕ್ಕೆ ತೆರಳಿ ಬಾಂಗ್ಲಾದೇಶಕ್ಕೆ ತೆರಳುವ ಯೋಚನೆ ಹೊಂದಿದ್ದಳು. ಪೊಲೀಸರು ಹಾಗೂ ಇತರ ಭದ್ರತಾ ಏಜೆನ್ಸಿಗಳು ಈಕೆಯ ಚಲನ ವಲನ ಹಾಗೂ ಉದ್ದೇಶಗಳ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕಲು ವಿಚಾರಣೆ ನಡೆಸುತ್ತಿದ್ದಾರೆ ಎಂದು ಸರ್ಕಾರ್ ವಿವರಿಸಿದ್ದಾರೆ. ಈಕೆ ನೇಪಾಳ ಜೈಲಿನಿಂದ ತಪ್ಪಿಸಿಕೊಂಡು ಬಂದಿದ್ದು, ಪಾಕಿಸ್ತಾನದ ಸಂಬಂಧ ಹೊಂದಿರಬೇಕು ಎನ್ನುವ ಅಂಶ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ.



ನಾನು ಕದನ ನಿಲ್ಲಿಸುವ ನಿಪುಣ; ಎಂಟು ಸಮರಗಳ ಅಂತ್ಯ ನೊಬೆಲ್‌ಗಾಗಿ ಅಲ್ಲ

ವಾಷಿಂಗ್ಟನ್: ಭಾರತ ಹಾಗೂ ಪಾಕಿಸ್ತಾನ ನಡುವಣ ಸಂಘರ್ಷವೂ ಸೇರಿದಂತೆ ಒಟ್ಟು ಎಂಟು ಯುದ್ಧಗಳನ್ನು ನಿಲ್ಲಿಸಿರುವುದಾಗಿ ಹೇಳಿಕೊಂಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇದನ್ನೆಲ್ಲ ಮಾಡಿದ್ದು ನೊಬೆಲ್ ಶಾಂತಿ ಪುರಸ್ಕಾರಕ್ಕಾಗಿ ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಈವರೆಗೆ ಏಳು ಸಮರಗಳನ್ನು ಕೊನೆಗೊಳಿಸಿದ್ದಾಗಿ ಹೇಳಿಕೊಳ್ಳುತ್ತಿದ್ದ ಟ್ರಂಪ್, ಇಸ್ರೇಲ್–ಗಾಜಾ ಸಂಘರ್ಷ ಕೊನೆಗೊಳ್ಳುತ್ತಿದ್ದಂತೆ ಸಂಖ್ಯೆಯನ್ನು ಎಂಟಕ್ಕೆ ಏರಿಸಿಕೊಂಡಿದ್ದಾರೆ. ಇಸ್ರೇಲ್‌ಗೆ ತೆರಳುವ ಮುನ್ನ 'ಏರ್ ಫೋರ್ಸ್ ಒನ್' ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿರುವ ಅಮೆರಿಕ ಅಧ್ಯಕ್ಷ, ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನ ನಡುವೆ ನಡೆಯುತ್ತಿರುವ ಸಂಘರ್ಷವನ್ನೂ ಕೊನೆಗೊಳಿಸುವ ಯೋಜನೆಯಲ್ಲಿರುವುದಾಗಿ ಹೇಳಿಕೊಂಡಿದ್ದಾರೆ. ಇಸ್ರೇಲ್–ಗಾಜಾ ಸಂಘರ್ಷ ಅಂತ್ಯದ ಕುರಿತು, 'ಇದು ನಾನು ಅಂತ್ಯಗೊಳಿಸಿದ 8ನೇ ಯುದ್ಧವಾಗಿದೆ. ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ನಡುವೆ ಸಂಘರ್ಷ ನಡೆಯುತ್ತಿರುವ ಸುದ್ದಿ ಕೇಳಿದ್ದೇನೆ. ನಾನು ಹಿಂತಿರುಗುವವರೆಗೆ ಕಾಯಬೇಕು ಎಂದಿದ್ದೇನೆ. ಮತ್ತೊಂದು ಯುದ್ಧ ಕೊನೆಗೊಳಿಸುತ್ತಿದ್ದೇನೆ. ನಾನು ಸಮರ ಅಂತ್ಯಗೊಳಿಸುವ ನಿಪುಣ. ಶಾಂತಿ ಸ್ಥಾಪಿಸುವ ಸಮರ್ಥ ಎಂದು ಹೊಗಳಿಕೊಂಡಿದ್ದಾರೆ.



ಖ್ಯಾತ ಕೇಶವಿನ್ಯಾಸಕ ಜಾವೇದ್ ಹಬೀಬ್, ಪುತ್ರನ ವಿರುದ್ಧ 32 ಎಫ್‌ಐಆರ್ ದಾಖಲು

ನವದೆಹಲಿ: ಕೇಶವಿನ್ಯಾಸಕ ಜಾವೇದ್ ಹಬೀಬ್, ಅವರ ಮಗ ಮತ್ತು ಸಹಚರರು ಬಿಟ್‌ಕಾಯಿನ್‌ನಲ್ಲಿ ಹಣ ಹೂಡಿದರೆ ಹತ್ತು ಪಟ್ಟು ಆದಾಯದ ಭರವಸೆ ನೀಡಿ ಹಲವು ಹೂಡಿಕೆದಾರರಿಂದ ತಲಾ 5–7 ಲಕ್ಷ ರೂ.ಗಳನ್ನು ಪಡೆದಿದ್ದಾರೆ ಎಂದು ಆರೋಪಿಸಲಾಗಿದೆ. ಫೋಲಿಕಲ್ ಗ್ಲೋಬಲ್ ಕಂಪನಿ ಎಂಬ ಕಂಪನಿಯ ಬ್ಯಾನರ್ ಅಡಿಯಲ್ಲಿ ಹೂಡಿಕೆದಾರರಿಗೆ ಬಿಟ್‌ಕಾಯಿನ್ ಖರೀದಿಯ ಮೇಲೆ ವಾರ್ಷಿಕ ಶೇ.50–70ರಷ್ಟು ಲಾಭ ನೀಡುವ ಭರವಸೆ ನೀಡಿದ್ದರು. ಸಂಭಾಲ್ ಎಸ್ಪಿ ಕೃಷ್ಣಕುಮಾರ್ ವಿಷ್ಣೋಯ್ ಪ್ರಕಾರ, ಹೆಚ್ಚಿನ ಲಾಭದ ಭರವಸೆ ನೀಡಿ, ವಿವಿಧ ಹೂಡಿಕೆದಾರರಿಂದ ತಲಾ 5–7 ಲಕ್ಷ ರೂ. ಪಡೆದು 2 ವರ್ಷಗಳಾದರೂ, ಹೂಡಿಕೆದಾರರಿಗೆ ಹಬೀಬ್ಸ್ ಯಾವುದೇ ಲಾಭ ನೀಡಲು ವಿಫಲರಾಗಿದ್ದಾರೆ. ಆರಂಭಿಕ ತನಿಖೆಯಲ್ಲಿ ಮೂವರು ಆರೋಪಿಗಳು ಸುಮಾರು 5–7 ಕೋಟಿ ರೂ.ಗಳ ವಂಚನೆ ಮಾಡಿದ್ದಾರೆ ಎಂದು ತಿಳಿದುಬಂದಿದೆ. ವಿವರವಾದ ತನಿಖೆ ನಂತರ, ಜಾವೇದ್ ಹಬೀಬ್, ಅವರ ಮಗ ಅನೋಸ್ ಮತ್ತು ಸೈಫುಲ್ ಎಂಬ ಸಹಚರನ ವಿರುದ್ಧ 32 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.




ಅಫ್ಘಾನ್ ಗಡಿಯಲ್ಲಿ 23 ಪಾಕ್ ಸೈನಿಕರು, 200 ತಾಲಿಬಾನ್‌ಗಳ ಹತ್ಯೆ

ಇಸ್ಲಾಮಾಬಾದ್: ಅಫ್ಘಾನಿಸ್ತಾನ ವಿದೇಶಾಂಗ ಸಚಿವ ಅಮೀರ್ ಖಾನ್ ಮುತಾಕಿ ಭಾರತ ಭೇಟಿಯಲ್ಲಿರುವಂತೆಯೇ ಅತ್ತ ಅಫ್ಘಾನ್–ಪಾಕ್ ಗಡಿಯಲ್ಲಿ ಉದ್ವಿಗ್ನತೆ ಹೆಚ್ಚಾಗಿದ್ದು, ಮಾರಣಹೋಮ ನಡೆಯುತ್ತಿದೆ. ಗಡಿಯಲ್ಲಿ ರಾತ್ರಿಯಿಡೀ ನಡೆದ ಘರ್ಷಣೆಯಲ್ಲಿ 23 ಪಾಕಿಸ್ತಾನಿ ಸೈನಿಕರು ಮತ್ತು 200 ಕ್ಕೂ ಹೆಚ್ಚು ತಾಲಿಬಾನ್ ಸೈನಿಕರು ಹಾಗೂ ಅದರ ಉಗ್ರರು ಹತರಾಗಿದ್ದಾರೆ ಎಂದು ಪಾಕಿಸ್ತಾನಿ ಸೇನೆ ಭಾನುವಾರ ತಿಳಿಸಿದೆ. ಗಡಿಯಾಚೆಗಿನ ಆಕ್ರಮಣದ ಪರಸ್ಪರ ಆರೋಪಗಳ ನಡುವೆ ನೆರೆಹೊರೆಯವರ ನಡುವೆ ಉದ್ವಿಗ್ನತೆ ಉಲ್ಬಣಗೊಂಡಿದೆ.

ಗಡಿ ಪ್ರದೇಶಗಳಲ್ಲಿ ಅಫ್ಘಾನ್ ಪಡೆಗಳ ಅಪ್ರಚೋದಿತ ದಾಳಿಗಳಿಗೆ ಪ್ರತಿಕ್ರಿಯೆಯಾಗಿ 19 ಅಫ್ಘಾನ್ ಮಿಲಿಟರಿ ಪೋಸ್ಟ್‌ಗಳು ಮತ್ತು ಭಯೋತ್ಪಾದಕ ಅಡಗುತಾಣಗಳನ್ನು ವಶಕ್ಕೆ ಪಡೆದಿರುವುದಾಗಿ ಪಾಕಿಸ್ತಾನ ಹೇಳಿಕೊಂಡಿದೆ.

ಈ ಮಧ್ಯೆ ಪ್ರತೀಕಾರದ ಕಾರ್ಯಾಚರಣೆಯಲ್ಲಿ 58 ಪಾಕಿಸ್ತಾನಿ ಸೈನಿಕರು ಸಾವನ್ನಪ್ಪಿದ್ದು, 30 ಜನರು ಗಾಯಗೊಂಡಿದ್ದಾರೆ ಎಂದು ಕಾಬೂಲ್ ಹೇಳಿದೆ.



ಬಾವಿಗೆ ಹಾರಿದ್ದ ಮಹಿಳೆ ರಕ್ಷಿಸುವಾಗ ಕುಸಿದ ತಡೆಗೋಡೆ: ಅಗ್ನಿಶಾಮಕ ಸಿಬ್ಬಂದಿ ಸಾವು

ಕೊಲ್ಲಂ (ಕೇರಳ): ಕೊಲ್ಲಂ ಸಮೀಪದ ನೆಡುವತ್ತೂರಿನಲ್ಲಿ ಬಾವಿಗೆ ಹಾರಿದ್ದ ಮಹಿಳೆಯನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾಗ ನಡೆದ ಅವಘಡದಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ ಸೇರಿದಂತೆ ಮೂವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ನೆಡುವತ್ತೂರಿನ ಅರ್ಚನಾ (ಬಾವಿಗೆ ಹಾರಿದ್ದ ಮಹಿಳೆ), ಆಕೆಯ ಸ್ನೇಹಿತ ಶಿವಕೃಷ್ಣನ್ ಮತ್ತು ಕೊಟ್ಟಾರಕ್ಕರ ಠಾಣೆಯ ಅಗ್ನಿಶಾಮಕ ಮತ್ತು ರಕ್ಷಣಾ ಸೇವೆಗಳ ಅಧಿಕಾರಿ ಸೋನಿ ಎಸ್.ಕುಮಾರ್ ಮೃತರು. ಭಾನುವಾರ ಮಧ್ಯರಾತ್ರಿ ಸುಮಾರಿಗೆ, ನೆಡುವತ್ತೂರಿನಲ್ಲಿ 80 ಅಡಿ ಆಳದ ಬಾವಿಗೆ ಮಹಿಳೆಯೊಬ್ಬರು ಹಾರಿದ್ದಾರೆ ಎಂದು ಮಾಹಿತಿ ಬಂದಿತು. ತಕ್ಷಣ ಘಟನಾ ಸ್ಥಳಕ್ಕೆ ಧಾವಿಸಿದ ರಕ್ಷಣಾ ತಂಡ ಕಾರ್ಯಾಚರಣೆ ಆರಂಭಿಸಿತು. ಕುಮಾರ್ ಅವರು ಸುರಕ್ಷತಾ ಸಾಧನಗಳನ್ನು ಧರಿಸಿ ಬಾವಿಗೆ ಇಳಿಯುತ್ತಿದ್ದಂತೆ, ಬಾವಿಗೆ ಹಾಕಿದ್ದ ತಡೆಗೋಡೆ ಕುಸಿದು ಅರ್ಚನಾ ಮತ್ತು ಕುಮಾರ್ ಅವರ ಮೇಲೆ ಬಿದ್ದಿದೆ. ಅದೇ ವೇಳೆ ಹತ್ತಿರದಲ್ಲಿ ನಿಂತಿದ್ದ ಶಿವಕೃಷ್ಣನ್ ಕೂಡ ಬಾವಿಗೆ ಬಿದ್ದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ಗೋವುಗಳ ಸಾಗಿಸುತ್ತಿದ್ದ ವಾಹನ ಪಲ್ಟಿ ; ಆರೋಪಿಗಳು ಪರಾರಿ


ಉರುಳಿ ಬಿದ್ದಿರುವ ಗೂವುಗಳನ್ನು ಸಾಗಿಸುತ್ತಿದ್ದ ಗೂಡ್ಸ್ ವಾಹನ

ಮಡಿಕೇರಿ, ಅ.13–ಅಕ್ರಮವಾಗಿ ಗೋವುಗಳನ್ನು ಸಾಗಿಸುತ್ತಿದ್ದ ಗೂಡ್ಸ್ ವಾಹನ ಪಲ್ಟಿಯಾಗಿ 3 ಗೋವುಗಳು ಗಾಯಗೊಂಡಿದ್ದರೆ, ವಾಹನದಲ್ಲಿದ್ದ ಇಬ್ಬರು ಆರೋಪಿಗಳು ಬೇರೊಂದು ಕಾರಿನಲ್ಲಿ ಪರಾರಿಯಾಗಿರುವ ಘಟನೆ ಸೋಮವಾರಪೇಟೆ ತಾಲೂಕಿನ ಶನಿವಾರಸಂತೆ ರಸ್ತೆಯಲ್ಲಿನ ಕಾಗಡಿಕಟ್ಟೆಯಲ್ಲಿ ನಡೆದಿದೆ.

ಚಾಲಕನ ಹತೋಟಿ ತಪ್ಪಿ ರಾತ್ರಿ 2.30 ರ ಸಮಯದಲ್ಲಿ ಅಶೋಕ್ ಲೇಲ್ಯಾಂಡ್ ಗೂಡ್ಸ್ (ಕೆಎ13,ಬಿ–3078) ವಾಹನವು ಉರುಳಿ ಬಿದ್ದಿದ್ದು, ಕೂಡಲೇ ಗಾಯಗೊಂಡಿದ್ದ ಇಬ್ಬರು ಆರೋಪಿಗಳು ದೂರವಾಣಿ ಮುಖೇನ ತಮ್ಮ ಕಡೆಯವರನ್ನು ಸಂಪರ್ಕಿಸಿ ಅಪಘಾತದ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಧಾವಿಸಿದವರು ಇನ್ನೋವ ಕಾರಿನಲ್ಲಿ ಗೂಡ್ಸ್ ವಾಹನದ ಚಾಲಕ ಮತ್ತು ಇನ್ನೊಬ್ಬಾತನನ್ನು ಬೇರೆಡೆಗೆ ಸಾಗಿಸಿರುವುದಾಗಿ ತಿಳಿದು ಬಂದಿದೆ. ಆರೋಪಿಗಳು ಗೂಡ್ಸ್ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾದ ಹಿನ್ನೆಲೆಯಲ್ಲಿ ಗೋ ಸಾಗಾಟ ಪ್ರಕರಣ ಬೆಳಕಿಗೆ ಬಂದಿದೆ. ಘಟನೆ ಕುರಿತು ಶನಿವಾರಸಂತೆ ಪೊಲೀಸರು ಪ್ರಕರಣ ದಾಖಲಿಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಆಗ್ರಹ : ಕೊಡಗಿನಲ್ಲಿ ಅಕ್ರಮ ಗೋವು ಸಾಗಾಟ, ಗೋಮಾಂಸ ಮಾರಾಟ ನಿರಂತರವಾಗಿ ನಡೆಯುತ್ತಿದ್ದು ಜನಪ್ರತಿನಿಧಿಗಳು ಅಧಿಕಾರಿಗಳಿಗೆ ಕಟ್ಟು ನಿಟ್ಟಿನ ಆದೇಶ ನೀಡಿದ್ದಲ್ಲಿ ಈ ಕಾನೂನು ಬಾಹಿರ ಚಟುವಟಿಕೆ ಮಟ್ಟ ಹಾಕಲು ಸಾಧ್ಯ. ಇದೀಗ ಅಪಘಾತದ ಮೂಲಕ ಗಮನಕ್ಕೆ ಬಂದಿರುವ ಪ್ರಕರಣವನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿ ಯಾವುದೇ ರಾಜಕೀಯ ಒತ್ತಡಗಳಿಗೆ ಮಣಿಯದೆ ಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಹಿಂದು ಜಾಗರಣ ವೇದಿಕೆ ಜಿಲ್ಲಾ ಸಂಯೋಜಕ ಭೋಜೇಗೌಡ ಆಗ್ರಹಿಸಿದ್ದಾರೆ.

ವಿರಾಜಪೇಟೆ ವಕೀಲರ ಸಂಘದ ಅಧ್ಯಕ್ಷರಿಗೆ ಪ್ರಾಣ ಬೆದರಿಕೆ; ಮೂವರ ಬಂಧನ





ವಕೀಲರ ಸಂಘದ ಅಧ್ಯಕ್ಷರಿಗೆ ಕೊಲೆ ಬೆದರಿಕೆಯೊಡ್ಡಿರುವವರನ್ನು ಬಂಧಿಸುವಂತೆ ಒತ್ತಾಯಿಸಿ ವಿರಾಜಪೇಟೆ ಮತ್ತು ಜಿಲ್ಲಾ ವಕೀಲರ ಸಂಘ ಸೋಮವಾರ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದವು.

ಮಡಿಕೇರಿ/ವಿರಾಜಪೇಟೆ, ಅ.13– ವಕೀಲರ ಸಂಘದ ಅಧ್ಯಕ್ಷ ಸಿ.ಕೆ.ಪೂವಣ್ಣರ ಕಚೇರಿಗೆ ಒಂದೇ ಕುಟುಂಬದ ಮೂವರು ನುಗ್ಗಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೆ, ಹಲ್ಲೆಗೆ ಯತ್ನಿಸಿ ಪ್ರಾಣ ಬೆದರಿಕೆಯೊಡ್ಡಿರುವ ಘಟನೆ ವಿರಾಜಪೇಟೆಯಲ್ಲಿ ನಡೆದಿದೆ.

ಅಂಬಟ್ಟಿ ಗ್ರಾಮದ ನಿವಾಸಿಗಳಾದ ಎಂ.ಸಿ.ವಿಜಯ್ ಕುಮಾರ್ ಅವರ ಮಗ ಸುನಿಲ್, ಮಗಳು ಸಂಧ್ಯಾ ಎಂಬುವವರು ಮೊಕದ್ದಮೆಗೆ ಸಂಬಂಧಿಸಿದಂತೆ ನಿನ್ನೆ ವಕೀಲರ ಕಚೇರಿಗೆ ನುಗ್ಗಿ ಅಶ್ಲೀಲ ಶಬ್ದಗಳಿಂದ ಅವರನ್ನು ನಿಂದಿಸಿ ಹಲ್ಲೆಗೆ ಯತ್ನಿಸಿ ಬೆದರಿಕೆ ಹಾಕಿಯೊಡ್ಡಿದ್ದಾರೆ. ಈ ಕುರಿತು ವಕೀಲ ಪೂವಣ್ಣ ವಿರಾಜಪೇಟೆ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ವಕೀಲರ ಖಂಡನೆ: ವಕೀಲರ ಸಂಘದಲ್ಲಿ ನಡೆದ ತುರ್ತು ಸಭೆಯಲ್ಲಿ ಘಟನೆಯನ್ನು ಖಂಡಿಸಿದ ವಕೀಲರು ಆರೋಪಿಗಳ ವಿರುದ್ಧ ಸೂಕ್ತ ತನಿಖೆ ನಡೆಸಬೇಕು. ಆರೋಪಿಗಳ ಪರ ಜಿಲ್ಲೆಯ ಯಾವುದೇ ವಕೀಲರು ವಕಾಲತು ವಹಿಸಬಾರದು ಎಂದು ನಿರ್ಣಯ ಕೈಗೊಳ್ಳಲಾಯಿತು ಎಂದು ಸಂಘದ ಉಪಾಧ್ಯಕ್ಷ ಪ್ರಶಾಂತ್ ತಿಳಿಸಿದರು. ಕೂಡಲೇ ಆರೋಪಿಗಳನ್ನು ಬಂಧಿಸಬೇಕು. ತಪ್ಪಿದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ನ್ಯಾಯಾಲಯ ಕಲಾಪಗಳನ್ನು ಬಹಿಷ್ಕರಿಸಿ ಪ್ರತಿಭಟನಾ ಮೆರವಣಿಗೆಯಲ್ಲಿ ತೆರಳಿ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಅವರಿಗೆ ಮನವಿ ಪತ್ರ ಸಲ್ಲಿಸಿ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಜಿಲ್ಲಾ ನ್ಯಾಯಾಲಯದಲ್ಲೂ ಪ್ರಕರಣವನ್ನು ಖಂಡಿಸಿ ಕಲಾಪ ಬಹಿಷ್ಕರಿಸಿ ಪ್ರತಿಭಟನೆ ನಡೆಸಲಾಯಿತು. ಮಡಿಕೇರಿ ಬಾರ್ ಕೌನ್ಸಿಲ್ ಸದಸ್ಯರು ಪ್ರತಿಭಟನೆ ನಡೆಸಿ ವಕೀಲರಿಗೆ ಸೂಕ್ತ ಭದ್ರತೆ ಒದಗಿಸಬೇಕು. ತಕ್ಷಣವೇ ಪೊಲೀಸರು ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಮಡಿಕೇರಿ ವಕೀಲರ ಸಂಘದ ಅಧ್ಯಕ್ಷ ಸಿ.ಟಿ. ಜೋಸೆಫ್ ಮಾತನಾಡಿ, ರಾಜ್ಯದಲ್ಲಿ ವಕೀಲರ ಸಂರಕ್ಷಣಾ ಕಾಯಿದೆ ಚಾಲ್ತಿಯಲ್ಲಿದ್ದರೂ ವಕೀಲರಿಗೆ ಭದ್ರತೆ ಇಲ್ಲವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಸಿ.ಕೆ.ಪೂವಣ್ಣ ಅವರ ಮೇಲಿನ ಹಲ್ಲೆ ಯತ್ನ ಮತ್ತು ಬೆದರಿಕೆ ಪ್ರಕರಣವನ್ನು ಬಾರ್ ಕೌನ್ಸಿಲ್ ಖಂಡಿಸುತ್ತದೆ.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲೆತ್ನ ಪ್ರಕರಣವನ್ನೂ ಮಡಿಕೇರಿ ವಕೀಲರ ಸಂಘ ತೀವ್ರವಾಗಿ ಖಂಡಿಸುತ್ತದೆ ಎಂದು ಹೇಳಿದರು.

ಆರೋಪಿಗಳ ಬಂಧನ

ವಕೀಲರಿಗೆ ಕೊಲೆ ಬೆದರಿಕೆಯೊಡ್ಡಿದ್ದ ಆರೋಪಿಗಳಾದ ಎಂ.ಸಿ.ವಿಜಯ್ ಕುಮಾರ್ ಮಗ ಸುನಿಲ್, ಮಗಳು ಸಂಧ್ಯಾರವರನ್ನು ಬಂಧಿಸಿರುವುದಾಗಿ ಸಬ್ ಇನ್ಸ್‌ಪೆಕ್ಟರ್ ಪ್ರಮೋದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಾಳೆ ಜಿಲ್ಲಾ ಮಟ್ಟದ ಯುವಜನೋತ್ಸವ ಸಮಾರಂಭ

ಮಡಿಕೇರಿ, ಅ.13–ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವು ಅ.15ರ ಬೆಳಿಗ್ಗೆ 9.30 ಗಂಟೆಗೆ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಶಾಸಕರಾದ ಡಾ.ಮಂತರ್ ಗೌಡ, ಎ.ಎಸ್. ಪೊನ್ನಣ್ಣ, ಸಂಸದ ಯದುವೀರ್, ರಾಜ್ಯಸಭಾ ಸದಸ್ಯ ಅಜಯ್ ಮಾಕನ್, ವಿಧಾನಪರಿಷತ್ ಸದಸ್ಯರಾದ ಎಂ.ಪಿ. ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ, ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಜಿಪಂ ಆಡಳಿತಾಧಿಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್, ಡಿಸಿ ವೆಂಕಟ್‌ರಾಜಾ, ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ, ಎಸ್‌ಪಿ ಕೆ.ರಾಮರಾಜನ್ ಇತರರು ಪಾಲ್ಗೊಳ್ಳಲಿದ್ದಾರೆ.

ಖಾಲಿ ಇರುವ ಸರ್ಕಾರಿ ಹುದ್ದೆಗಳ ಭರ್ತಿಗೆ ಆಗ್ರಹ


ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ವಿದ್ಯಾರ್ಥಿಗೆ ಲ್ಯಾಪ್‌ಟಾಪ್ ವಿತರಿಸಿದರು.

ಮಂಡ್ಯ, ಅ.13– ಶಿಕ್ಷಣ, ಕೃಷಿ, ಆರೋಗ್ಯ, ಕಂದಾಯ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಶೇ.15ರಷ್ಟು ಹುದ್ದೆಗಳು ಖಾಲಿ ಇದ್ದು, ರಾಜ್ಯ ಸರ್ಕಾರ ಖಾಲಿ ಹುದ್ದೆಗಳ ಭರ್ತಿಗೆ ಶೀಘ್ರ ಕ್ರಮ ವಹಿಸಬೇಕು ಎಂದು ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಆಗ್ರಹಿಸಿದರು.

ಶ್ರೀರಂಗಪಟ್ಟಣ ತಾಲೂಕಿನ ಕಪರನಕೊಪ್ಪಲು ಗ್ರಾಮದ ರವಿಕುಮಾರ್ ಅವರ ಪುತ್ರ ಹರ್ಷ ಪ್ರಸಕ್ತ ಸಾಲಿನಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಸರ್ಕಾರಿ ಕೋಟಾದಲ್ಲಿ ಉಚಿತ ಸೀಟು ಪಡೆದಿರುವ ಹಿನ್ನಲೆಯಲ್ಲಿ ಎನ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್ ವತಿಯಿಂದ ಲ್ಯಾಪ್‌ಟಾಪ್ ವಿತರಿಸಿ ಅವರು ಮಾತನಾಡಿದರು.

ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರು ಹಾಗೂ ಉಪನ್ಯಾಸಕರ ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ಸಮರ್ಪಕವಾದ ಶಿಕ್ಷಣ ಸಿಗುತ್ತಿಲ್ಲ. ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರನ್ನು ಸಕಾಲಕ್ಕೆ ನೇಮಕ ಮಾಡುತ್ತಿಲ್ಲ. ಆರೋಗ್ಯ ಇಲಾಖೆಯಲ್ಲಿ ಕೂಡ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಹುದ್ದೆಗಳು ಖಾಲಿ ಉಳಿದಿವೆ. ಲೋಕೋಪಯೋಗಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಲ್ಲಿ ಇಂಜಿನಿಯರ್ ಹುದ್ದೆಗಳನ್ನು ಹಲವು ವರ್ಷಗಳಿಂದ ಭರ್ತಿ ಮಾಡಿಲ್ಲ. ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಉದ್ಯೋಗಾಕಾಂಕ್ಷಿಗಳಿಗೆ ಕೆಲಸ ಕೊಡಲು ಸರ್ಕಾರ ವಿಫಲ ವಾಗಿದೆ ಎಂದು ದೂರಿದರು.

ಇದೇ ವೇಳೆ ಜೂನಿಯರ್ ಐಸ್ ಸ್ಕೇಟಿಂಗ್ ಸ್ಪರ್ಧೆ ಏಶಿಯನ್ ಚಾಂಪಿಯನ್ ಶಿಪ್ ಕೂಟಕ್ಕೆ ಅರ್ಹತೆ ಪಡೆದ ಪಾಂಡವಪುರ ತಾಲೂಕಿನ ಹಿರೇಮರಳಿ ಗ್ರಾಮದ ಅರುಣ್‌ಗೌಡ ಅವರ ಪುತ್ರ ಧುವನ್‌ಗೌಡ ಹಾಗೂ ತರಬೇತುದಾರ ಮುರಳಿ ಅವರನ್ನು ಸಚ್ಚಿದಾನಂದ ಅಭಿನಂದಿಸಿದರು.

ಈ ವೇಳೆ ಮುಖಂಡರಾದ ಸತೀಶ್, ಗುಣವಂತ, ದಯಾನಂದ್, ಮಹೇಶ್, ಕೆ.ಜಯರಾಂ, ಪರಮೇಶ್, ಶಂಕರ್, ದಿವಾಕರ್, ನಲ್ಲಿ ರಾಮಣ್ಣ, ರಾಜೇಶ್, ಪ್ರಸನ್ನ, ನಿತಿನ್, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಬಲ್ಲೇನಹಳ್ಳಿ ಬಿ.ಸಿ.ಕೃಷ್ಣೇಗೌಡ, ದರ್ಶನ್ ಲಿಂಗರಾಜು, ಚಂದ್ರಣ್ಣ, ಹರೀಶ್, ಪಾಪಣ್ಣ, ರಂಜಿತ್ ಹಾಜರಿದ್ದರು.

ಆಲಂಬಾಡಿಕಾವಲು ಗ್ರಾಪಂಗೆ ಅತೀಕ್ ಅಹಮ್ಮದ್ ಅಧ್ಯಕ್ಷ


ನೂತನ ಅಧ್ಯಕ್ಷ ಅತೀಕ್ ಅಹಮ್ಮದ್ ಅವರನ್ನು ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್ ಅಭಿನಂದಿಸಿದರು.

ಕೆ.ಆರ್.ಪೇಟೆ, ಅ.13– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿ ಆಲಂಬಾಡಿಕಾವಲು ಗ್ರಾಪಂ ನೂತನ ಅಧ್ಯಕ್ಷರಾಗಿ ಅತೀಕ್ ಅಹಮ್ಮದ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಗುಡುಗನಹಳ್ಳಿ ಜಿ.ಜೆ.ವೆಂಕಟೇಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಅತೀಕ್ ಅಹಮ್ಮದ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ತಾಲೂಕು ಪಶು ಇಲಾಖೆ ಸಹಾಯ ನಿರ್ದೇಶಕ ಡಾ.ದೇವರಾಜು ಘೋಷಿಸಿದರು. ಸಹ ಚುನಾವಣಾಧಿಕಾರಿಯಾಗಿ ಪಿಡಿಓ ಮಾರ್ಗೋನಹಳ್ಳಿ ಶಿವಕುಮಾರ್ ಕಾರ್ಯ ನಿರ್ವಹಿಸಿದರು. ನೂತನ ಅಧ್ಯಕ್ಷರ ಅವಿರೋಧ ಆಯ್ಕೆಯಾಗುತ್ತಿದ್ದಂತೆ ಬೆಂಬಲಿಗರು ಪಟಾಕಿ ಸಿಡಿಸಿಮ ಸಿಹಿ ಹಂಚಿ ಸಂಭ್ರಮಿಸಿದರು.

ನೂತನ ಅಧ್ಯಕ್ಷ ಅತೀಕ್ ಅಹಮ್ಮದ್ ಮಾತನಾಡಿ, ಗ್ರಾಪಂನ ಸದಸ್ಯರೆಲ್ಲರೂ ಒಮ್ಮತದಿಂದ ನನ್ನನ್ನು ಅಧ್ಯಕ್ಷನಾಗಿ ಆಯ್ಕೆ ಮಾಡಿರುವುದಕ್ಕೆ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನ ಅಧಿಕಾರವಧಿಯಲ್ಲಿ ಎಲ್ಲಾ ಸದಸ್ಯರ ಸಹಕಾರದೊಂದಿಗೆ ಗ್ರಾಪಂ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಅಲ್ಲದೇ ಮೂಲ ಸೌಕರ್ಯ ಕಲ್ಪಿಸಲು ಪ್ರಯತ್ನಿಸುತ್ತೇನೆ ಎಂದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ನಮ್ಮ ಅಲಂಬಾಡಿಕಾವಲು ಗ್ರಾಪಂ ಸರ್ವ ಜನಾಂಗದ ಶಾಂತಿ ತೋಟ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಹಾಗಾಗಿ ಅತೀಕ್ ಅಹಮ್ಮದ್ ಅವರನ್ನು ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ನೂತನ ಅಧ್ಯಕ್ಷರು ತಮ್ಮ ಅಧಿಕಾರವಧಿಯಲ್ಲಿ ಸದಸ್ಯರ ಸಹಕಾರದೊಂದಿಗೆ ಗ್ರಾಪಂ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಗ್ರಾಪಂ ಸದಸ್ಯರಾದ ಕರಿಶೆಟ್ಟಿ, ಭಾಗ್ಯಮ್ಮ, ಜಿ.ಜೆ.ವೆಂಕಟೇಶ್, ಶ್ರೀನಿವಾಸ್, ಚಂದ್ರಕಲಾ, ನಾಗೇಶ್, ಮುಜಾಹಿದ್, ವೇದಾಂಬ, ರೂಪ, ಸಾಕಮ್ಮ, ಎ.ರಾಜು, ಮುಖಂಡರಾದ ಜಿ.ಎ.ರಾಯಪ್ಪ, ಜಿ.ಸಿ.ಶ್ರೀನಿವಾಸ್, ಪಾಣ್‌ಬಾಬು, ಡಾ.ಬಸವರಾಜ್, ತನ್ವೀರ್ ಪಾಷಾ, ಅಲ್ತಾಫ್ ಸಾಬ್, ಧರ್ಮ ಇತರರಿದ್ದರು.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಮೇಲೆ ಶೂ ಎಸೆಯಲೆತ್ನ ಖಂಡಿಸಿ

ವಕೀಲನ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಪ್ರತಿಭಟನೆ


ವಕೀಲನ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮನವಿ ಸಲ್ಲಿಸಲಾಯಿತು.

ಕೆ.ಆರ್.ಪೇಟೆ, ಅ.13– ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ವಕೀ ಲನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪಟ್ಟಣದ ತಾಲೂಕು ಕಚೇರಿ ಎದುರು ತಾಲೂಕು ಛಲವಾದಿ ಮಹಾ ಸಭಾ ಮತ್ತು ದಲಿತ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ಹಾಗೂ ದಲಿತ ಮುಖಂಡರು ಪ್ರತಿಭಟನೆ ನಡೆಸಿ ತಹಸೀಲ್ದಾರ್ ಡಾ.ಅಶೋಕ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಪುರಸಭೆ ಹಿರಿಯ ಸದಸ್ಯ ಡಿ.ಪ್ರೇಮಕುಮಾರ್, ದಲಿತ ಮುಖಂಡರಾದ ರಾಜಯ್ಯ, ಜಯರಾಮ್, ಸಿಂಧಘಟ್ಟ ಸೋಮಸುಂದರ್, ರಾಮದಾಸ್, ಶಿವಪ್ರಸಾದ್, ಪ್ರದೀಪ್, ಉಮೇಶ್, ಶಶಿ, ಊಚನಹಳ್ಳಿ ನಟರಾಜ್, ನಿಂಗಯ್ಯ, ಹರಿಹರಪುರ ನರಸಿಂಹ, ರಾಜೇಶ್, ಡಾ.ಬಸಿರುಗಪ್ಪ, ರಂಗಸ್ವಾಮಿ, ಚೌಡೇನ ಹಳ್ಳಿ ದೇವರಾಜು, ಕಿಕ್ಕೇರಿ ರಾಜಣ್ಣ, ಚಿಕ್ಕಾ ಡಿಗನಹಳ್ಳಿ ಬಸವೇಶ, ಕೃಷ್ಣಾಪುರ ಗಿರೀಶ್, ನಾಟನಹಳ್ಳಿ ರಮೇಶ್, ಮಂಜು, ಜೈನಹಳ್ಳಿ ಹರೀಶ್, ಗಂಗಾಧರ್, ಬಸ್ತಿ ಪವಿ, ಮುದುಗೆರೆ ಮಹೇಂದ್ರ ಸೇರಿದಂತೆ ನೂರಾರು ಮುಖಂಡರು, ಯುವಕರು ಭಾಗವಹಿಸಿದ್ದರು.

ನಾಗಮಂಗಲ ಟಿಎಪಿಸಿಎಂಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ


ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಮುಖಂಡರು ಸನ್ಮಾನಿಸಿದರು.

ನಾಗಮಂಗಲ, ಅ.13– ನಾಗಮಂಗಲ ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಬಿ.ಎಂ. ಪ್ರಕಾಶ್, ಉಪಾಧ್ಯಕ್ಷರಾಗಿ ಧನರಾಜು ಅವಿರೋಧವಾಗಿ ಆಯ್ಕೆಯಾದರು.

ಇಲ್ಲಿನ ಟಿಎಪಿಸಿಎಂಎಸ್ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿ.ಎಂ.ಪ್ರಕಾಶ್ ಹಾಗೂ ಧನರಾಜು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ತಹಸೀಲ್ದಾರ್ ಜಿ.ಆದರ್ಶ ಘೋಷಿಸಿದರು.

ನೂತನ ಅಧ್ಯಕ್ಷ ಬಿ.ಎಂ.ಪ್ರಕಾಶ್ ಮಾತನಾಡಿ, ಟಿಎಪಿಸಿಎಂಎಸ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿರ್ದೇಶಕರು ಆಯ್ಕೆಯಾಗುವ ಮೂಲಕ ರೈತರ ಸೇವೆ ಮಾಡಲು ಅವಕಾಶ ಕಲ್ಪಿಸಿದ್ದಾರೆ. ಹೀಗಾಗಿ ಸಂಘದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು. ಇದೇ ವೇಳೆ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಮುಖಂಡರು ಸನ್ಮಾನಿಸಿದರು.

ಚಾಮರಾಜನಗರದಲ್ಲಿ ಬ್ರಹ್ಮೋಸ್ ಗಣಪತಿ ವಿಸರ್ಜನಾ ಮೆರವಣಿಗೆ



ಚಾಮರಾಜನಗರದಲ್ಲಿ ಗಣೇಶನ ಮೂರ್ತಿಯ ವಿಸರ್ಜನಾ ಮೆರವಣಿಗೆ ಸೋಮವಾರ ಅದ್ದೂರಿಯಾಗಿ ನಡೆಯಿತು.

ಚಾಮರಾಜನಗರ, ಅ.13–ನಗರದ ರಥದ ಬೀದಿಯಲ್ಲಿರುವ ಗುರುನಂಜಶೆಟ್ಟರ ಛತ್ರದ ಮುಂಭಾಗ ಶ್ರೀವಿದ್ಯಾಗಣಪತಿ ಮಂಡಳಿಯಿಂದ ಪ್ರತಿಷ್ಠಾಪಿಸಲಾಗಿದ್ದ ಸುಮಾರು 7 ಅಡಿ ಎತ್ತರದ ಬ್ರಹ್ಮೋಸ್ ರಾಕೆಟ್ ಮೇಲೆ ವಿರಮಿಸುತ್ತಿರುವ ಗಣೇಶನ ಮೂರ್ತಿಯ ವಿಸರ್ಜನಾ ಮೆರವಣಿಗೆ ಸೋಮವಾರ ಅದ್ದೂರಿಯಾಗಿ ನಡೆಯಿತು.

ಶೋಭಾಯಾತ್ರೆಗೆ ಚಾಲನೆ: ನಿಗದಿಯಂತೆ ಸೋಮವಾರ ಬೆಳಗ್ಗೆ 9.30ರ ಸಮಯದಲ್ಲಿ ಮೆರವಣಿಗೆ ಆರಂಭವಾಯಿತು. ಖಡಕ್ಪುರ ಮೊಹಲ್ಲಾ, ಡಾ.ಬಿ.ಆರ್. ಅಂಬೇಡ್ಕರ್ ಬೀದಿ, ದೇವಾಂಗ 3ನೇ ಬೀದಿ, ನಾಗಪ್ಪಶೆಟ್ಟರ ಚೌಕ, ಮೇಗಲ ನಾಯಕರ ಬೀದಿ, ಶ್ರೀಕನ್ನಿಕಾ ಪರಮೇಶ್ವರಿ ದೇವಸ್ಥಾನ, ಗಾಡಿಪೇಟೆ ಚೌಕ, ದೊಡ್ಡ ಅಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ನಾಯಕರ ಬೀದಿ, ಭಗೀರಥ, ಉಪ್ಪಾರ ಬಡಾವಣೆ, ಆದಿಶಕ್ತಿ ದೇವಸ್ಥಾನ, ಬಣಜಿಗರ ಬೀದಿ, ಭ್ರಮರಾಂಬ ಬಡಾವಣೆ, ಕುರುಬರ ಬೀದಿ, ಹಳ್ಳದ ಬೀದಿ, ಅಗ್ರಹಾರದ ಬೀದಿ ಸೇರಿದಂತೆ ನಾನಾ ಬೀದಿಗಳಲ್ಲಿ ಗಣಪತಿಯ ವಿಸರ್ಜನಾ ಶೋಭಾಯಾತ್ರೆ ಸಾಗಿತು.

ಶೋಭಾಯಾತ್ರೆಯಲ್ಲಿ ನಾನಾ ಜಾನಪದ ಕಲಾ ತಂಡಗಳು ಪಾಲ್ಗೊಳ್ಳುವ ಮೂಲಕ ಮೆರಗು ನೀಡಿತು. ನಂದಿ ಕಂಬ, ಗೊರವರ ಕುಣಿತ, ಕಂಸಾಳೆ, ಡೊಳ್ಳು ಕುಣಿತ, ಮಹಿಳಾ ವೀರಗಾಸೆ, ಪೂಜಾ ಕುಣಿತ, ಸೋಮನ ಕುಣಿತ, ಗಾಡಿ ಗೊಂಬೆ, ಹುಲಿ ವೇಷಧಾರಿಗಳು, ಚೆಂಡೆ, ವೀರಗಾಸೆ, ಚಿಂಗಾರಿ ಮೇಳ, ವಿವಿಧ ವೇಷಧಾರಿಗಳು, ಮಂಗಳವಾದ್ಯ, ಬ್ಯಾಂಡ್‌ಸೆಟ್ ಸೇರಿದಂತೆ ನಾನಾ ಕಲಾ ತಂಡಗಳು ಪಾಲ್ಗೊಂಡಿದ್ದವು. ತಮ್ಮದೇ ಆದ ಶೈಲಿಯಲ್ಲಿ ಕುಣಿಯುತ್ತಾ ಸಾಗಿದ ಕಲಾ ತಂಡಗಳು ಸಾರ್ವಜನಿಕರನ್ನು ಆಕರ್ಷಿಸಿದವು. ಅಂತಿಮವಾಗಿ ಸೋಮವಾರ ತಡರಾತ್ರಿವರೆಗೂ ನಗರದಲ್ಲಿ ಗಣೇಶ ಮೂರ್ತಿಯ ಮೆರವಣಿಗೆ ನಡೆಯಿತು. ಗಣಪತಿ ಮೆರವಣಿಗೆ ಹಿನ್ನೆಲೆಯಲ್ಲಿ ನಗರದ ಎಲ್ಲಾ ಬೀದಿಗಳಲ್ಲಿ ತಳಿರು ತೋರಣಗಳನ್ನು ಕಟ್ಟಲಾಗಿತ್ತು. ಮನೆಗಳ ಮುಂಭಾಗ ಬಣ್ಣ–ಬಣ್ಣದ ರಂಗೋಲಿ ಬಿಡಲಾಗಿತ್ತು. ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ನಾಗರೀಕರು ಪೂಜೆಗೆ ನೀಡಿ ನಮಸ್ಕರಿಸುತ್ತಿದ್ದುದು ಸರ್ವೇ ಸಾಮಾನ್ಯವಾಗಿತ್ತು.

ಬಿಗಿ ಭದ್ರತೆ: ಗಣಪತಿ ವಿಸರ್ಜನಾ ಶೋಭಾಯಾತ್ರೆಯಲ್ಲಿ ಶಾಂತಿ ಕಾಪಾಡುವ ಉದ್ದೇಶದಿಂದ ನಗರದೆಲ್ಲೆಡೆ ಬಿಗಿ ಪೊಲೀಸ್ ಬಂದೋಬಸ್ತ್ ಆಯೋ ಜಿಸಲಾಗಿತ್ತು. ಪ್ರಮುಖ ವೃತ್ತಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಸೂಕ್ಷ್ಮ ಪ್ರದೇಶಗಳು ಎಂದು ಗುರುತಿಸಿದ್ದ ಹಲವು ಕಡೆ ಹೆಚ್ಚಿನ ಪೊಲೀಸರನ್ನು ನೇಮಿಸಲಾಗಿತ್ತು. ಮೆರವಣಿಗೆ ಉದ್ದಕ್ಕೂ ಪೊಲೀಸರು, ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಿದ್ದರು. ನಗರಕ್ಕೆ ಬರುವ ಹಾಗೂ ಹೋಗುವ ಬಸ್‌ಗಳು, ವಾಹನಗಳಿಗೆ ಪರ್ಯಾಯ ರಸ್ತೆಗಳ ಮೂಲಕ ತೆರಳಲು ಅವಕಾಶ ಕಲ್ಪಿಸಲಾಗಿತ್ತು.

ರಾಮನಗುಡ್ಡ ಜಲಾಶಯದಿಂದ ಶಾಶ್ವತ ನೀರಾವರಿ ಕಾಮಗಾರಿಗೆ ಚಾಲನೆ


ರಾಮನಗುಡ್ಡ ಜಲಾಶಯಕ್ಕೆ ನೀರು ತುಂಬಿಸುವ ಪೈಪ್‌ಲೈನ್ ಕಾಮಗಾರಿಗೆ ಶಾಸಕ ಮಂಜುನಾಥ್ ಪೂಜೆ ಸಲ್ಲಿಸಿ, ಚಾಲನೆ ನೀಡಿದರು.

ಹನೂರು, ಅ.13– ತಾಲೂಕಿನ ರಾಮನಗುಡ್ಡ ಜಲಾಶಯ ನಿರ್ಮಾಣವಾಗಿ 40 ವರ್ಷಗಳಿಂದ ಸಾಧ್ಯವಾಗಿರದಿದ್ದ ಶಾಶ್ವತ ನೀರಾವರಿ ವ್ಯವಸ್ಥೆಯ ಪೈಪ್‌ಲೈನ್ ಕಾಮಗಾರಿಗೆ ಚಾಲನೆ ನೀಡಲಾಗಿದೆ ರೈತರು ನೀರು ಪೋಲು ಮಾಡದೆ ಹನಿ ಹನಿ ನೀರನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಎಂ.ಆರ್. ಮಂಜುನಾಥ್ ತಿಳಿಸಿದರು.

ಬೂದುಬಾಳು ಗ್ರಾಮದ ಸಮೀಪ ರಾಮನ ಗುಡ್ಡ ಜಲಾಶಯಕ್ಕೆ ನೀರು ತುಂಬಿಸುವ ಪೈಪ್‌ಲೈನ್ ಕಾಮಗಾರಿಗೆ ಪೂಜೆ ಸಲ್ಲಿಸಿ, ತಾಲೂಕಿನ ರೈತರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಮೂರು ಪ್ರಮುಖ ಜಲಾಶಯಗಳಿಗೆ ನೀರು ತುಂಬಿಸುವ ಯೋಜನೆ ಕೈಗೊಂಡು ಗುಂಡಾಲ್ ಜಲಾಶಯಕ್ಕೆ ನೀರು ತುಂಬಿಸಲಾಗಿದೆ. ಆದರೆ ಅನುದಾನದ ಕೊರತೆಯಿಂದ ರಾಮನ ಗುಡ್ಡ ಹಾಗೂ ಹುಬ್ಬೆ ಹುಣಸೆ ಜಲಾಶಯಗಳಿಗೆ ನೀರು ತುಂಬಿಸಲು ಸಾಧ್ಯವಾಗಿರಲಿಲ್ಲ. ಶಾಸಕನಾದ ಮೇಲೆಈ ಭಾಗದ ಜನರಿಗೆ ನೀರಾವರಿ ವ್ಯವಸ್ಥೆ ಕಲ್ಪಿಸಿ ಆರ್ಥಿಕ ಸದೃಢರನ್ನಾಗಿ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ ಎಂದರು.

ಜಲಾಶಯದ ಸುತ್ತಮುತ್ತಲಿನ ರೈತರು ಒತ್ತುವರಿ ಮಾಡಿಕೊಂಡಿದ್ದ ಜಲಾಶಯದ ನಿವೇಶನವನ್ನು ತೆರವು ಮಾಡಲಾಗಿದೆ. ಎರಡೂವರೆ ಕೋಟಿ ವೆಚ್ಚದಲ್ಲಿ 1.5 ಕಿಮೀ ಪೈಪ್‌ಲೈನ್ ಕಾಮಗಾರಿಗೆ ಚಾಲನೆ ನೀಡಲಾಗಿದ್ದು ತಿಂಗಳ ಅಂತ್ಯದಲ್ಲಿ ರಾಮನ ಗುಡ್ಡ ಜಲಾಶಯಕ್ಕೆ ನೀರು ಬಿಡಲು ಕ್ರಮ ವಹಿಸಲಾಗುವುದು ಇದರಿಂದ ಸುಮಾರು 20ಕ್ಕೂ ಹೆಚ್ಚು ಹಳ್ಳಿಗಳಿಗೆ ಅಂತರ್ಜಲ ಮಟ್ಟ ಹೆಚ್ಚಾಗಿ ಕುಡಿಯುವ ನೀರು ಹಾಗೂ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ರಾಜ್ಯ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಗೌಡೇಗೌಡ ಮಾತನಾಡಿ ಶಾಸಕ ಮಂಜುನಾಥ್ ಕ್ಷೇತ್ರದ ಮತದಾರರಲ್ಲದಿದ್ದರೂ ಕ್ಷೇತ್ರದ ಮತದಾರರ ಆಶೀರ್ವಾದದಿಂದ ಶಾಸಕರಾಗಿದ್ದಾರೆ. ಅವರು ಸಹ ರೈತರಿಗೆ ನೀರಾವರಿ ವ್ಯವಸ್ಥೆ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಹಂತಹಂತವಾಗಿ ಹೆಚ್ಚಿನ ಅನುದಾನ ನೀಡುವ ಮೂಲಕ ನೀರಾವರಿ ಯೋಜನೆಗೆ ಹೆಚ್ಚಿನ ಅನುಕೂಲ ಕಲ್ಪಿಸಿದ್ದಾರೆ. ಈ ನಿಟ್ಟಿನಲ್ಲಿ ರೈತರಿಗೆ ನೀರಾವರಿ ವ್ಯವಸ್ಥೆ ಮಾಡಿಕೊಡುತ್ತಿದ್ದಾರೆ ಇವರಿಗೆ ರಾಜ್ಯ ರೈತ ಸಂಘದಿಂದ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಕಾವೇರಿ ನೀರಾವರಿ ನಿಗಮದ ಅಧೀಕ್ಷಕ ಅಭಿಯಂತರ ಮಹೇಶ್, ಕಾರ್ಯಪಾಲಕ ಅಭಿಯಂತರ ಉಮೇಶ್.ಕೆ.ಎಂ, ಎಇಇ ಕರುಣಾಮಯಿ ಬಸವೇಶ್, ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ತಾಲೂಕು ಅಧ್ಯಕ್ಷರಾದ ಚಂಗಡಿ ಕರಿಯಪ್ಪ ಅಮ್ಜದ್ ಖಾನ್, ಚಾಮುಲ್ ನಿರ್ದೇಶಕ ಮಹದೇವ ಪ್ರಸಾದ್, ಮಾಜಿ ಅಧ್ಯಕ್ಷ ಗುರುಮಲ್ಲಪ್ಪ, ಮುಖಂಡರುಗಳಾದ ಮಂಜೇಶ್, ಜಸ್ಸಿಂ ಪಾಷಾ ಇನ್ನಿತರರು ಹಾಜರಿದ್ದರು.


ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದಾಗಿ ಬೆಂಕಿ ಬಿದ್ದ ಪತ್ರಕರ್ತ ಆರ್. ಮಂಜುನಾಥ್ ಮನೆಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಭೇಟಿ ನೀಡಿ ಪರಿಶೀಲಿಸಿದರು.

ಮೈಸೂರು ಮಿತ್ರ ಮಂಗಳವಾರ 14 ಅಕ್ಟೋಬರ್ 2025

ಶಾಸಕ ಮುನಿರತ್ನ ವಿರುದ್ಧ ಪ್ರಕರಣ ದಾಖಲಿಸಲು ಕಾಂಗ್ರೆಸ್ ದೂರು



ಶಾಸಕ ಮುನಿರತ್ನ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕಾಂಗ್ರೆಸ್ ಮುಖಂಡರು ಸಲ್ಲಿಸಿದ್ದ ದೂರನ್ನು ಡಿಸಿಪಿ ಬಿಂದುಮಣಿ ಸ್ವೀಕರಿಸಿದರು.

ಮೈಸೂರು, ಅ.13– ಮೂಢನಂಬಿಕೆ ಹರಡುವ ಸುಳ್ಳು ಹೇಳಿಕೆ ನೀಡಿರುವ ಶಾಸಕ ಮುನಿರತ್ನ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ಸಮಿತಿ ವಕ್ತಾರ ಎಸ್. ರಾಜೇಶ್, ನಗರ ಪೊಲೀಸ್ ಆಯುಕ್ತರ ಕಚೇರಿಗೆ ದೂರು ಸಲ್ಲಿಸಿದ್ದಾರೆ.

ಬೆಂಗಳೂರು ರಾಜರಾಜೇಶ್ವರಿನಗರ ಕ್ಷೇತ್ರದ ಶಾಸಕ ಮುನಿರತ್ನ ಅವರು ಅ.12ರಂದು ಮಾಧ್ಯಮಗಳೊಂದಿಗೆ ಮಾತನಾಡುವಾಗ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇರಳದಲ್ಲಿ ಮಾಟಮಂತ್ರ ಮಾಡಿಸಿ, ಒಂದು ಕೋಣ ಹಾಗೂ ಕಾಡುಹಂದಿಯನ್ನು ಬಲಿ ಕೊಟ್ಟಿದ್ದಾರೆ. ಇದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗಂಡಾಂತರ ಕಾದಿದೆ ಎಂದು ಸುಳ್ಳು ಹಾಗೂ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ.

ಇದರಿಂದ ಮೂಢನಂಬಿಕೆ ಪ್ರೋತ್ಸಾಹಿಸುವುದರ ಜೊತೆಗೆ ಜನರಿಗೆ ತಪ್ಪು ಮಾಹಿತಿ ರವಾನಿಸಿದಂತಾಗಿದೆ. ಸಮುದಾಯಗಳ ನಡುವೆ ದ್ವೇಷ ಮತ್ತು ಭಿನ್ನಾಭಿಪ್ರಾಯ ಉಂಟು ಮಾಡುವ ಅಪಾಯ ಉಂಟು ಮಾಡಿದೆ. ರಾಜ್ಯದ ಶಾಂತಿ, ಸೌಹಾರ್ದತೆ ಮತ್ತು ಸಾಮಾಜಿಕ ಸಮನ್ವಯತೆಗೆ ಧಕ್ಕೆ ತರುತ್ತದೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ಶಾಸಕರು, ಆರೋಪಕ್ಕೆ ಪುರಾವೆ ನೀಡಬೇಕು. ಮುನಿರತ್ನ ಅವರ ನಿರಾಧಾರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿ, ತುರ್ತು ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ಈ ವೇಳೆ ಮುಖಂಡರಾದ ಲೋಕೇಶ್ ಕುಮಾರ್ ಮಾದಾಪುರ, ಕಾಳೇಗೌಡ ಕೇರ್ಗಳ್ಳಿ , ರದಿ ಉಲ್ಲಾ ಖಾನ್, ಸೈಯದ್ ಫಾರೂಕ್, ರಂಗಸ್ವಾಮಿ, ನಾಗೇಶ್, ಕೃಷ್ಣಪ್ಪ, ಮೋಹನ್ ಇದ್ದರು. ಡಿಸಿಪಿ ಬಿಂದುಮಣಿ ಅವರು ದೂರು ಸ್ವೀಕರಿಸಿದರು.

ಸುಣ್ಣದ ಕೇರಿಯಲ್ಲಿ ಪುಂಡರ ಹಾವಳಿ

● ಮಧ್ಯರಾತ್ರಿ ಹುಟ್ಟುಹಬ್ಬ ಆಚರಿಸುತ್ತಾರೆ ● ಕುಡಿದು ಅಬ್ಬರಿಸುತ್ತಾರೆ ● ನಿವಾಸಿಗಳ ಆತಂಕ



ಮೈಸೂರಿನ ಸುಣ್ಣದಕೇರಿಯ ಗಂಗಾಮತಸ್ಥರ ಸಮುದಾಯ ಭವನದಲ್ಲಿ ಕೆ.ಆರ್.ಪೊಲೀಸ್ ಠಾಣೆ ವತಿಯಿಂದ ಸಾರ್ವಜನಿಕರ ಕುಂದು–ಕೊರತೆ ಸಭೆ ನಡೆಸಲಾಯಿತು.

ಮೈಸೂರು, ಅ.13(ಎಂಕೆ)– ಮೈಸೂರಿನ ಸುಣ್ಣದಕೇರಿಯಲ್ಲಿ ಪುಂಡರ ಹಾವಳಿ ಹೆಚ್ಚಾಗಿದ್ದು, ಪೊಲೀಸರು ರಾತ್ರಿ ಗಸ್ತು ನಡೆಸಿ ತೊಂದರೆ ಕೊಡುವವರನ್ನು ಬಂಧಿಸಿ ಕಾನೂನು ಕ್ರಮ ಜರುಗಿಸುವಂತೆ ಸುಣ್ಣದಕೇರಿ ನಿವಾಸಿಗಳು ಆಗ್ರಹಿಸಿದರು.

ಮೈಸೂರಿನ ಸುಣ್ಣದಕೇರಿಯ ಗಂಗಾಮತಸ್ಥರ ಸಮುದಾಯ ಭವನದಲ್ಲಿ ಕೆ.ಆರ್.ಪೊಲೀಸ್ ಠಾಣೆ ವತಿಯಿಂದ ಆಯೋಜಿಸಿದ್ದ ಸಾರ್ವಜನಿಕರ ಕುಂದು–ಕೊರತೆ ಸಭೆಯಲ್ಲಿ ಸುಣ್ಣದಕೇರಿಯ 8, 9 ಮತ್ತು 10 ನೇ ಕ್ರಾಸ್ ಹಾಗೂ ಇನ್ನಿತರೆ ಸ್ಥಳಗಳಲ್ಲಿ ಮಧ್ಯರಾತ್ರಿ ಹುಟ್ಟುಹಬ್ಬ ಆಚರಣೆ ಮಾಡುವುದು, ಅಂಗಡಿಗಳ ಬಳಿ ಕೂತು ಮದ್ಯ ಸೇವನೆ ಮಾಡಿ ಅಸಭ್ಯವಾಗಿ ವರ್ತಿಸುವುದರಿಂದ ಸಾಕಷ್ಟು ತೊಂದರೆಯಾಗುತ್ತಿದ್ದು, ಕೂಡಲೇ ಪೊಲೀಸರು ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಲಾಯಿತು.

ಬಳಿಕ ಮಾತನಾಡಿದ ಕೆ.ಆರ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಧನರಾಜ್, ಅಸಭ್ಯವಾಗಿ ವರ್ತಿಸುವವರ ಮಾಹಿತಿ ನೀಡಿದರೆ, ಅಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಠಾಣೆಯಿಂದ ಪ್ರತಿದಿನ ರಾತ್ರಿ ವೇಳೆ ಪ್ಯಾಂಥರ್ ವಾಹನದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಗಸ್ತು ತಿರುಗಲಿದ್ದಾರೆ. ಸುಣ್ಣದಕೇರಿಯಲ್ಲಿ ಯಾವುದೇ ಅಕ್ರಮ ಚಟುವಟಿಕೆಗಳ ಫೋಟೊ ಮತ್ತು ವಿಡಿಯೋಗಳು ಇದ್ದರೆ ನಮಗೆ ಗುಪ್ತವಾಗಿ ಮಾಹಿತಿ ನೀಡಿದರೆ ಭದ್ರತೆ ಒದಗಿಸಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಬಳಿಕ ಸುಣ್ಣದಕೇರಿಯ ಎಲ್ಲಾ ರಸ್ತೆಗಳಲ್ಲಿ ಸಂಚರಿಸಿ, ನಿವಾಸಿಗಳಲ್ಲಿ ಧೈರ್ಯ ತುಂಬಲಾಯಿತು. ಪಿಎಸ್ಐ ಪೂಜಾ, ಸ್ಥಳೀಯ ಮುಖಂಡರಾದ ದಾಸಿ, ಗೋಪಣ್ಣ, ಪ್ರದೀಪ್, ಮಹೇಶ್ ಅಶ್ವತ್ಥ್ ಮತ್ತಿತರರಿದ್ದರು.

ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚನೆ-ನಿರ್ದೇಶನದ

'ನಿಜಮಹಾತ್ಮ ಬಾಬಾಸಾಹೇಬ' ನಾಟಕದ ಚೊಚ್ಚಲ ಪ್ರದರ್ಶನ ಯಶಸ್ವಿ



ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಸೋಮವಾರ ನಡೆದ 'ನಿಜಮಹಾತ್ಮ ಬಾಬಾಸಾಹೇಬ' ನಾಟಕ ಪ್ರದರ್ಶನದ ದೃಶ್ಯ

ಮೈಸೂರು,ಅ.13(ಪಿಎಂ)– ರಂಗಭೂಮಿ ಟ್ರಸ್ಟ್ ಕೊಡಗು ಪ್ರಸ್ತುತಿಯ ನಾಟಕ 'ನಿಜಮಹಾತ್ಮ ಬಾಬಾಸಾಹೇಬ' ಸೋಮವಾರ ಯಶಸ್ವಿ ಪ್ರದರ್ಶನ ಕಂಡಿತು. ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಸಂಜೆ ನಡೆದ ಚೊಚ್ಚಲ ಪ್ರದರ್ಶನಕ್ಕೆ ಸಭಾಂಗಣದ ಆಸನಗಳು ಭರ್ತಿಯಾಗಿದ್ದವು. ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರು ರಚಿಸಿ, ನಿರ್ದೇಶಿಸಿರುವ ನಾಟಕ ಇದಾಗಿದೆ.

ಡಾ.ಬಿ.ಆರ್.ಅಂಬೇಡ್ಕರ್, ಅವರ ಆಪ್ತ ಕಾರ್ಯದರ್ಶಿ ನಾನಕ್‌ಚಂದ್ ರತ್ತು, ಡಾ.ಸವಿತಾ ಅಂಬೇಡ್ಕರ್, ಜವಾಹರ ಲಾಲ್ ನೆಹರು, ಮಹಾತ್ಮ ಗಾಂಧಿ, ದತ್ತೋಪಂಥ ಠೇಂಗಡಿ ಅವರ ಪಾತ್ರಗಳು ನಾಟಕದ ಮುಖ್ಯಭೂಮಿಕೆಯಲ್ಲಿವೆ. ರವಿ ಮೂರೂರು ಅವರ ಸಂಗೀತ ವಿನ್ಯಾಸ, ಸುಬ್ರಹ್ಮಣ್ಯ ಮೈಸೂರು ಅವರ ಧ್ವನಿ ವಿನ್ಯಾಸದಲ್ಲಿ ನಾಟಕ ಮೂಡಿಬಂದಿದೆ. ಸಂಗೀತ ನಿರ್ವಹಣೆಯನ್ನು ಅಜಯ್ ಭಂಡಾರಿ, ಬೆಳಕು ವಿನ್ಯಾಸವನ್ನು ತೀರ್ಥಹಳ್ಳಿ ಶಿವಕುಮಾರ್, ವಸ್ತ್ರ ವಿನ್ಯಾಸವನ್ನು ಅನಿತಾ ಕಾರ್ಯಪ್ಪ ನಿರ್ವಹಿಸಿದ್ದಾರೆ.

ಪ್ರದರ್ಶನಕ್ಕೂ ಮುನ್ನ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅಡ್ಡಂಡ ಸಿ.ಕಾರ್ಯಪ್ಪ, ಈ ನಾಟಕ ಪ್ರದರ್ಶನದ ಅವಧಿ 2 ಗಂಟೆ 20 ನಿಮಿಷವಾಗಿದೆ. ಡಾ.ಅಂಬೇಡ್ಕರ್ ಅವರ ಪಾತ್ರದಲ್ಲಿ ಲಿಖಿತ್ ಕುಮಾರ್ ಅಭಿನಯಿಸಿದ್ದಾರೆ. ಅಂಬೇಡ್ಕರ್ ಅವರ ಮೊದಲ ಪತ್ನಿ ರಮಾಬಾಯಿ ಅವರ ಪಾತ್ರ ಹಾಗೂ ಎರಡನೇ ಪತ್ನಿ ಡಾ.ಸವಿತಾ ಅಂಬೇಡ್ಕರ್ ಅವರ ಪಾತ್ರ ಎರಡರಲ್ಲೂ ಅನಿತಾ ಕಾರ್ಯಪ್ಪ ನಟಿಸಿದ್ದಾರೆ. ಒಟ್ಟಾರೆ 30 ಪಾತ್ರಗಳಲ್ಲಿ 10 ಮಂದಿ ಅಭಿನಯಿಸಿದ್ದಾರೆ ಎಂದು ವಿವರಿಸಿದರು.

ನಾಟಕದಲ್ಲಿ ನಾನು ಪಾತ್ರ ಮಾಡುತ್ತಿಲ್ಲ. ನಾನು ಬಹಳ ಮಹತ್ವಾಕಾಂಕ್ಷೆಯಿಂದ ನಾಟಕ ಮಾಡಿದ್ದೇನೆ. ಏಕೆಂದರೆ ಅಂಬೇಡ್ಕರ್ ಅವರ ಹೆಸರಿನಲ್ಲಿ ಎಲ್ಲರೂ ಆಟವಾಡುತ್ತಿದ್ದಾರೆ. ಅಂಬೇಡ್ಕರ್ ಅವರನ್ನು ಓಟ್‌ಬ್ಯಾಂಕ್ ಮಾಡಿಕೊಂಡಿದ್ದಾರೆ. ಇಂದು ದಲಿತ ಸಮುದಾಯದ ತಲೆಯನ್ನು ಕೆಡಿಸಲಾಗಿದೆ. ತಮ್ಮ 'ಥಾಟ್ಸ್ ಆನ್ ಪಾಕಿಸ್ತಾನ್' ಪುಸ್ತಕದಲ್ಲಿ ಅಂಬೇಡ್ಕರ್ ಪ್ರತಿಪಾದಿಸಿರುವ ಅಂಶಗಳನ್ನೂ ನಾಟಕದಲ್ಲಿ ಅನಾವರಣಗೊಳಿಸಲಾಗಿದೆ ಎಂದರು.

ಅಂಬೇಡ್ಕರ್ ಹಾಗೂ ಅವರ ಚಿಂತನೆಗಳನ್ನು ಓಟಿಗಾಗಿ ಬಳಸಿಕೊಳ್ಳಲಾಗಿದೆ. ಒಂದರ್ಥದಲ್ಲಿ ಕಾಂಗ್ರೆಸ್ ಪಕ್ಷವೇ ಅವರನ್ನು ಕೊಂದಿದ್ದು ಎನ್ನಬಹುದು. ಅವರನ್ನು ಎರಡು ಬಾರಿ ಚುನಾವಣೆಯಲ್ಲಿ ಸೋಲಿಸಿದ್ದು ಕಾಂಗ್ರೆಸ್. ಭಾರತ ರತ್ನ ಸಹ ಕಾಂಗ್ರೆಸ್ ಸರ್ಕಾರ ಕೊಡಲಿಲ್ಲ. ಇದೇ ಪಕ್ಷದ ಸರ್ಕಾರವು ದೆಹಲಿಯಲ್ಲಿ ಅವರ ಸಂಸ್ಕಾರಕ್ಕೂ ಜಾಗ ಕೊಡಲಿಲ್ಲ. ಹೀಗಾಗಿ ಅಂಬೇಡ್ಕರ್ ಅವರ ಫೋಟೋಗಳನ್ನು ಹಾಕಿಕೊಳ್ಳಲು ಕಾಂಗ್ರೆಸ್‌ನವರಿಗೆ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯನವರು ಕಾಂಗ್ರೆಸ್ ಅನ್ನು ಬೈಯ್ಯುತ್ತಿದ್ದರು. ಇಂದು ಸೋನಿಯಾ ಗಾಂಧಿಯನ್ನು ಜೀ ಜೀ ಎನ್ನುತ್ತಾರೆ ಎಂದು ವ್ಯಂಗ್ಯವಾಡಿದರು.

ಅರ್ಬನ್ ನಕ್ಸಲರು, ದೇಶದ್ರೋಹಿಗಳಿಗೆ ಬೆಂಬಲ ಕೊಡುವ ಮೂಲಕ ರಾಷ್ಟ್ರವನ್ನು ಛಿದ್ರ ಮಾಡಲು ಪ್ರಯತ್ನಿಸಲಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ರಾಷ್ಟ್ರೀಯತೆ ಬಗ್ಗೆ ಜಾಗೃತಿ ಮೂಡಿಸುವುದು ಮುಖ್ಯ. ರಾಷ್ಟ್ರೀಯತೆಯ ಸಂದೇಶ ಸಾರುವುದಕ್ಕಾಗಿಯೇ ನಾವು ನಾಟಕ ಮಾಡುವುದು. ನಾವು ನಾಟಕ ಮಾಡುವ ಉದ್ದೇಶವೇ ರಾಷ್ಟ್ರೀಯತೆ. ಎಷ್ಟು ಜನ ಬಂದು ನಾಟಕ ನೋಡುತ್ತಾರೆ ಎಂಬುದು ನಮಗೆ ಮುಖ್ಯವಲ್ಲ. ಬಂದವರಿಗೆ ಯಾವ ಸಂದೇಶ ನೀಡುತ್ತೇವೆ ಎಂಬುದೇ ನಮಗೆ ಮುಖ್ಯ ಎಂದರು.

ಪ್ರಿಯಾಂಕ್ ಖರ್ಗೆ ವಿರುದ್ಧ ವಾಗ್ದಾಳಿ: ಇದೇ ವೇಳೆ ಪ್ರಿಯಾಂಕ್ ಖರ್ಗೆ ಅವರ ವಿರುದ್ಧವೂ ಅಡ್ಡಂಡ ಕಾರ್ಯಪ್ಪ ವಾಗ್ದಾಳಿ ನಡೆಸಿದರು. ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ಬ್ಯಾನ್ ಮಾಡಬೇಕೆಂದು ಸಚಿವ ಪ್ರಿಯಾಂಕ್ ಖರ್ಗೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಆದರೆ ಆರ್‌ಎಸ್‌ಎಸ್ ಸ್ವಯಂ ಸೇವಕನೇ ಪ್ರಧಾನಿ ಎಂಬುದು ಅವರಿಗೆ ನೆನಪಿರಲಿ. ಭಾರತದ ಅನೇಕ ರಾಜ್ಯದ ಮುಖ್ಯಮಂತ್ರಿಗಳು ಕೂಡ ಆರ್‌ಎಸ್‌ಎಸ್ ಸ್ವಯಂ ಸೇವಕರು. ಈ ಪ್ರಿಯಾಂಕ್ ಖರ್ಗೆ ಅವರಿಗೆ ಇದು ಗೊತ್ತಿಲ್ಲ ಎಂದು ಕಿಡಿಕಾರಿದರು.

ಮಹಾತ್ಮ ಗಾಂಧಿಯವರು ಆರ್‌ಎಸ್‌ಎಸ್‌ಗೆ ಭೇಟಿ ನೀಡಿದ್ದರು. ಯಾವುದೇ ಸರ್ಕಾರಿ ಜಾಗ ಯಾರಪ್ಪನ ಆಸ್ತಿಯಲ್ಲ. ಮೊದಲು ಕಾಂಗ್ರೆಸ್ ಗೂಂಡಾಗಳಿಗೆ ನಿಷೇಧ ಹೇರಲಿ. ರಾಷ್ಟ್ರಭಕ್ತರ ಚಟುವಟಿಕೆ ಬ್ಯಾನ್ ಮಾಡುವ ಉದ್ದೇಶದ ಹಿಂದೆ ಓಟ್ ಬ್ಯಾಂಕ್ ರಾಜಕಾರಣ ಅಡಗಿದೆ. ಅವರಿಗೆ ಬೇಕಾಗಿರುವುದು ಓಟು ಒಂದೇ, ದೇಶವಲ್ಲ. ನಮಗೆ ದೇಶ ಮೊದಲು. ದೇಶಕ್ಕಾಗಿ ನಾವು ಜೈಲಿನಲ್ಲಿ ಇರಲೂ ಸಿದ್ಧ ಎಂದರು.

ಹಿಂದೂ ಧರ್ಮ ಟೀಕಿಸಿದ್ದೂ ತೋರಿಸಿದ್ದೇವೆ: ಅಂಬೇಡ್ಕರ್ ಅವರು ಹಿಂದೂ ಧರ್ಮ ಟೀಕೆ ಮಾಡಿದ್ದನ್ನೂ ನಾಟಕದಲ್ಲಿ ತೋರಿಸಿದ್ದೇವೆ. ನಾಟಕದಲ್ಲಿ ವಾಸ್ತವ ಅನಾವರಣ ಮಾಡಿದ್ದೇವೆ. ಮುಚ್ಚಿಟ್ಟ ಸತ್ಯಗಳನ್ನು ರಂಗದ ಮೇಲೆ ತರುವ ಪ್ರಯತ್ನ ಮಾಡಿದ್ದೇನೆ. ಆರ್‌ಎಸ್‌ಎಸ್ ಅನ್ನು ಅಂಬೇಡ್ಕರ್ ಮೆಚ್ಚಿಕೊಂಡಿದ್ದರು ಎಂಬ ಸತ್ಯವನ್ನು ಪ್ರಿಯಾಂಕ್ ಖರ್ಗೆ ಅವರಿಗೆ ಹೇಳಬೇಕಿದೆ. ಏಕೆಂದರೆ ಓದಿ ತಿಳಿದುಕೊಳ್ಳಲು ಅವರಿಗೆ ಸಮಯವಿಲ್ಲ ಎಂಬುದು ಗೊತ್ತು. ಪ್ರಿಯಾಂಕ್ ಖರ್ಗೆ ಅವರಿಗೆ ಬೆಳಗ್ಗೆ ಏಳುತ್ತಿದ್ದಂತೆಯೇ ಕಾರ್ಯಕರ್ತರ ಇಷ್ಟಾರ್ಥ ಪೂರೈಸುವುದೇ ಆಗುತ್ತದೆ. ವಿಧಾನಸೌಧ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಮ್ಮ ನಾಟಕ ಏರ್ಪಡಿಸಲಿ, ಇತಿಹಾಸದ ಸತ್ಯ ತಿಳಿಸಿಕೊಡುತ್ತೇವೆ. ಕಾಂಗ್ರೆಸ್ ಅನ್ನು ಬ್ಯಾನ್ ಮಾಡಬೇಕೆಂದು ಮಹಾತ್ಮ ಗಾಂಧಿಯೇ ಹೇಳಿದ್ದರು. ಕಾಂಗ್ರೆಸ್ ದೇಶಕ್ಕೆ ಒಂದು ಅನಿಷ್ಟವೆಂದು ಅಂಬೇಡ್ಕರ್ ಹೇಳಿದ್ದರು ಎಂದು ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲೇ ಅ.14 ಮತ್ತು 16ರಂದು ಸಂಜೆ 6.30ಕ್ಕೆ 'ನಿಜಮಹಾತ್ಮ ಬಾಬಾಸಾಹೇಬ' ನಾಟಕದ ಪ್ರದರ್ಶನ ನಡೆಯಲಿದೆ. ಟಿಕೆಟ್ ದರ 200 ರೂ.



ನಮ್ಮದು ವಾಸ್ತವ ಹಾಗೂ ಸತ್ಯಾಂಶ ಇರುವ ನಾಟಕ. ಇದರಲ್ಲಿ ಮುಚ್ಚಿಟ್ಟ ಸಂಗತಿಗಳನ್ನು ಹೊರತೆಗೆದಿದ್ದೇವೆ. ರಾಜ್ಯಾದ್ಯಂತ ಪ್ರದರ್ಶನ ಮಾಡುತ್ತೇವೆ. ಸುಮಾರು ಎರಡು ತಿಂಗಳು ತಾಲೀಮು ನಡೆಸಿದ್ದೇವೆ. ಜೊತೆಗೆ ರಂಗಭೂಮಿಗೆ ಹೊಸಬರಾಗಿರುವ ಕಲಾವಿದರೇ ಹೆಚ್ಚು ಮಂದಿ ಈ ನಾಟಕದಲ್ಲಿ ಅಭಿನಯಿಸಿದ್ದಾರೆ.

-ಅಡ್ಡಂಡ ಸಿ.ಕಾರ್ಯಪ್ಪ.

ಅ.18ಕ್ಕೆ ಮೈಸೂರು ಕೊಡವ ಸಮಾಜದಲ್ಲಿ ಕಾವೇರಿ ಸಂಕ್ರಮಣ; ತೀರ್ಥ ವಿತರಣೆ

ಮೈಸೂರು, ಅ.13– ಕೊಡವ ಸಮಾಜ ಮೈಸೂರು ವತಿಯಿಂದ ವಿಜಯನಗರ ಒಂದನೇ ಹಂತದಲ್ಲಿರುವ ಸಮಾಜದ ಆವರಣದಲ್ಲಿ ಅ.18ರಂದು ಬೆಳಗ್ಗೆ ಕಾವೇರಿ ಸಂಕ್ರಮಣ ಉತ್ಸವ ಹಮ್ಮಿಕೊಳ್ಳಲಾಗಿದೆ.

ಉತ್ಸವದಲ್ಲಿ ಭಾಗಿಯಾಗುವ ಎಲ್ಲಾ ಭಕ್ತರಿಗೂ ಕಣಿ ಪೂಜೆ ಬಳಿಕ ಪವಿತ್ರ ತೀರ್ಥ ವಿತರಿಸಲಾಗುವುದು. ಕಾವೇರಿ ಮಾತೆಯ ಭಕ್ತರು ಕಣಿ ಪೂಜೆ ಮತ್ತು ಉತ್ಸವದಲ್ಲಿ ಭಾಗವಹಿಸಿ, ತೀರ್ಥ ಸ್ವೀಕರಿಸುವಂತೆ ಸಮಾಜದ ಮುಖಂಡ ಕೆ.ಎ.ಬೆಳ್ಳಿಯಪ್ಪ ಮನವಿ ಮಾಡಿದ್ದಾರೆ.

ಐದನೇ ಪುಟದಿಂದ

ಮುಖ್ಯಮಂತ್ರಿ ಆಗಬಹುದು!

ನಿಗಮ–ಮಂಡಳಿಗಳಿಗೆ ಅಧ್ಯಕ್ಷರ ನೇಮಕಾತಿ ಕಾರ್ಯ ಮುಗಿದಿದೆ. ಇನ್ನೇನಿದ್ದರೂ ಜನವರಿಯಲ್ಲೇ. ವಾಲ್ಮೀಕಿ ಸಮುದಾಯದ ಇಬ್ಬರು ಸಚಿವರನ್ನು ಸಂಪುಟದಿಂದ ನಾನು ತೆಗೆಯಲಿಲ್ಲ. ಅವರಾಗಿಯೇ ರಾಜೀನಾಮೆ ನೀಡಿದರು. ಮುಂದಿನ ಸಂಪುಟ ಪುನರ್ ರಚನೆ ವೇಳೆ ಆ ಸಮುದಾಯಕ್ಕೆ ಅವಕಾಶ ದೊರೆಯಲಿದೆ. ಸದ್ಯಕ್ಕೆ ಅವರನ್ನು ತೆಗೆದುಕೊಳ್ಳುವ ವಿಚಾರ ನಮ್ಮ ಮುಂದಿಲ್ಲ ಎಂದರು.

ಆರ್‌ಎಸ್‌ಎಸ್ ವಿರುದ್ಧ ತಮಿಳ್ನಾಡು ಮಾದರಿ ಕ್ರಮ: ತಮಿಳುನಾಡು ಸರ್ಕಾರ ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ಯಾವ ರೀತಿ ಕಡಿವಾಣ ಹಾಕಿದೆಯೋ ಅದೇ ರೀತಿ ಕರ್ನಾಟಕದಲ್ಲೂ ಕಡಿವಾಣ ಹಾಕಬೇಕು ಎಂದು ಪ್ರಿಯಾಂಕ್ ಖರ್ಗೆ ಪತ್ರ ಬರೆದಿದ್ದಾರೆ.

ಪತ್ರವನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ರವಾನೆ ಮಾಡಿ, ತಮಿಳುನಾಡು ಸರ್ಕಾರದ ಮಾದರಿಯಲ್ಲಿ ಕ್ರಮ ಕೈಗೊಳ್ಳಿ ಎಂದು ಸೂಚಿಸಿರುವುದಾಗಿ ತಿಳಿಸಿದರು.

ಸ್ಪಷ್ಟನೆ ಕೋರಿದ ಸಿಎಂ ಸಿದ್ದರಾಮಯ್ಯ

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ಬಹಿರಂಗವಾಗಿಯೇ ಹೇಳಿಕೆ ನೀಡಿರುವ ಆರ್‌ವಿ ದೇಶಪಾಂಡೆ ಅವರಿಗೆ ಕರೆ ಮಾಡಿರುವ ಸಿಎಂ ಸಿದ್ದರಾಮಯ್ಯ ಅವರು, ತಮ್ಮ ಹೇಳಿಕೆಗೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡುವಂತೆ ಸೂಚಿಸಿದ್ದಾರೆ. ಬೆಂಗಳೂರಿಗೆ ಬಂದ ಬಳಿಕ ಸ್ಪಷ್ಟನೆ ನೀಡುವುದಾಗಿ ಸಿಎಂಗೆ ದೇಶಪಾಂಡೆ ಸೂಚಿಸಿರುವುದಾಗಿ ವರದಿಯಾಗಿದೆ.

ಅವರು ಸಿಎಂ ಆದಾಗ ಗ್ಯಾರಂಟಿ ನಿಲ್ಲಿಸಲಿ– ಜಿ ಪರಮೇಶ್ವರ: ಆರ್‌ವಿ ದೇಶಪಾಂಡೆ ಹೇಳಿಕೆ ವಿಚಾರವಾಗಿ ಮಾತನಾಡಿದ ಗೃಹ ಸಚಿವ ಪರಮೇಶ್ವರ, ಅವರು ಸಿಎಂ ಆದಾಗ ಬೇಕಿದ್ರೆ ಗ್ಯಾರಂಟಿ ನಿಲ್ಲಿಸಲಿ. ಅಭಿವೃದ್ಧಿ ಕುಂಠಿತವಾಗಿರುವುದು ಎಲ್ಲಿ? ಅಭಿವೃದ್ಧಿ ಕಾಮಗಾರಿಗೆ ಸಿಎಂ ಚಾಲನೆ ನೀಡುತ್ತಿದ್ದಾರೆ. ನಮ್ಮ ಜಿಲ್ಲೆಗೆ ಸಿಎಂ ಮೂರು ಬಾರಿ ಭೇಟಿ ನೀಡಿದ್ದಾರೆ. ಇವರು ಹೇಳಿದ್ರೆ ಮಾತ್ರ ಅಭಿವೃದ್ಧಿ ಕುಂಠಿತ ಆಗಲ್ಲ. ಅವರ ಅಭಿಪ್ರಾಯ ಹೇಳಿದ್ದಾರೆ. ಆದರೆ, ಅದು ಸರ್ಕಾರದ ಅಭಿಪ್ರಾಯ ಅಲ್ಲ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಮೇ 20, 2023 ರಂದು ಚುನಾವಣಾ ಪೂರ್ವ ಐದು ಖಾತರಿ ಯೋಜನೆಗಳ ಅನುಷ್ಠಾನವನ್ನು ಘೋಷಿಸಿತು. ರಾಜ್ಯ ಸರ್ಕಾರವು ಪ್ರಸಕ್ತ ಹಣಕಾಸು ವರ್ಷದಲ್ಲಿ ಈ ಯೋಜನೆಗಳಿಗೆ 51,034 ಕೋಟಿ ರೂ.ಗಳನ್ನು ಹಂಚಿಕೆ ಮಾಡಿದೆ. ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್‌ನಿಂದ ಟೀಕೆಗಳು ಬಂದಿವೆ. ಜೊತೆಗೆ ಕೆಲವು ಆಡಳಿತಾರೂಢ ಕಾಂಗ್ರೆಸ್ ಶಾಸಕರು ಈ ಗ್ಯಾರಂಟಿಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಪುನರ್‌ರಚನೆ, ಪಕ್ಷ ಸಂಘಟನೆ ಪ್ರಸ್ತಾಪ

ಚಟುವಟಿಕೆಗೆ ನಿರ್ಬಂಧ, ಸಚಿವ ಸಂಪುಟ ಪುನರ್‌ರಚನೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆ. ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ, ಬಿಹಾರ ವಿಧಾನಸಭೆ ಚುನಾವಣೆ ಹಾಗೂ ಅನುದಾನ ಬಳಕೆ ಸೇರಿದಂತೆ ಇನ್ನಿತರ ವಿಚಾರಗಳ ಬಗ್ಗೆ ಚರ್ಚೆಯಾಗಿದೆ ಎಂದು ತಿಳಿದುಬಂದಿದೆ.

ಸರ್ಕಾರ ಬಂದು ಎರಡೂವರೆ ವರ್ಷ ಆಗುತ್ತಿದೆ. ಇದು ನಿಮಗೂ ಗೊತ್ತಿದೆ. ಆದರೆ ನಿಮ್ಮ ಇಲಾಖೆಗಳಲ್ಲಿ ಸುಧಾರಣೆ ತನ್ನಿ. ಬಿಜೆಪಿ ದುರಾಡಳಿತವನ್ನು ನೋಡಿ ಜನ ನಮ್ಮ ಕೈ ಹಿಡಿದಿದ್ದಾರೆ. ಜನಸಾಮಾನ್ಯರ ಪರ ಸರ್ಕಾರ ಇರಬೇಕಾಗುತ್ತದೆ. ಇಲಾಖೆಗಳ ಮೂಲಕ ಜನರ ಕೆಲಸ ಮಾಡಿ. ಇಲಾಖೆಗೂ ಒಳ್ಳೆಯ ಹೆಸರು ತನ್ನಿ, ಸರ್ಕಾರಕ್ಕೂ ಉತ್ತಮ ಹೆಸರು ತನ್ನಿ. ಗ್ಯಾರಂಟಿಗಳಿಂದ ಸ್ವಲ್ಪ ಅಭಿವೃದ್ಧಿ ಹಿನ್ನಡೆಯಾಗಿರಬಹುದು. ಈಗ ಎಲ್ಲವೂ ಒಂದು ಹಂತಕ್ಕೆ ಬರುತ್ತಿದೆ. ಆದಾಯದ ಮಾರ್ಗಗಳೂ ಓಪನ್ ಆಗುತ್ತಿವೆ. ಇಲಾಖೆಯಲ್ಲಿರುವ ಹಣ ಸದ್ಬಳಕೆ ಮಾಡಿ. ಅಭಿವೃದ್ಧಿಗೆ ಹೆಚ್ಚುವರಿ ಅನುದಾನ ಕೊಡೋಣ ಎಂದರಂತೆ.

ನಾಯಕತ್ವ ಬದಲಾವಣೆ ಚಿಂತೆ ಬೇಡ: ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತೆರಳಿದ ಬಳಿಕ ಕೆಲ ಸಚಿವರು ನಾಯಕತ್ವ ಬದಲಾವಣೆ ಬಗ್ಗೆ ಪ್ರಸ್ತಾಪಿಸಿದ್ದು, ಅದರ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳಬೇಡಿ. ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತಿದೆ. ಅವಕಾಶ ಇದ್ದಾಗ ಚೆನ್ನಾಗಿ ಕೆಲಸ ಮಾಡಿ. ಸಮಯ ಬಂದಾಗ ವರಿಷ್ಠರು ನಿರ್ಧಾರ ಮಾಡುತ್ತಾರೆ. ಈಗ ಅಭಿವೃದ್ಧಿಯ ಕಡೆ ನಿಮ್ಮ ಗಮನವಿರಲಿ ಎಂದು ಸಚಿವರಿಗೆ ಸಿಎಂ ಕಿವಿಮಾತು ಹೇಳಿದರು.

ಬಿಹಾರ ಚುನಾವಣೆ ಬಗ್ಗೆ ಚರ್ಚೆ: ಔತಣಕೂಟದಲ್ಲಿ ಬಿಹಾರ್ ಚುನಾವಣೆ ಬಗ್ಗೆ ಚರ್ಚೆಯಾಗಿದ್ದು, ಬಿಹಾರ ಚುನಾವಣೆಗೆ ಎಲ್ಲರ ಸಹಕಾರವಿರಲಿ. ಪಕ್ಷದ ಹೈಕಮಾಂಡ್‌ನಿಂದ ಯಾವಾಗ ಬೇಕಾದರೂ ಸೂಚನೆ ಬರಬಹುದು. ಹೈಕಮಾಂಡ್‌ನಿಂದ ಸೂಚನೆ ಬಂದರೆ ಪ್ರಚಾರಕ್ಕೆ ಹೋಗಬೇಕಾಗುತ್ತದೆ. ಚುನಾವಣಾ ಕೆಲಸಕ್ಕೂ ರೆಡಿ ಇರಬೇಕು. ನಿಮ್ಮ ಎಲ್ಲಾ ಸಹಕಾರವೂ ಬೇಕಿದೆ ಎಂದಿದ್ದಾರೆ.

ಔತಣಕೂಟದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಚಿವ ಸಂತೋಷ್ ಲಾಡ್, ಔತಣಕೂಟದಲ್ಲಿ ಮುದ್ದೆ, ಗ್ರೇವಿ, ಚಿಕನ್, ಮಟನ್, ಇಡ್ಲಿ ಎಲ್ಲಾ ಇತ್ತು. ಊಟದ ಜೊತೆ ಉಪ್ಪಿನಕಾಯಿ ಇರಲಿಲ್ಲ. ಸಚಿವರನ್ನು ಕರೆದು ವೈಯಕ್ತಿಕ ಅಭಿಪ್ರಾಯ ಪಡೆದುಕೊಂಡಿದ್ದಾರೆ. ಒಬ್ಬೊಬ್ಬರು ಸಚಿವರದ್ದು ಒಂದೊಂದು ಇರುತ್ತೆ. ನನ್ನ ಜೊತೆ ಇಲಾಖೆ ವಿಚಾರವಾಗಿ ಮಾತನಾಡಿದರು. ಸಾಮಾನ್ಯವಾಗಿ ಪ್ರತಿವರ್ಷವೂ ಸಭೆ ಕರೆಯುತ್ತಾರೆ ಎಂದರು.

ಯುಗಾದಿ ಸಮಯದಲ್ಲಿ ನಾನ್ ವೆಜ್ ಬಿಟ್ಟಿದ್ದೆ. ಇವತ್ತು ವೆಜ್ ಊಟ ಮಾಡಿದ್ದೇನೆ. ಇನ್ನು ಐದು ಪಾಲಿಕೆ ಚುನಾವಣೆ ಇದೆ. ಜಿಪಂ, ತಾಪಂ ಚುನಾವಣೆ ಬಗ್ಗೆ ಚರ್ಚೆ ಆಗಿದೆ. ಸಚಿವರ ಮೌಲ್ಯಮಾಪನ, ಕ್ಯಾಬಿನೆಟ್ ರಿಶಪಲ್ ಬಗ್ಗೆಯೂ ಚರ್ಚೆ ಆಗಿಲ್ಲ. ವಿಪಕ್ಷದ ಟೀಕೆ ಬಗ್ಗೆಯೂ ಚರ್ಚೆ ಆಗಿಲ್ಲ. ಸರ್ಕಾರ ಇವತ್ತು ಬೀಳುತ್ತೆ, ನಾಳೆ ಬೀಳುತ್ತೆ ಅದು ಇದು ಹೇಳುತ್ತಲೇ ಇರ್ತಾರೆ. ಯಾವ ಕ್ರಾಂತಿನೂ ಇಲ್ಲ, ಅದೆಲ್ಲಾ ಭ್ರಾಂತಿ ಎಂದರು.

ರೌಡಿ ಪ್ರತಿಬಂಧಕ ದಳ ಮತ್ತೆ ಅಸ್ತಿತ್ವಕ್ಕೆ

ಅತ್ಯಾಚಾರ, ಗುಂಪು ಘರ್ಷಣೆ, ಅಪಹರಣಗಳಂತಹ ಪ್ರಕರಣಗಳನ್ನು ದುಷ್ಕರ್ಮಿಗಳು ಎಸಗುತ್ತಿದ್ದಾರೆ. ಇತ್ತೀಚೆಗೆ ಮೈಸೂರಿನ ಇಟ್ಟಿಗೆಗೂಡು ಬಳಿ ನಡೆದ ವೆಂಕಟೇಶ್ ಅಲಿಯಾಸ್ ಗಿಲ್ಕಿ ವೆಂಕಟೇಶ್ ಹತ್ಯೆ, ಅಪ್ರಾಪ್ತ ಬಾಲಕಿ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳ ಹಿನ್ನೆಲೆಯಲ್ಲಿ ಎಚ್ಚೆತ್ತ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್‌ರವರು ಕಡೆಗೂ ರೌಡಿ ನಿಗ್ರಹ ದಳವನ್ನು ಮತ್ತೆ ಪ್ರತಿಷ್ಠಾಪಿಸಿದ್ದಾರೆ. ಅಲ್ಲದೇ ಅ. 10 ರಿಂದ ನಿಗ್ರಹ ದಳವು ಕಾರ್ಯಾಚರಣೆ ಆರಂಭಿಸಿದ್ದು ನಿನ್ನೆ (ಅ.12) ಇಟ್ಟಿಗೆಗೂಡು, ವಿ.ವಿ. ಮೊಹಲ್ಲಾದ ಮಾತೃಮಂಡಳಿ ಸರ್ಕಲ್, ಗೌಸಿಯಾ ನಗರ, ಸುಣ್ಣದ ಕೇರಿ. ಕ್ಯಾತಮಾರನಹಳ್ಳಿ, ಪಡುವಾರಹಳ್ಳಿ ಹಾಗೂ ಇತರೆಡೆಗಳಲ್ಲಿ ಏರಿಯಾ ಡಾಮಿನೇಷನ್ ಡ್ರೈವ್ ನಡೆಸಿ 282 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ, 269 ಪ್ರಕರಣ ದಾಖಲಿಸಿಕೊಂಡಿದೆ.

ರೌಡಿ ನಿಗ್ರಹ ದಳದ ಸದಸ್ಯರಿಗೆ ಬದ್ಧತೆ, ಕಾರ್ಯಕ್ಷಮತೆ ಹಾಗೂ ಸಮಯ ಪ್ರಜ್ಞೆ ಇರಬೇಕಾಗುತ್ತದೆ. ಅದೇ ರೀತಿ ಹಿರಿಯ ಅಧಿಕಾರಿಗಳ ಪ್ರೋತ್ಸಾಹ ಮತ್ತು ಅಭಯ ಅಗತ್ಯ. ರೌಡಿಗಳ ಅಟ್ಟಹಾಸ ಮಟ್ಟ ಹಾಕುವ ವಿಷಯದಲ್ಲಿ ಯಾವುದೇ ರಾಜಕೀಯ ವ್ಯಕ್ತಿಗಳ ಮಧ್ಯಪ್ರವೇಶ ಇರಬಾರದು. ಯಾವುದೇ ಭಯ–ಭೀತಿ ಇಲ್ಲದೇ ದಳದ ಅಧಿಕಾರಿಗಳು ಕರ್ತವ್ಯ ನಿರ್ವಹಿಸಿದಾಗ ಮಾತ್ರ ಅದರ ಉದ್ದೇಶ ಸಫಲವಾಗಲಿದೆ. ರೌಡಿ ಗಳ ವಿರುದ್ಧ ಕೇವಲ ಪ್ರಕರಣ ದಾಖಲಿಸಿ ಜೈಲಿಗಟ್ಟಿದರೆ ಸಾಲದು, ಅವರಿಗೆ ತಕ್ಕ ಶಾಸ್ತಿ ಮಾಡಬೇಕಿದೆ. ನಮ್ಮ ಅವಧಿಯಲ್ಲಿ ರೌಡಿಗಳ ನಿಗ್ರಹ ದಳಕ್ಕೆ ಹಿರಿಯ ಅಧಿಕಾರಿಗಳ ಬೆಂಬಲವಿರುತ್ತಿತ್ತು. ಈಗ ಮತ್ತೆ ರೌಡಿ ನಿಗ್ರಹ ದಳ ಅಸ್ತಿತ್ವಕ್ಕೆ ತಂದಿರುವುದು ಒಳ್ಳೆಯ ಬೆಳವಣಿಗೆ.



-ಪುಟ್ಟಸ್ವಾಮೀಗೌಡ, ನಿವೃತ್ತ ಡಿವೈಎಸ್‌ಪಿ ಹಾಗೂ ಹಿಂದಿನ ರೌಡಿ ನಿಗ್ರಹ ದಳದ ಸದಸ್ಯ

ಹಬ್ಬಕ್ಕೆ 2500 ಹೆಚ್ಚುವರಿ ಬಸ್ ವ್ಯವಸ್ಥೆ

ಭಾಗಗಳಿಗೆ ವಿಶೇಷ ಬಸ್‌ಗಳ ಸಂಚಾರ ವ್ಯವಸ್ಥೆಯನ್ನು ಮಾಡಲಾಗಿದೆ. ಕೆಎಸ್‌ಆರ್‌ಟಿಸಿ ಸಾಮಾನ್ಯ ಸಾರಿಗೆ, ಐರಾವತ, ಸ್ಲೀಪರ್ ಕೋಚ್ ಸೇರಿ ಎಲ್ಲಾ ಐಷಾರಾಮಿ ಬಸ್‌ಗಳು ಲಭ್ಯವಿದೆ. ಹಬ್ಬಕ್ಕಾಗಿ ಊರಿಗೆ ತೆರಳುವ ಪ್ರಯಾಣಿಕರಿಗೆ ತೊಂದರೆ ಆಗದಂತೆ ಕೆಎಸ್‌ಆರ್‌ಟಿಸಿ ವಿಶೇಷ ವ್ಯವಸ್ಥೆ ಮಾಡಿಕೊಂಡಿದೆ. ಹಬ್ಬ ಮುಗಿದ ಬಳಿಕವೂ ವಿಶೇಷ ಬಸ್‌ಗಳ ಸಂಚಾರವಿರಲಿದೆ. ಸೆಪ್ಟೆಂಬರ್ 22 ಹಾಗೂ 26 ರಂದು ವಾಪಸ್ ಬರುವ ಪ್ರಯಾಣಿಕರಿಗೂ ಕೆಎಸ್‌ಆರ್‌ಟಿಸಿ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಿದೆ. ಮೆಜೆಸ್ಟಿಕ್, ಶಾಂತಿನಗರ, ಸ್ಯಾಟಲೈಟ್, ಪೀಣ್ಯ ಬಸ್ ನಿಲ್ದಾಣಗಳಿಂದ ಬಸ್‌ಗಳು ಕಾರ್ಯನಿರ್ವಹಿಸಲಿವೆ. ರಾಜ್ಯ ಹಾಗೂ ಅಂತರಾಜ್ಯದಿಂದಲೂ ಕೆಎಸ್‌ಆರ್‌ಟಿಸಿ ಬಸ್‌ಗಳು ಲಭ್ಯವಿರುತ್ತವೆ. ಈ ಬಗ್ಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಪ್ರಕಟಣೆ ಹೊರಡಿಸಿದೆ.

ಎಲ್ಲಿಂದ ಎಲ್ಲಿಗೆ– ಮೆಜೆಸ್ಟಿಕ್: ಧರ್ಮಸ್ಥಳ, ಶೃಂಗೇರಿ, ಹೊರನಾಡು, ಮಂಗಳೂರು, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ಗೋಕರ್ಣ, ಕಾರವಾರ ಭಾಗ, ಉತ್ತರ ಕರ್ನಾಟಕದ ಹುಬ್ಬಳಿ,ಬೆಳಗಾವಿ, ದಾರವಾಡ, ವಿಜಯಪುರ,ಯಾದಗಿರಿ ಸೇರಿ ಇತರೆಡೆ, ತಿರುಪತಿ, ವಿಜಯವಾಡ, ಹೈದರಾಬಾದ್ ಕಡೆಗೆ ಬಸ್‌ಗಳು ಲಭ್ಯ.

ಸ್ಯಾಟಲೈಟ್ ಬಸ್ ನಿಲ್ದಾಣ: ಮೈಸೂರು ಭಾಗದ ಎಲ್ಲಾ ಕಡೆ ಬಸ್‌ಗಳ ಕಾರ್ಯಾಚರಣೆ

ಶಾಂತಿನಗರ ಬಸ್ ನಿಲ್ದಾಣ: ತಮಿಳುನಾಡು ಮತ್ತು ಕೇರಳ ಕಡೆಗೆ ಮಧುರೈ, ಕುಂಭಕೋಣಂ, ಚೆನ್ನೈ, ಕೊಯಮತ್ತೂರ್, ತಿರುಚಿ, ಪಾಲಕ್ಕಾಡ್, ತ್ರಿಶೂರ್, ಏರ್ನಾಕುಲಂ, ಕೋಯಿಕೋಡ್, ಕ್ಯಾಲಿಕಟ್ ಮುಂತಾದ ಸ್ಥಳಗಳಿಗೆ ಹೋಗುವ ಪ್ರತಿಷ್ಠಿತ ಸಾರಿಗೆ ಬಸ್ ಗಳು ಲಭ್ಯ. ಪ್ರಯಾಣಿಕರು ಮುಂಗಡವಾಗಿ ಸೀಟ್ ಬುಕ್ ಮಾಡಿದರೆ 5% ರಿಯಾಯಿ ಸಿಗಲಿದೆ. ಹಾಗೆಯೇ ಎರಡೂ ಬದಿಯ ಮುಂಗಡ ಟಿಕೆಟ್ ಬುಕ್ ಮಾಡಿದರೆ 10% ರಿಯಾಯಿತಿ ಸಿಗಲಿದೆ. www.ksrtc.Karnataka.gov.in ವೆಬ್‌ಸೈಟ್‌ನಲ್ಲಿ ಪ್ರಯಾಣಿಕರು ತಮ್ಮ ಬಸ್ ಬುಕ್ ಮಾಡಬಹುದಾಗಿದೆ.

ಫೆಬ್ರವರಿಯಲ್ಲಿ ಆರಂಭ

ಮತ್ತು ಕಷ್ಟಗಳನ್ನು ವಿಶ್ಲೇಷಿಸಲು ಈ ದತ್ತಾಂಶವನ್ನು ಬಳಸ ಲಾಗುತ್ತದೆ. ಕೆನಡಾ, ಅಮೆರಿಕ ಬ್ರಿಟನ್ ನಂತಹ ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ಶ್ರೀಲಂಕಾ, ಬಾಂಗ್ಲಾದೇಶ, ಚೀನಾ ಮತ್ತು ಮಲೇಷ್ಯಾದಂತಹ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳು ಸೇರಿದಂತೆ ಅನೇಕ ದೇಶಗಳಲ್ಲಿ, ಮನೆಯ ಆದಾಯದ ಡೇಟಾವನ್ನು ಮನೆಯ ಸಮೀಕ್ಷೆಗಳ ಮೂಲಕ ಸಂಗ್ರಹಿಸಲಾಗುತ್ತದೆ. ಅಂಕಿ–ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಅಂತರರಾಷ್ಟ್ರೀಯ ಹಣಕಾಸು ನಿಧಿಯ ಭಾರತದ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಸುರ್ಜಿತ್ ಎಸ್. ಭಲ್ಲಾ ಅವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ತಜ್ಞರ ತಂಡವನ್ನು ರಚಿಸಲಾಗಿದೆ.

ಪ್ರಮಾಣಪತ್ರ ಸಲ್ಲಿಸಿದ ಸರ್ಕಾರ

ನಡೆಸಿ. ಒಂದು ವೇಳೆ ಸಲ್ಲಿಸಿಲ್ಲ ಎಂದಾದರೆ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿ ಎಂದು ಅಭಿಷೇಕ್ ಅವರಿಗೆ ಸೂಚಿಸಿತು. ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು, ಪ್ರಮಾಣಪತ್ರ ಸಲ್ಲಿಸಲು ಆಯೋಗಕ್ಕೆ ಹೈಕೋರ್ಟ್ ಒಂದು ದಿನ ಕಾಲಾವಕಾಶ ನೀಡಿತ್ತು. ಅದರಂತೆ ಪ್ರಮಾಣಪತ್ರ ಸಲ್ಲಿಸಲಾಗಿದೆ. ಅದರ ಪ್ರತಿಯನ್ನು ಅರ್ಜಿದಾರರಿಗೆ ಒದಗಿಸಲಾಗುವುದು ಎಂದರು.

ಏತನ್ಮಧ್ಯೆ, ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು, ಹಾಲಿ ಸಮೀಕ್ಷೆಯನ್ನು ಪ್ರಶ್ನಿಸಲಾದ ಅರ್ಜಿಗಳ ವಿಚಾರಣೆಯನ್ನು ಡಿಸೆಂಬರ್ 5ಕ್ಕೆ ನಿಗದಿಪಡಿಸಲಾಗಿದೆ. ಅಂದೇ ಈ ಅರ್ಜಿಗಳನ್ನೂ ವಿಚಾರಣೆಗೆ ನಿಗದಿಪಡಿಸಬಹುದು ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅರ್ಜಿಗಳ ವಿಚಾರಣೆಯನ್ನು ಡಿ.5ಕ್ಕೆ ಮುಂದೂಡಿತು.

ವರದಕ್ಷಿಣೆ ಕಿರುಕುಳ; ಎಫ್‌ಐಆರ್ ದಾಖಲು

ಮೈಸೂರು, ಅ.13– ನಗರದಲ್ಲಿ ವರದಕ್ಷಿಣೆ ಕಿರುಕುಳದ ಆಘಾತಕಾರಿ ಪ್ರಕರಣ ವರದಿಯಾಗಿದ್ದು, ವೈದ್ಯೆಯಾಗಿರುವ ತನ್ನ ಮಗಳ ವಿವಾಹ ಮಾಡಿಕೊಳ್ಳುವ ಸಂಬಂಧ ಹಣ, ಬೆಲೆಬಾಳುವ ವಸ್ತುಗಳು ಮತ್ತು ವಾಹನಕ್ಕಾಗಿ ಪದೇ ಪದೇ ಬೇಡಿಕೆ ಇಟ್ಟಿದ್ದಲ್ಲದೆ, ವಿವಾಹ ಕೈಬಿಡುವ ಬೆದರಿಕೆ ಹಾಕಿರುವ ಆರೋಪ ದಡಿ ತಾಯಿಯೊಬ್ಬರು ಪೊಲೀಸರಲ್ಲಿ ದೂರು ನೀಡಿದನ್ವಯ ಎಫ್‌ಐಆರ್ ದಾಖಲಾಗಿದೆ.


ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಈ ಸಂಬಂಧ ಪೊಲೀಸರು ಆರೋಪಿಗಳ ತನಿಖೆ ನಡೆಸುತ್ತಿದ್ದಾರೆ. ಪ್ರಕರಣ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸರಸ್ವತಿಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಪುರುಷೋತ್ತಮ್, ನಗದು ಮತ್ತು ಬೆಲೆಬಾಳುವ ವಸ್ತುಗಳ ಖರೀದಿ ಮತ್ತು ವರನ ಕುಟುಂಬಕ್ಕೆ ಹಸ್ತಾಂತರ ಮಾಡಿರುವ ಸಂಬಂಧ ಪೂರಕ ದಾಖಲೆಗಳನ್ನು ಒದಗಿಸುವಂತೆ ಹಾಗೂ ಛತ್ರ ಬುಕ್ ಮಾಡಿರುವುದು, ನಿಶ್ಚಿತಾರ್ಥ ಮಾಡಲು ತಗುಲಿದ ವೆಚ್ಚಗಳ ಸಂಬಂಧ ರಸೀದಿಗಳನ್ನು ನೀಡುವಂತೆ ದೂರುದಾರ ಕುಟುಂಬಕ್ಕೆ ತಿಳಿಸಿರುವುದಾಗಿ ಹೇಳಿದರು.

ಗಂಗೋತ್ರಿ ಬಡಾವಣೆಯ ನಿವಾಸಿ ಮಮತಾದೇವಿಯವರು ತಮ್ಮ ಪುತ್ರಿ ಡಾ.ಎಂ.ನೀತು ಅವರೊಂದಿಗೆ ವಿವಾಹ ನಿಶ್ಚಯಿಸಿದ್ದ ಕೂರ್ಗಳ್ಳಿಯ ತೇಜಸ್, ಈತನ ಪೋಷಕರಾದ ಮಹದೇವ, ನಾಗರತ್ನ, ಸಂಬಂಧಿಕರಾದ ಶಶಿಕುಮಾರ್ ಹಾಗೂ ಸುಮಾ ವಿರುದ್ಧ ದೂರು ನೀಡಿದ್ದಾರೆ. ದೂರಿನ ಪ್ರಕಾರ, ವರನ ಕಡೆಯವರ ಬೇಡಿಕೆಯಂತೆ 15 ಲಕ್ಷ ರೂ. ಖರ್ಚು ಮಾಡಿ ಅದ್ದೂರಿಯಾಗಿ ನಿಶ್ಚಿತಾರ್ಥ ಮಾಡಿಕೊಡಲಾಗಿದ್ದು, ಆ ವೇಳೆ ವರನಿಗೆ ವಜ್ರದ ಉಂಗುರವನ್ನು ತೊಡಿಸಲಾಗಿತ್ತು. ಬಳಿಕ ವರನ ತಂದೆ ಮಹದೇವು, ತಾಯಿ ನಾಗರತ್ನ ಹಾಗೂ ಸಂಬಂಧಿಕರಾದ ಶಶಿಕುಮಾರ್, ಸುಮಾ ಅವರು ಮನೆಗೆ ಬಂದು, ಹೆಚ್ಚುವರಿ ವರದಕ್ಷಿಣೆಯಾಗಿ 25 ಲಕ್ಷ ನಗದು ಹಾಗೂ 20 ಲಕ್ಷ ಬೆಲೆಬಾಳುವ ಕಾರನ್ನು ನೀಡುವಂತೆ ಒತ್ತಾಯಿಸಿದರು.

ನಿಶ್ಚಿತಾರ್ಥಕ್ಕೂ ಮುನ್ನ ವರನಿಗೆ 150 ಗ್ರಾಂ ತೂಕದ ಚಿನ್ನಾಭರಣ ಹಾಗೂ 10 ಲಕ್ಷರೂ. ನಗದು ವರದಕ್ಷಿಣೆಯಾಗಿ ನೀಡಿದ್ದೂ ಇನ್ನು ಹೆಚ್ಚಿನ ವರದಕ್ಷಿಣೆಯ ಬೇಡಿಕೆಯನ್ನು ನಿರಾಕರಿಸಿದ್ದಕ್ಕೆ ಮದುವೆಯನ್ನು ರದ್ದುಪಡಿಸಿಕೊಳ್ಳುವುದಾಗಿ ಬೆದರಿಕೆವೊಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಅಪಹರಣ ಪ್ರಕರಣದಿಂದ ಕೈಬಿಡುವಂತೆ ಕೋರಿ ಭವಾನಿ ರೇವಣ್ಣ ಸಲ್ಲಿಸಿದ್ದ ಅರ್ಜಿ ವಜಾ


ಬೆಂಗಳೂರು, ಅ.13– ಕೆ.ಆರ್.ನಗರದ ಮಹಿಳೆಯ ಅಪಹರಣ ಪ್ರಕರಣದಿಂದ ಕೈಬಿಡುವಂತೆ ಕೋರಿ ಭವಾನಿ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು 42ನೇ ಎಸಿಜೆಎಂ ಕೋರ್ಟ್ ವಜಾಗೊಳಿಸಿದೆ. ಎ7 ಕೆ.ಎ. ರಾಜಗೋಪಾಲ್ ಮತ್ತು ಎ8 ಭವಾನಿ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ ನ್ಯಾ. ಕೆ.ಎನ್.ಶಿವಕುಮಾರ್ ಆದೇಶಿಸಿದ್ದಾರೆ.



ಹಿನ್ನಲೆ: ವೈರಲ್ ಆಗಿದ್ದ ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋದಲ್ಲಿ 'ನನ್ನ ತಾಯಿಯ ಚಿತ್ರವೂ ಇದ್ದು, ಇದೀಗ ಅವರು ಕಣ್ಮರೆಯಾಗಿದ್ದಾರೆ ಎಂದು ಕೆ.ಆರ್.ನಗರ ಠಾಣೆಯಲ್ಲಿ ಸಂತ್ರಸ್ತೆಯೋರ್ವರ ಪುತ್ರ ಪ್ರಕರಣ ದಾಖಲಿಸಿದ್ದರು. ಅವರ ದೂರಿನ ಆಧಾರದಲ್ಲಿ ಹೆಚ್.ಡಿ. ರೇವಣ್ಣ, ಭವಾನಿ ರೇವಣ್ಣ ಮತ್ತು ಭವಾನಿ ರೇವಣ್ಣ ಸಂಬಂಧಿ ಬಾಬು ವಿರುದ್ಧ ದೂರು ದಾಖಲಾಗಿತ್ತು. ಪ್ರಕರಣದ ತನಿಖೆ ನಡೆಸಿದ ಪೊಲೀಸರು ಮಾಜಿ ಸಚಿವ ರೇವಣ್ಣ, ಅವರ ಪತ್ನಿ ಭವಾನಿ ಮತ್ತು ಬಾಬುವನ್ನು ಬಂಧಿಸಿದ್ದರು. ನಂತರ ಜಾಮೀನು ಕೋರಿ ಭವಾನಿ ರೇವಣ್ಣ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದರು. ಅಲ್ಲಿ ಅವರಿಗೆ ನಿರೀಕ್ಷಣಾ ಜಾಮೀನು ದೊರೆತಿತ್ತು.

ರೈಲ್ವೇ ಹಗರಣ: ಲಾಲು, ರಾಬ್ಡಿ, ತೇಜಸ್ವಿ ವಿರುದ್ಧ ನ್ಯಾಯಾಲಯದಲ್ಲಿ ದೋಷಾರೋಪ ನಿಗದಿ

ನವದೆಹಲಿ, ಅ.13– ಬಿಹಾರ ಚುನಾವಣೆ ದಿನಾಂಕ ಘೋಷಣೆಯಾಗಿರುವಾಗಲೇ ಆರ್‌ಜೆಡಿಗೆ ಬಿಗ್ ಶಾಕ್ ಸಿಕ್ಕಿದೆ. ಭಾರತೀಯ ರೈಲ್ವೇಯಲ್ಲಿ ನಡೆದಿದೆ ಎನ್ನಲಾಗಿರುವ ಹಗರಣಕ್ಕೆ ಸಂಬಂಧಿಸಿದಂತೆ ಆರ್‌ಜೆಡಿ ಪಕ್ಷದ ಮುಖ್ಯಸ್ಥ ಲಾಲು ಪ್ರಸಾದ್, ಬಿಹಾರ ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ, ಹಾಗೂ ಬಿಹಾರ ವಿಧಾನಸಭೆಯ ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್ ವಿರುದ್ಧ ನ್ಯಾಯಾಲಯ ದೋಷಾರೋಪ ನಿಗದಿ ಮಾಡಿದೆ.



ಲಾಲು ಪ್ರಸಾದ್ ಯಾದವ್

ವಿಶೇಷ ನ್ಯಾಯಾಧೀಶ (ಭ್ರಷ್ಟಾಚಾರ ತಡೆ ಕಾಯ್ದೆ) ವಿಶಾಲ್ ಗೊಗ್ನೆ ಅವರು, ರಾಬ್ಡಿ ದೇವಿ ಹಾಗೂ ತೇಜಸ್ವಿ ವಿರುದ್ಧ ಕ್ರಿಮಿನಲ್ ಸಂಚು ಹಾಗೂ ಮೋಸದ ಆರೋಪ ಹೊರಿಸಿದ್ದಾರೆ. ಐಆರ್‌ಸಿಟಿಸಿಯ ಎರಡು ಹೋಟೆಲ್‌ಗಳನ್ನು ಖಾಸಗಿ ಸಂಸ್ಥೆಗೆ ಗುತ್ತಿಗೆ ನೀಡುವಾಗ ಅವ್ಯವಹಾರ ನಡೆದಿದೆ ಎಂದು ಆರೋಪಿಸಲಾಗಿದೆ. ನೀವು ಪಿತೂರಿಯಲ್ಲಿ ತೊಡಗಿದ್ದೀರಿ ಮತ್ತು ಸರ್ಕಾರದ ಸೇವಕರಾಗಿ ನಿಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದೀರಿ. ನೀವು ಟೆಂಡರ್ ಮೇಲೆ ಪ್ರಭಾವ ಬೀರಿದ್ದೀರಿ ಮತ್ತು ಅರ್ಹತಾ ಷರತ್ತುಗಳನ್ನು ನಿಮಗೆ ಬೇಕಾದಂತೆ ಬದಲಾಯಿಸಿದ್ದೀರಿ ಎಂದು ಕೋರ್ಟ್ ಹೇಳಿದೆ.

ಮೈಸೂರು ಮಿತ್ರ

ಮಂಗಳವಾರ 14 ಅಕ್ಟೋಬರ್ 2025

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ

ಅ.27ಕ್ಕೆ, ಬೃಹತ್ ಬಾರುಕೋಲು ಚಳವಳಿ



ಸಭೆಯಲ್ಲಿ ಟಿ.ಆರ್.ವಿದ್ಯಾಸಾಗರ್ ಮಾತನಾಡಿದರು.

ನಂಜನಗೂಡು, ಅ.13– ಬಗರ್ ಹುಕುಂ ಸಾಗುವಳಿ ಚೀಟಿ ವಿತರಿಸುವುದು, ಸ್ಥಳೀಯರಿಗೆ ಉದ್ಯೋಗ ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಅ.27ರಂದು ನಂಜನಗೂಡಿನಲ್ಲಿ ಬೃಹತ್ ಬಾರುಕೋಲು ಚಳವಳಿ ನಡೆಸಲಾಗುವುದು ಎಂದು ಸಾಮೂಹಿಕ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ತಿಳಿಸಿದರು.

ನಗರದ ಎಪಿಎಂಸಿ ಸಭಾಂಗಣದಲ್ಲಿ ನಡೆದ ರೈತರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಉಳುಮೆ ಮಾಡುತ್ತಿರುವ ನಿಜವಾದ ರೈತರಿಗೆ ಬಗರ್ ಹುಕುಂ ಸಾಗುವಳಿ ಚೀಟಿ ನೀಡದೆ ವಂಚಿಸಿ ಉಳ್ಳವರಿಗೆ ಸಾಗುವಳಿ ಚೀಟಿ ವಿತರಿಸುವ ಕೆಲಸ ನಡೆಯುತ್ತಿದೆ. ಕೆಲ ರೈತರಿಗೆ ಸಾಗುವಳಿ ಚೀಟಿ ವಿತರಿಸಿದ್ದರೂ ದುರಸ್ತಿ ಕೆಲಸ ಆಗಿಲ್ಲ. ಅಧಿಕಾರಿಗಳು ಸಬೂಬು ಹೇಳಿ ಕಾಲಹರಣ ಮಾಡುತ್ತಿದ್ದಾರೆ. ಅಲ್ಲದೇ ತಹಸೀಲ್ದಾರ್ ರೈತರ ಕೈಗೆ ಸಿಗುತ್ತಿಲ್ಲ. ರೈತರು ತಮ್ಮ ಸಮಸ್ಯೆ ಹೇಳಿಕೊಳ್ಳಲು ವಾರಾನುಗಟ್ಟಲೇ ಕಾಯಬೇಕಾದ ಸನ್ನಿವೇಶ ನಿರ್ಮಾಣವಾಗಿದೆ. ಗ್ರಾಮಗಳಲ್ಲಿ ಚರಂಡಿಗಳು ಗಬ್ಬು ನಾರುತ್ತಿವೆ. ಕನಿಷ್ಠ ವಿದ್ಯುತ್ ದೀಪ ಅಳವಡಿಸುವ ಕೆಲಸ ಮಾಡುತ್ತಿಲ್ಲ. ಗ್ರಾಪಂ ಅಧಿಕಾರಿಗಳು ಈ ಸ್ವತ್ತು ನೀಡಲು ಲಂಚ ಕೇಳುತ್ತಿದ್ದಾರೆ. ಜೊತೆಗೆ ಕಾಡುಪ್ರಾಣಿ ಹಾವಳಿ ತಡೆಗಟ್ಟುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ವಿಫಲಗೊಂಡಿದ್ದಾರೆ. ಕೈಗಾರಿಕಾ ಪ್ರದೇಶಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುತ್ತಿಲ್ಲ. ಪ್ರತಿ ಟನ್ ಕಬ್ಬಿಗೆ 5 ಸಾವಿರ ನಿಗದಿ ಸೇರಿದಂತೆ ಹಲವು ಸಮಸ್ಯೆ ಈಡೇರಿಸುವಂತೆ ಆಗ್ರಹಿಸಿ ಬೃಹತ್ ಬಾರುಕೋಲು ಚಳವಳಿ ನಡೆಸಲಾಗುವುದು ಎಂದರು.

ಸಂಘದ ತಾಲೂಕು ಅಧ್ಯಕ್ಷ ಸತೀಶ್‌ರಾವ್, ರೈತ ಮುಖಂಡರಾದ ಶಂಕರ್ ನಾಯ್ಕ, ಶ್ವೇತಾ, ಸವಿತಾ, ಮಹದೇವ ನಾಯಕ, ಸಿದ್ದು, ಪೈ.ಮಹದೇವ ನಾಯಕ, ದೊಡ್ಡಯ್ಯ ಸೇರಿದಂತೆ ಇತರರಿದ್ದರು.

ಕುರುಬೂರು ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ಮಹದೇವಸ್ವಾಮಿ ಅಧ್ಯಕ್ಷ, ಕೆ.ಎಂ.ಶಿವಕುಮಾರ್ ಉಪಾಧ್ಯಕ್ಷ



ಕುರುಬೂರು ಪಿಎಸಿಎಸ್ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಮುಖಂಡರು ಅಭಿನಂದಿಸಿದರು.

ತಿ.ನರಸೀಪುರ, ಅ.13– ತಾಲೂಕಿನ ಕುರುಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಸೀಹಳ್ಳಿ ಮಹದೇವಸ್ವಾಮಿ ಹಾಗೂ ಉಪಾಧ್ಯಕ್ಷರಾಗಿ ಕನ್ನಹಳ್ಳಿ ಕೆ.ಎಂ.ಶಿವಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಾಲೂಕಿನ ಕುರುಬೂರು ಗ್ರಾಮದ ಸಹಕಾರ ಸಂಘದಲ್ಲಿ ನೂತನ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ ಸಂಬಂಧ ನಡೆದ ವಿಶೇಷ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಹದೇವಸ್ವಾಮಿ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಎಂ.ಶಿವಕುಮಾರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಹಸೀನಾ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಈ ವೇಳೆ ಸಂಘದ ಆವರಣದಲ್ಲಿ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಗೆ ಅ.11ರಂದು ಚುನಾವಣೆ ನಿಗದಿಯಾಗಿತ್ತಾದರೂ, ತಾಪಂ ಮಾಜಿ ಸದಸ್ಯ ಸೀಹಳ್ಳಿ ಗುರುಮೂರ್ತಿ ನೇತೃತ್ವದಲ್ಲಿ ನಡೆದ ನಿರ್ದೇಶಕ ಸ್ಥಾನದ ಆಕಾಂಕ್ಷಿಗಳ ಸಭೆಯಲ್ಲಿ 11 ಮಂದಿ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. ಸೀಹಳ್ಳಿ ಗುರುಮೂರ್ತಿಯವರು ಪಟ್ಟಣದ ಅತಿಥಿಗೃಹವೊಂದರಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ನಿರ್ದೇಶಕ ಸ್ಥಾನಕ್ಕೆ ಆಕಾಂಕ್ಷಿಗಳಾಗಿ ನಾಮಪತ್ರ ಸಲ್ಲಿಸಿದ್ದ 22 ಮಂದಿ ಮನವೊಲಿಸಿ ನಾಮಪತ್ರ ಹಿಂತೆಗೆಸುವ ಮೂಲಕ 11 ಮಂದಿ ಅವಿರೋಧವಾಗಿ ಆಯ್ಕೆ ಮಾಡಲು ಯಶಸ್ವಿಯಾಗಿದ್ದರು. ಹೀಗಾಗಿ ಇಂದು ನಡೆದ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ಸೀಹಳ್ಳಿ ಗುರುಮೂರ್ತಿ ಅವರ ಆಶಯದಂತೆ ಅವಿರೋಧವಾಗಿ ನಡೆಯಿತು.

> ಸಹಕಾರ ಸಂಘದ ನಿರ್ದೇಶಕರನ್ನು ಆಯ್ಕೆ ಮಾಡುವಾಗಲೂ ಎಲ್ಲರ ಸಹಕಾರದಿಂದ 11 ಮಂದಿಯನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. ಇಂದೂ ಕೂಡ ಸಹಕಾರ ಸಂಘಕ್ಕೆ ವರಿಷ್ಠರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಸಹಕಾರ ಸಂಘದಲ್ಲಿ ರಾಜಕೀಯ ನುಸುಳಬಾರದೆಂಬ ಉದ್ದೇಶದೊಂದಿಗೆ ಸಹಕಾರ ಸಂಘದ ವ್ಯಾಪ್ತಿಗೆ ಸೇರಿದ ಗ್ರಾಮಗಳ ಗ್ರಾಮಸ್ಥರು ಒಟ್ಟಾಗಿ ಸೇರಿ ಮಾತುಕತೆ ಮೂಲಕ ಯಾವುದೇ ಗೊಂದಲಗಳಿಲ್ಲದೇ, ಅವಿರೋಧವಾಗಿ ಆಯ್ಕೆ ಮಾಡಿದ್ದೇವೆ. ಹಾಗಾಗಿ ಅವಿರೋಧ ಆಯ್ಕೆಗೆ ಸಹಕಾರ ನೀಡಿದ ಗ್ರಾಮಸ್ಥರು ಹಾಗೂ ನಿರ್ದೇಶಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. – ಸೀಹಳ್ಳಿ ಗುರುಮೂರ್ತಿ, ತಾಪಂ ಮಾಜಿ ಸದಸ್ಯ

ನೂತನ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, ನನ್ನ ಮೇಲೆ ವಿಶ್ವಾಸವಿಟ್ಟು ಅಧ್ಯಕ್ಷ ಸ್ಥಾನದ ಜವಾಬ್ದಾರಿ ನೀಡಿದ್ದಾರೆ. ಜವಾಬ್ದಾರಿಯನ್ನು ನಿಭಾಯಿಸುವ ಮೂಲಕ ಸಹಕಾರ ಸಂಘದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು.

ಉಪಾಧ್ಯಕ್ಷ ಕೆ.ಎಂ.ಶಿವಕುಮಾರ್ ಮಾತನಾಡಿ, ಸಹಕಾರ ಸಂಘದ ವ್ಯಾಪ್ತಿಯಲ್ಲಿ ಬರುವ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಅಧ್ಯಕ್ಷರಿಗೆ ಸಹಕಾರ ನೀಡುವ ಜೊತೆಗೆ ಸಹಕಾರ ಸಂಘದಿಂದ ಷೇರುದಾರರಿಗೆ ಹಾಗೂ ಸದಸ್ಯರಿಗೆ ಬರಬಹುದಾದ ಎಲ್ಲ ಸೌಲಭ್ಯಗಳನ್ನು ತಲುಪಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಈ ವೇಳೆ ನಿರ್ದೇಶಕರಾದ ಕೆ.ಎಸ್.ನಾಗರಾಜಮೂರ್ತಿ, ಕೆ.ಎಂ.ಮಹದೇವಸ್ವಾಮಿ, ಎಂ.ಶಾಂತ, ಎಂ.ರವಿ, ಜಯಪ್ಪ, ಮಂಜುಳ, ಲಲಿತಮ್ಮ, ಪುಟ್ಟಸ್ವಾಮಿ, ಶಿವಮಲ್ಲಯ್ಯ, ಸಹಕಾರ ಸಂಘದ ಮಾಜಿ ಅಧ್ಯಕ್ಷ ಗುರುಬಸಪ್ಪ, ಮಾಜಿ ಉಪಾಧ್ಯಕ್ಷ ಕು.ಶಿ.ಬೃಂಗೀಶ್, ಗ್ರಾಪಂ ಮಾಜಿ ಅಧ್ಯಕ್ಷ ಕೆ.ಸಿ.ವೀರೇಶ್, ಕೆ.ಎನ್.ಅಶೋಕ್, ಕೆ.ಎಸ್.ಶಿವಕುಮಾರಸ್ವಾಮಿ, ಗೌರಿ ಶಂಕರ್, ಶಿವು, ಜಗಪತಿರಾವ್, ಪಾಪಣ್ಣ, ಮಹದೇವ, ತಾಪಂ ಮಾಜಿ ಸದಸ್ಯ ಬಸವರಾಜು, ಲಕ್ಷ್ಮಣ್, ಮಲ್ಲೇಶ್, ಸುನೀಲ್, ಕೆ.ಆರ್.ಚಿಕ್ಕಸ್ವಾಮಿ, ಡಾ.ಚಂದ್ರಶೇಖರ್, ಸಹಕಾರ ಸಂಘದ ಕಾರ್ಯ ನಿರ್ವಹಣಾಧಿಕಾರಿ ಕೆ.ಸಿ.ಶ್ರೀನಿವಾಸ ಮೂರ್ತಿ ಸೇರಿದಂತೆ ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಮೇಲೆ ವಕೀಲನಿಂದ ಶೂ ಎಸೆಯಲೆತ್ನ ಖಂಡಿಸಿ

ಕೋಟೆ, ಸರಗೂರಲ್ಲಿ ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ





ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆ ಹಾಗೂ ಸರಗೂರಿನಲ್ಲಿ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಹೆಚ್.ಡಿ.ಕೋಟೆ/ಸರಗೂರು, ಅ.13– ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ವಕೀಲ ರಾಕೇಶ್ ಕಿಶೋರ್ ಶೂ ಎಸೆಯಲು ಯತ್ನಿಸಿದ ಘಟನೆ ಖಂಡಿಸಿ ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಹಾಗೂ ಸರಗೂರಿನಲ್ಲಿ ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಯಿತು.

ಹೆಚ್.ಡಿ.ಕೋಟೆ: ತಾಲೂಕಿನ ಅಂತರಸಂತೆಯಲ್ಲಿ ಜಮಾಯಿಸಿದ ಹೋಬಳಿ ಮಟ್ಟದ ಡಾ.ಬಿ.ಆರ್.ಅಂಬೇಡ್ಕರ್ ಒಕ್ಕೂಟ ಹಾಗೂ ವಿವಿಧ ಪ್ರಗತಿಪರ ಒಕ್ಕೂಟಗಳ ಪದಾಧಿಕಾರಿಗಳು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ವಕೀಲ ರಾಕೇಶ್ ಕಿಶೋರ್ ಪ್ರತಿಕೃತಿ ದಹನ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಅಕ್ರಮ ಸಕ್ರಮ ಸಮಿತಿ ಸದಸ್ಯ ಬಾಲಯ್ಯ, ಕರ್ನಾಟಕ ಭೀಮ್ ಸೇನೆ ತಾಲೂಕು ಅಧ್ಯಕ್ಷ ಪ್ರಕಾಶ್ ಬುದ್ಧ ಮಾತನಾಡಿ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಯತ್ನಿಸಿದ ವಕೀಲನನ್ನು ಕೂಡಲೇ ಗಡಿಪಾರು ಮಾಡಬೇಕು. ಇಲ್ಲವಾದಲ್ಲಿ ಉಗ್ರ ಹೋರಾಟ ರೂಪಿಸಲಾಗುವುದು ಎಂದರು.

ಬಳಿಕ ಪ್ರತಿಭಟನಾಕಾರರು ತಹಸೀಲ್ದಾರ್ ಶ್ರೀನಿವಾಸ್ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಈ ವೇಳೆ ತಾಪಂ ಮಾಜಿ ಸದಸ್ಯ ರಾಜಣ್ಣ, ಅಂಬೇಡ್ಕರ್ ಒಕ್ಕೂಟದ ಅಧ್ಯಕ್ಷ ಮಂಜು, ಪುಟ್ಟರಾಜು, ಗೋವಿಂದರಾಜು, ನಂಜುಂಡಸ್ವಾಮಿ, ಹಾಲಯ್ಯ, ರಾಜಣ್ಣ, ರಾಜಣ್ಣ, ರಾಮು, ಸಣ್ಣಕೂಸಯ್ಯ, ದೊರೆಸ್ವಾಮಿ, ಶಿವನಂಜಯ್ಯ, ರೇಖಾ, ಸುರೇಶ್, ರಂಗಸ್ವಾಮಿ, ಚಲುವಮ್ಮ, ವೆಂಕಟೇಶ್ ಬಂಗ್ಲಿ, ಶಂಭು ಸೇರಿದಂತೆ ಇನ್ನಿತರರಿದ್ದರು.

ಸರಗೂರು: ಪಟ್ಟಣದ ಅಂಬೇಡ್ಕರ್ ಭವನದ ಎದುರು ಜಮಾಯಿಸಿದ ಆದಿ ಕರ್ನಾಟಕ ಮಹಾಸಭಾ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ಅಲ್ಲಿಂದ ಮೆರವಣಿಗೆಯಲ್ಲಿ ಹೆಚ್.ಬಿ.ರಸ್ತೆ ಮಹಾವೀರ ಸರ್ಕಲ್ ಮೂಲಕ ತೆರಳಿ ಬಸ್ ನಿಲ್ದಾಣದ ಬಳಿ ಮಾನವ ಸರಪಳಿ ನಿರ್ಮಿಸಿದರು. ಈ ವೇಳೆ ಹೆಗ್ಗೂರು ನಿಂಗರಾಜು ತಂಡ ಕ್ರಾಂತಿಗೀತೆ ಹಾಡುವ ಮೂಲಕ ಕೆಲಕಾಲ ಪ್ರತಿಭಟನೆ ನಡೆಸಿದರು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಮಾತನಾಡಿ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಯತ್ನಿಸಿದ ವಕೀಲ ರಾಕೇಶ್ ಕಿಶೋರ್ ವರ್ತನೆಯಿಂದ ನಮ್ಮೆಲ್ಲರಿಗೂ ನೋವಾಗಿದೆ. ಹೀಗಾಗಿ ಆತನನ್ನು ವಜಾಗೊಳಿಸಿ ದೇಶದಿಂದ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ಆದಿ ಕರ್ನಾಟಕ ಮಹಾ ಸಭಾ ತಾಲೂಕು ಅಧ್ಯಕ್ಷ ರಾಜಣ್ಣ, ಗೌರವಾಧ್ಯಕ್ಷ ಇದಿಯಪ್ಪ, ಮಾಜಿ ಅಧ್ಯಕ್ಷರಾದ ಶಿವಣ್ಣ, ಮುದ್ದುಮಲ್ಲಯ್ಯ, ಪುರಸಭೆ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಮಹದೇವ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಚಲುವರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಜಿಪಂ ಮಾಜಿ ಉಪಾಧ್ಯಕ್ಷೆ ಭಾಗ್ಯಲಕ್ಷ್ಮಿ, ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ನಾಗರಾಜು, ಮಾಜಿ ಅಧ್ಯಕ್ಷ ಸಣ್ಣಸ್ವಾಮಿ, ಮುಖಂಡರಾದ ಮರಿ ದೇವಯ್ಯ, ಲಕ್ಷ್ಮಣ್, ನಾಗರಾಜು, ಶಿವಕುಮಾರ್, ಕೃಷ್ಣ, ಮಹೇಶ್, ಬಿಲ್ಲೇಶ್, ಸಣ್ಣಸ್ವಾಮಿ, ವಾಣಿ, ಮೂರ್ತಿ, ಗೋವಿಂದರಾಜು, ಗೋಪಾಲ್, ನವೀನ್, ಕುಮಾರ್, ಪುಟ್ಟಸ್ವಾಮಿ, ಚಿನ್ನಣ್ಣ, ಕಾಳಸ್ವಾಮಿ, ನಾಗೇಂದ್ರ, ಶಿವಣ್ಣ, ಪ್ರಕಾಶ್, ಖಜಾಂಚಿ ಶ್ರೀನಿವಾಸ್, ಸೂರ್ಯ ಕುಮಾರ್, ನಿರ್ದೇಶಕರಾದ ಹಾಲಯ್ಯ, ವೆಂಕಟಾಚಲ, ಗೋವಿಂದರಾಜು, ಸಣ್ಣಪ್ಪ, ಕೆ.ಗೋವಿಂದ, ಶಿವಕುಮಾರ್, ಮೂರ್ತಿ, ಮಹೇಶ್, ಅಣ್ಣಯ್ಯಸ್ವಾಮಿ, ಲಕ್ಷ್ಮಣ್ ಕುಮಾರ್ ಇತರರಿದ್ದರು.

ಕರ್ತವ್ಯ ಲೋಪ ಹಿನ್ನೆಲೆ

ಹೆಚ್.ಡಿ.ಕೋಟೆ ಪುರಸಭೆ ಮುಖ್ಯಾಧಿಕಾರಿ ಅಮಾನತು




ಸುರೇಶ್

ಹೆಚ್.ಡಿ.ಕೋಟೆ, ಅ.13– ಕರ್ತವ್ಯ ಲೋಪ ಹಿನ್ನೆಲೆಯಲ್ಲಿ ಪಟ್ಟಣದ ಪುರಸಭೆ ಮುಖ್ಯಾಧಿಕಾರಿ ಸುರೇಶ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಪೌರಾಡಳಿತ ನಿರ್ದೇಶಕ ಪ್ರಭುಲಿಂಗ ಆದೇಶ ಹೊರಡಿಸಿದ್ದಾರೆ.

ಈ ಹಿಂದೆ ಸುರೇಶ್ ಅವರು ಹೆಚ್.ಡಿ.ಕೋಟೆ ಪುರಸಭೆಯಲ್ಲಿ ಕಂದಾಯಾಧಿಕಾರಿಯಾಗಿದ್ದ ವೇಳೆ ಕಂದಾಯ ಭೂಮಿಗೆ ಅನಧಿಕೃತವಾಗಿ ಖಾತೆ ಮಾಡಿದ್ದಾರೆ ಎಂದು ದೂರು ದಾಖಲಾಗಿತ್ತು. ಈ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಯೋಜನಾ ನಿರ್ದೇಶಕರು, ಮಂಡ್ಯ ಜಿಲ್ಲೆ ಅವರನ್ನು ತನಿಖಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಜು.7 ರಂದು ತನಿಖಾಧಿಕಾರಿಗಳು ಹೆಚ್.ಡಿ.ಕೋಟೆ ಪುರಸಭೆಗೆ ಭೇಟಿ ನೀಡಿ ತನಿಖೆ ನಡೆಸಲು ದೂರಿಗೆ ಸಂಬಂಧಿಸಿದ ಕಡತಗಳನ್ನು ಹಾಜರುಪಡಿಸಲು ಸೂಚಿಸಿದ್ದರು. ಆದರೆ ಮುಖ್ಯಾಧಿಕಾರಿ ಸುರೇಶ್ ಅವರು ಯಾವುದೇ ಕಡತ ಹಾಜರುಪಡಿಸಿರಲಿಲ್ಲ ಹಾಗೂ ಹಲವು ಬಾರಿ ದೂರವಾಣಿ ಕರೆ ಮಾಡಿದರೂ ಕರೆ ಸ್ವೀಕರಿಸದೇ ಕಡತಗಳನ್ನು ತನಿಖಾಧಿಕಾರಿಗಳಿಗೆ ಸಲ್ಲಿಸಿಲ್ಲ ಎಂದು ಯೋಜನಾ ನಿರ್ದೇಶಕರು ಪೌರಾಡಳಿತ ನಿರ್ದೇಶಕರಿಗೆ ವರದಿ ಸಲ್ಲಿಸಿದ್ದರು.

ಮುಖ್ಯಾಧಿಕಾರಿ ಸುರೇಶ್ ಅವರು ತನಿಖೆಗೆ ಸಹಕಾರ ನೀಡದ ಹಿನ್ನೆಲೆಯಲ್ಲಿ ಕಾರಣ ಕೇಳಿ 3 ದಿನದೊಳಗೆ ಲಿಖಿತ ಸಮಜಾಯಿಷಿ ನೀಡುವಂತೆ ಪೌರಾಡಳಿತ ನಿರ್ದೇಶನಾಲಯ ನೋಟಿಸ್ ನೀಡಿದ್ದರೂ, 15 ದಿನಗಳಾದರೂ ಯಾವುದೇ ಸಮಜಾಯಿಷಿ ನೀಡದೆ ಕರ್ತವ್ಯ ಲೋಪ ಎಸಗಿದ್ದಾರೆ. ಹೀಗಾಗಿ ಪುರಸಭಾ ಮುಖ್ಯಾಧಿಕಾರಿ ಸುರೇಶ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಪೌರಾಡಳಿತ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ.

ನೂತನ ಅಧ್ಯಕ್ಷರಿಗೆ ಸನ್ಮಾನ



ಮೈಸೂರು ಮೃಗಾಲಯ ಪ್ರಾಧಿಕಾರದ ನೂತನ ಅಧ್ಯಕ್ಷ ಹಾಡ್ಯ ರಂಗಸ್ವಾಮಿ ಅವರನ್ನು ಕಾಂಗ್ರೆಸ್ ಮೈಸೂರು ಜಿಲ್ಲಾ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಹೆಚ್.ಬಿ.ಕುಮಾರ್ ಹಾಗೂ ಗ್ರಾಮಾಂತರ ಕಾರ್ಯದರ್ಶಿ ಗೋಪಾಲಪುರ ಮಹೇಶ್ ಸನ್ಮಾನಿಸಿದರು.

ಕಾಂಗ್ರೆಸ್ ಕಟ್ಟಾಳುಗಳು ಪಕ್ಷ ಸಂಘಟನೆಗೆ ಮುಂದಾಗಿ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕರೆ



ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ಹುಣಸೂರು, ಅ.13– ರಾಜಕೀಯ ಅಧಿಕಾರವಿದ್ದಾಗ ಮಾತ್ರ ಅಭಿವೃದ್ಧಿ ಕಾರ್ಯ ಮಾಡಲು ಸಾಧ್ಯ. ಹೀಗಾಗಿ ಕಾಂಗ್ರೆಸ್ ಕಟ್ಟಾಳುಗಳು ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕರೆ ನೀಡಿದರು.

ನಗರದಲ್ಲಿ ನಡೆದ ಪಕ್ಷದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಾಗೂ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಬಡವರ ಪರವಾಗಿದೆ. ಸಾಕಷ್ಟು ಕಾರ್ಯಕ್ರಮಗಳ ಮೂಲಕ ಜನರಲ್ಲಿ ನಂಬಿಕೆ, ವಿಶ್ವಾಸ ಉಂಟು ಮಾಡಿದೆ. ಹೀಗಾಗಿ ಕಾರ್ಯಕರ್ತರು ನಮ್ಮ ಕಾರ್ಯಕ್ರಮಗಳನ್ನು ಜನರಿಗೆ ಮನವರಿಕೆ ಮಾಡಬೇಕು. ಕೇಂದ್ರದ ಆಡಳಿತಾರೂಢ ಬಿಜೆಪಿ ಪಕ್ಷ ತಳ ಸಮುದಾಯ ಮತ್ತು ಅಲ್ಪಸಂಖ್ಯಾತರನ್ನು ತುಳಿಯುವ ಗುರಿ ಹೊಂದಿದೆ ಎಂದ ಅವರು, ಕಾಂಗ್ರೆಸ್ ನೇತೃತ್ವದಲ್ಲಿ ಸ್ವಾತಂತ್ರ್ಯ ಪಡೆದ ಭಾರತ ಸರ್ವರ ಸರ್ವ ತೋಮುಖ ಅಭಿವೃದ್ಧಿಗೆ ಡಾ.ಬಿ.ಆರ್.ಅಂಬೇಡ್ಕರ್ ನೇತೃತ್ವದಲ್ಲಿ ಸಂವಿಧಾನ ರಚಿಸಿ ರಾಷ್ಟ್ರದ ಎಲ್ಲಾ ವರ್ಗವನ್ನು ಸಮನಾಗಿ ಕಂಡ ಏಕೈಕ ಪಕ್ಷ ಕಾಂಗ್ರೆಸ್ ಪಕ್ಷವಾಗಿದೆ ಎಂದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರಿಗೆ ಅಧಿಕಾರವಿರಲೀ, ಇಲ್ಲದಿರಲಿ ಸದಾ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅಧಿಕಾರವಿಲ್ಲದಿದ್ದರೂ ಸರ್ಕಾರದ ಮೇಲೆ ಒತ್ತಡ ಹಾಕಿ ತಾಲೂಕಿನ ಕಟ್ಟೆಮಳಲವಾಡಿ ನಾಲೆಗಳ ಅಭಿವೃದ್ಧಿ, ಮರದೂರು ಏತ ನೀರಾವರಿ ಯೋಜನೆ ಮಂಜೂರು, ಹೈಟೆಕ್ ಆಸ್ಪತ್ರೆಗೆ ಅನುದಾನ ಬಿಡುಗಡೆ ಸೇರಿದಂತೆ ಅನೇಕ ಅಭಿವೃದ್ಧಿ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಮುಂದಿನ ಚುನಾವಣೆಯಲ್ಲಿ ಅವರನ್ನು ಗೆಲ್ಲಿಸಲು ಮನವಿ ಮಾಡಿದ ಅವರು ರಾಜ್ಯ ಸರ್ಕಾರ ಯೂರಿಯಾ ಸರಬರಾಜಿಗೆ ಅಗತ್ಯ ಕ್ರಮ ಕೈಗೊಂಡಿದ್ದು, ಕೇಂದ್ರ ಸರ್ಕಾರ ಬಿಡುಗಡೆ ಮಾಡಬೇಕಿದೆ. ಹೀಗಾಗಿ ಶೀಘ್ರ ಯೂರಿಯಾ ಗೊಬ್ಬರ ಬೇಡಿಕೆ ಪೂರೈಸಲಿದ್ದೇವೆ ಎಂದರು.

ಮಾಜಿ ಸಂಸದ ಉಗ್ರಪ್ಪ ಮಾತನಾಡಿ, 2026ಕ್ಕೆ ಲೋಕಸಭೆ ಮತ್ತು ವಿಧಾನಸಭೆ ಪುನರ್ ವಿಂಗಡಣೆಯಾಗುವ ಸಾಧ್ಯತೆ ಇದ್ದು, ರಾಜ್ಯದಲ್ಲಿ 340ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರ ಹಾಗೂ ಲೋಕಸಭಾ ಕ್ಷೇತ್ರ 42ಕ್ಕೇರುವ ಸಾಧ್ಯತೆ ಇದೆ. ರಾಜ್ಯದ ಪ್ರವಾಹ ಪೀಡಿತ ಪ್ರದೇಶಗಳಿಗೆ ಪ್ರಧಾನಿ ಮೋದಿಯವರು ಕನಿಷ್ಠ ವೈಮಾನಿಕ ಸಮೀಕ್ಷೆ ನಡೆಸಿಲ್ಲ. ತಾಕತ್ತಿದ್ದರೆ ಶೋಷಿತ ಸಮುದಾಯಗಳ ಪಟ್ಟಿಗೆ ಸೇರುವ ನಯನಜ ಕ್ಷತ್ರಿಯ, ಮಡಿವಾಳ ಸಮಾಜವನ್ನು ಎಸ್‌ಟಿಗೆ ಸೇರಿಸಲಿ ಎಂದು ಆಗ್ರಹಿಸಿದರು.


ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ರಾಜ್ಯ ಗ್ಯಾರಂಟಿ ಯೋಜನೆ ಉಪಾಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್, ಬೋವಿ ನಿಗಮದ ಅಧ್ಯಕ್ಷ ರಾಮಪ್ಪಬೋವಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕೆಪಿಸಿಸಿ ಮಾಜಿ ಕಾಯದರ್ಶಿ ಹೆಚ್.ಎನ್.ಪ್ರೇಮಕುಮಾರ್, ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಸೇರಿದಂತೆ ಇತರರು ಮಾತನಾಡಿದರು.

ಇದೇ ವೇಳೆ ಗದ್ದಿಗೆ ದೇವರಾಜ್ (ತಾಲೂಕು ಘಟಕದ ಕಾರ್ಯಾಧ್ಯಕ್ಷ), ರವಿಪ್ರಸನ್ನ ಕುಮಾರ್ (ನಗರಾಧ್ಯಕ್ಷ), ಪ್ರೇಮಕುಮಾರ್ (ಬಿಳಿಕೆರೆ ಬ್ಲಾಕ್ ಅಧ್ಯಕ್ಷ), ಬಾಲಸುಂದರ್ (ಹುಣಸೂರು ಗ್ರಾಮಾಂತರ ಅಧ್ಯಕ್ಷ) ಅಧಿಕಾರ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮುಖಂಡರಾದ ಹೆಚ್.ಡಿ.ಗಣೇಶ್, ನಾರಾಯಣ್, ಪುಟ್ಟರಾಜ್, ರಮೇಶ್, ಅಣ್ಣಯ್ಯನಾಯಕ, ಡಿ.ಕೆ.ಕುನ್ನೇಗೌಡ, ಚಂದ್ರನ್ ಗೌಡ, ಬಿ.ಎನ್. ಜಯರಾಂ, ಸುನಿತಾ ಜಯರಾಮೇಗೌಡ, ಎ.ಪಿ. ಸ್ವಾಮಿ, ಬಸವರಾಜೇಗೌಡ, ಬಿಳಿಕೆರೆ ಬಸವರಾಜ್, ಅಣ್ಣಯ್ಯನಾಯಕ, ಚಿನ್ನ ವೀರಯ್ಯ, ಅಜ್ಗರ್ ಪಾಷಾ, ಟಿ.ಕೃಷ್ಣ, ರಾಜು ಶಿವರಾಜೇಗೌಡ, ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಅಧ್ಯಕ್ಷ ರಘು, ಕುಮಾರ್, ಚಿಕ್ಕಸ್ವಾಮಿ ಸೇರಿದಂತೆ ಇತರರಿದ್ದರು.

> ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕಾಂಬಿನೇಷನ್‌ನಿಂದ ಪಕ್ಷ ಸದೃಢ ವಾಗಿದೆ. ಮುಂದೆ ನಗರಸಭೆ, ಜಿಪಂ, ತಾಪಂ, ಗ್ರಾಪಂ ಚುನಾವಣೆ ಬರುತ್ತಿದ್ದು, ನೂತನವಾಗಿ ನೇಮಕಗೊಂಡ ನಾಯಕರು ಹಾಗೂ ಪದಾಧಿಕಾರಿಗಳು ಮುಂದಿನ 15 ದಿನಗಳಲ್ಲಿ ಬ್ಲಾಕ್ ಹಾಗೂ ಬೂತ್ ಮಟ್ಟದ ಕಮಿಟಿ ರಚಿಸಬೇಕು. –ಜಿ.ಸಿ.ಚಂದ್ರಶೇಖರ್, ರಾಜ್ಯಸಭಾ ಸದಸ್ಯ

ಮಂಜುನಾಥ್ ನಿಧನ



ಹುಣಸೂರು, ಅ.13– ತಾಲೂಕಿನ ಶ್ಯಾನಬೋಗನಹಳ್ಳಿ ನಿವಾಸಿ ಹಾಗೂ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ಸರ್ವೇಯರ್ ಮಂಜುನಾಥ್ (49) ಸೋಮವಾರ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ನಗರ ಸುದ್ದಿಗಳು

ಮೈಸೂರಲ್ಲಿ ಮುಂದುವರೆದ ರೌಡಿ ಪೆರೇಡ್; ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗುವವರಿಗೆ ಎಚ್ಚರಿಕೆ

ಹಲವರ ವಿರುದ್ಧ ನಾನಾ ರೀತಿ ಪ್ರಕರಣ ದಾಖಲು



ಪೊಲೀಸರು ಪಥಸಂಚಲನದ ಮೂಲಕ ವಿವಿಧೆಡೆ ತಪಾಸಣೆ ನಡೆಸಿದರು.

ಮೈಸೂರು, ಅ.13– ನಗರ ಪೊಲೀಸರ ವಿಶೇಷ ಕಾರ್ಯಾಚರಣೆ ಮುಂದುವರೆದಿದ್ದು, ಸೋಮವಾರವೂ ರೌಡಿ ಪೆರೇಡ್, ಪಥ ಸಂಚಲನದ ಮೂಲಕ ಪುಡಿ ರೌಡಿಗಳಿಗೆ ನಡುಕ ಹುಟ್ಟಿಸಿದ್ದಾರೆ.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನಿರ್ದೇಶನದಂತೆ ಡಿಸಿಪಿಗಳಾದ ಆರ್.ಎನ್.ಬಿಂದುಮಣಿ ಹಾಗೂ ಕೆ.ಎನ್.ಸುಂದರ್‌ರಾಜ್, ನರಸಿಂಹರಾಜ ಉಪವಿಭಾಗದ ಪೊಲೀಸ್ ಠಾಣೆಗಳ ವ್ಯಾಪ್ತಿಯ ರೌಡಿಗಳ ಪೆರೇಡ್ ನಡೆಸಿ, ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ಎಚ್ಚರಿಕೆ ನೀಡಿದರು.

ಗೌಸಿಯಾನಗರ, ಶಾಂತಿನಗರ, ಹೂಟಗಳ್ಳಿ, ಹಿನಕಲ್, ನಾಚನಹಳ್ಳಿ ಪಾಳ್ಯ, ಜ್ವಾಲಾಮುಖಿ ವೃತ್ತದ ಪಾರ್ಕಿಂಗ್, ವಸ್ತು ಪ್ರದರ್ಶನ ಮೈದಾನ, ಇಟ್ಟಿಗೆಗೂಡು ಮತ್ತಿತರರ ಪ್ರದೇಶಗಳಲ್ಲಿ ರೌಡಿ ಪ್ರತಿಬಂಧಕ ದಳದೊಂದಿಗೆ ಆಯಾಯ ಪೊಲೀಸ್ ಠಾಣೆ ವ್ಯಾಪ್ತಿಯ ಅಧಿಕಾರಿ ಹಾಗೂ ಸಿಬ್ಬಂದಿ ಇಂದು ರಾತ್ರಿ ಪಥಸಂಚಲನ ನಡೆಸಿ, ಅನುಮಾನಾಸ್ಪದ ವ್ಯಕ್ತಿಗಳ ವಿಚಾರಣೆ ನಡೆಸಿದರು. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವವರು, ವಾಹನಗಳ ಮರೆಯಲ್ಲಿ ಜೂಜಾಡುವವರಿಗೆ ಬಿಸಿ ಮುಟ್ಟಿಸಿದರು.

ಇಂದಿನ ಕಾರ್ಯಾಚರಣೆಯಲ್ಲಿ ಸುಮಾರು 227 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, 422 ಮಂದಿ ವಿರುದ್ಧ ಪೆಟ್ಟಿ ಕೇಸ್ ದಾಖಲಿಸಿ, ಎಚ್ಚರಿಕೆ ನೀಡಲಾಗಿದೆ. 126 ಮತ್ತು 129 ಬಿಎನ್‌ಎಸ್‌ಎಸ್ ಅಡಿಯಲ್ಲಿ 13 ಹಾಗೂ 288 ಕೋಪ್ಟಾ ಪ್ರಕರಣ ದಾಖಲಿಸಲಾಗಿದೆ. ಇದರೊಂದಿಗೆ ಟ್ರಿಪ್ಪಲ್ ರೈಡಿಂಗ್ 61, ಹೆಲ್ಮೆಟ್ ರಹಿತ ಚಾಲನೆ, ದೋಷಯುಕ್ತ ನಂಬರ್ ಪ್ಲೇಟ್, ವ್ಹೀಲಿಂಗ್ ಇನ್ನಿತರ ಸಂಚಾರ ನಿಯಮ ಉಲ್ಲಂಘನೆಯಡಿ 204 ಪ್ರಕರಣ ದಾಖಲಿಸಿ, 7 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಜನ ಸಂಪರ್ಕ ಸಭೆ: ಕೆ.ಆರ್. ಪೊಲೀಸ್ ಠಾಣೆ ಪೊಲೀಸರು, ಸುಣ್ಣದಕೇರಿಯಲ್ಲಿ ಭಾನುವಾರ ಜನ ಸಂಪರ್ಕ ಸಭೆ ನಡೆಸಿದರು. ಸಂಚಾರ ಹಾಗೂ ಪಾರ್ಕಿಂಗ್ ಸಂಬಂಧಿತ ಸಮಸ್ಯೆಗಳು, ಪುಂಡರ ಹಾವಳಿ ಬಗ್ಗೆ ಸಾರ್ವಜನಿಕರು ದೂರಿದರು. ಈ ಸಂಬಂಧ ಸೂಕ್ತ ಕ್ರಮ ವಹಿಸುವುದಾಗಿ ಪೊಲೀಸರು ಭರವಸೆ ನೀಡಿದರು.

ಸಿಎಂ ಸಿದ್ದರಾಮಯ್ಯ ಗ್ಯಾರಂಟಿಗೆ ಹಿರಿಯ ಕಾಂಗ್ರೆಸ್ ಶಾಸಕ ಆರ್.ವಿ. ದೇಶಪಾಂಡೆ ಅಸಮಾಧಾನ

ನಾನು ಸಿಎಂ ಆಗಿದ್ದರೆ ಇಂತಹಕ್ಕೆಲ್ಲಾ ಅವಕಾಶ ನೀಡುತ್ತಿರಲಿಲ್ಲ!



ಬೆಂಗಳೂರು, ಅ.13(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳಿಗೆ ಹಿರಿಯ ನಾಯಕ ಹಾಗೂ ಶಾಸಕ ಆರ್.ವಿ.ದೇಶಪಾಂಡೆ ಅಪಸ್ವರ ಎತ್ತಿದ್ದಾರೆ.

ಸರ್ಕಾರದ ಯೋಜನೆಗಳು ಒಂದಾ, ಎರಡಾ, ಬಡವರಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಮಹಿಳೆಯರಿಗೆ ಮಾಸಿಕ 2,000 ರೂ. ನೀಡುವುದಲ್ಲದೆ, ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತ ಪ್ರಯಾಣ.

ಮಹಿಳೆಯರ ಉಚಿತ ಪ್ರಯಾಣದಿಂದ ಬಸ್‌ಗಳಲ್ಲಿ ಅಲ್ಲದೆ, ಪವಿತ್ರ ಯಾತ್ರಾ ಸ್ಥಳಗಳ ದೇವಾಲಯಗಳಲ್ಲೂ ಅವರೇ ತುಂಬಿರುತ್ತಾರೆ. ಸರ್ಕಾರಿ ಬಸ್‌ಗಳಲ್ಲಿ ನಾಲ್ಕು ಮಂದಿ ಗಂಡಸರಿಗೂ ಪ್ರಯಾಣಿಸುವುದು ದುಸ್ತರವಾಗಿದೆ. ನಾನು ಮುಖ್ಯಮಂತ್ರಿ ಆಗಿದ್ದರೆ, ಇಂತಹ ಗ್ಯಾರಂಟಿಗಳಿಗೆಲ್ಲಾ ಅವಕಾಶ ನೀಡುತ್ತಿರಲಿಲ್ಲ ಎಂದರು.

ದಾಂಡೇಲಿಯಲ್ಲಿ ಸಾರ್ವಜನಿಕರೊಂದಿಗಿನ ಚರ್ಚೆ ವೇಳೆ ಗ್ಯಾರಂಟಿ ಯೋಜನೆಗಳ ಜಾರಿ ಬಗ್ಗೆ ವ್ಯಂಗ್ಯವಾಡಿದ್ದಾರೆ. ನಮ್ಮ ಮುಖ್ಯಮಂತ್ರಿ ನೀಡುತ್ತಿರುವ ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಯೋಜನೆಗಳಿಂದ ಎಲ್ಲವೂ ಪುಕ್ಕಟೆಯಾಗಿ ದೊರೆಯುತ್ತಿದೆ. ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ. ಬದಲು ಐದು ಕೆ.ಜಿ. ಅಕ್ಕಿ ನೀಡಿ ಉಳಿದ ಐದು ಕೆ.ಜಿ.ಗೆ ಅಡುಗೆ ಎಣ್ಣೆ, ಬೇಳೆ ಕೊಡುತ್ತಿದ್ದಾರೆ. ಫಲಾನುಭವಿಗಳು ಮುಂದೆ ಇದನ್ನೂ ಮಾರಾಟ ಮಾಡಿಕೊಳ್ಳುತ್ತಾರೆ.

ನಾನು ಮತ್ತು ಮುಖ್ಯಮಂತ್ರಿ ಬಹಳ ಆತ್ಮೀಯ. ಆದರೆ, ಅವರು ಏನೇನು ಮಾಡುತ್ತಾರೋ ನನಗೆ ಗೊತ್ತಿಲ್ಲ ಎಂದಿದ್ದಾರೆ.

> ದಾಂಡೇಲಿಯಲ್ಲಿ ನಡೆದ ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಕುರಿತು ಹೇಳುವಾಗ, ನಾನು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಶ್ಲಾಘಿಸಿದ್ದೆ ಹೊರತು ಟೀಕಿಸಿರಲಿಲ್ಲ. 'ಗ್ಯಾರಂಟಿಗಳಿಂದ ಅಭಿವೃದ್ಧಿಗೆ ಹಿನ್ನಡೆ–ದೇಶಪಾಂಡೆ' ಶೀರ್ಷಿಕೆ ನೋಡಿ ನನಗೆ ಬೇಸರವಾಯಿತು. ಇದನ್ನು ನನ್ನ ಮಾತುಗಳನ್ನು ತಪ್ಪಾಗಿ ಅರ್ಥೈಸಿ, ವಾಸ್ತವದ ವಿರುದ್ಧವಾಗಿ ಪ್ರಕಟಿಸಲಾಗಿದೆ.
>
> ನಾನು ಈ ಸಭೆಯಲ್ಲಿ ಗ್ಯಾರಂಟಿಗಳಿಂದ ಅಭಿವೃದ್ಧಿಗೆ ಹಿನ್ನಡೆಯಾಗಿದೆ ಎನ್ನುವ ಮಾತನ್ನು ಎಲ್ಲಿಯೂ ಉಲ್ಲೇಖಿಸಿರುವುದಿಲ್ಲ. ಎಲ್ಲಿಯೂ ಕೂಡಾ ಗ್ಯಾರಂಟಿಯಿಂದ ಸರ್ಕಾರಕ್ಕೆ ಆರ್ಥಿಕ ಸಂಕಷ್ಟ ಆಗಿದೆ ಎಂದು ಹೇಳಿಲ್ಲ.
>
> - ಆರ್.ವಿ. ದೇಶಪಾಂಡೆ ಸ್ಪಷ್ಟನೆ

2ನೇ ಟೆಸ್ಟ್: ಸರಣಿ ಕ್ಲೀನ್ ಸ್ವೀಪ್‌ನತ್ತ ಭಾರತ

ದೆಹಲಿ, ಅ.13– ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 2ನೇ ಟೆಸ್ಟ್ ಪಂದ್ಯ ಗೆಲ್ಲಲ್ಲು 58 ರನ್ ಬೇಕಿದ್ದು, ಭಾರತ ಗೆಲುವಿನ ಹೊಸ್ತಿನಲ್ಲಿದೆ ಆ ಮೂಲಕ 2 ಪಂದ್ಯಗಳ ಟೆಸ್ಟ್ ಸರಣಿಯನ್ನು ಕ್ಲೀನ್‌ಸ್ವೀಪ್ ಮಾಡಲು ಮುಂದಾಗಿದೆ.


2 ವಿಕೆಟ್‌ಗೆ 173 ರನ್‌ಗಳಿಂದ 4ನೇ ದಿನದಾಟ ಆರಂಭಿಸಿದ ವೆಸ್ಟ್ ಇಂಡೀಸ್ 390 ರನ್‌ಗಳಿಗೆ ಆಲೌಟಾಯಿತು. ಆ ಮೂಲಕ ಭಾರತಕ್ಕೆ 121 ರನ್‌ಗಳ ಗೆಲುವಿನ ಗುರಿ ನೀಡಿತು. ವೆಸ್ಟ್ ಇಂಡೀಸ್ ಪರ ದ್ವಿತೀಯ ಇನ್ನಿಂಗ್ಸ್‌ನಲ್ಲಿ ಜಾನ್ ಕ್ಯಾಂಬೆಲ್ 115, ಶೈ ಹೋಪ್ 103, ಜಸ್ಟಿನ್ ಗ್ರೀವ್ಸ್ 50, ಸೀಲ್ಸ್ 32, ರೋಸ್ಟನ್ ಚೇಸ್ 40 ರನ್ ಗಳಿಸಿದರು. ಭಾರತದ ಪರ ಬೌಲಿಂಗ್ ನಲ್ಲಿ ಕುಲದೀಪ್ ಯಾದವ್, ಬೂಮ್ರಾ ತಲಾ 3, ಮೊಹಮ್ಮದ್ ಸಿರಾಜ್ 2, ರವೀಂದ್ರ ಜಡೇಜಾ, ವಾಷಿಂಗ್ ಟನ್ ಸುಂದರ್ ತಲಾ ಒಂದೊಂದು ವಿಕೆಟ್ ಪಡೆದರು.

ಬಳಿಕ ಗೆಲುವಿನ ಗುರಿ ಬೆನ್ನತ್ತಿರುವ ಭಾರತ 4ನೇ ದಿನದಂತ್ಯಕ್ಕೆ 1 ವಿಕೆಟ್ ನಷ್ಟಕ್ಕೆ 63 ರನ್ ಗಳಿಸಿದೆ. ಯಶಸ್ವಿ ಜೈಸ್ವಾಲ್ 8 ರನ್ ಗಳಿಸಿ ವಿಕೆಟ್ ಒಪ್ಪಿಸಿದರೇ, ಕೆ.ಎಲ್.ರಾಹುಲ್ 25, ಸಾಯಿ ಸುದರ್ಶನ್ 30 ರನ್ ಗಳಿಸಿ ಐದನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಮಾರಿಷಸ್‌ನಲ್ಲಿ ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ಕೋರ್ಸ್ ಪ್ರಾರಂಭ

● ಸುತ್ತೂರು ಶ್ರೀಗಳಿಂದ ಮಾಹಿತಿ ● ಮಾರಿಷಸ್ ಸರ್ಕಾರದಿಂದ ಅನುಮೋದನೆ ● ಭಾರತಕ್ಕಿಂತ ಕಡಿಮೆ ಶುಲ್ಕ ಸೌಲಭ್ಯ





ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠದ ಆವರಣದಲ್ಲಿ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಮತ್ತೊಂದು ಚಿತ್ರದಲ್ಲಿ ಮಾರಿಷಸ್‌ನಲ್ಲಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯನ್ನು ಕಾಣಬಹುದು

ಮೈಸೂರು, ಅ.13(ಎಂಟಿವೈ)– ಮಾರಿಷಸ್‌ನಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ವೈದ್ಯಕೀಯ ಶಿಕ್ಷಣ ಕೋರ್ಸ್ ಆರಂಭಿಸಿದೆ ಎಂದು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಜಿ ತಿಳಿಸಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಮಾರಿಷಸ್‌ನಲ್ಲಿ ವೈದ್ಯಕೀಯ ಶಿಕ್ಷಣ ಕೋರ್ಸ್ ಆರಂಭಿಸುವ ಮೂಲಕ ಅಂತರರಾಷ್ಟ್ರೀಯ ವೈದ್ಯಕೀಯ ಶಿಕ್ಷಣದಲ್ಲಿ ಮೈಲಿಗಲ್ಲು ಸ್ಥಾಪಿಸಿದೆ. ಮಾರಿಷಸ್ ಸರ್ಕಾರ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಎಂಬಿಬಿಎಸ್ ಕೋರ್ಸ್ ಆರಂಭಿಸುವುದಕ್ಕೆ ಅನುಮೋದನೆ ನೀಡಿದ್ದು, ಜೆಎಸ್‌ಎಸ್ ಸ್ಕೂಲ್ ಆಫ್ ಮೆಡಿಸಿನ್ ಸಂಸ್ಥೆಯಲ್ಲಿ ನವೆಂಬರ್ ತಿಂಗಳಿಂದ ಪ್ರಥಮ ವರ್ಷದ ವೈದ್ಯಕೀಯ ಕೋರ್ಸ್ ಆರಂಭಿಸಲಾಗುತ್ತಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠವು ಭಾರತ ಮಾತ್ರವಲ್ಲದೆ, ದುಬೈ, ಮಾರಿಷಸ್, ಅಮೇರಿಕಾದಲ್ಲೂ ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸುತ್ತಿದೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಸಲಹೆ ಮೇರೆಗೆ 2006ರಲ್ಲಿ ಮಾರಿಷಸ್‌ನಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯನ್ನು ಚಿಕ್ಕ ಕಟ್ಟಡದಲ್ಲಿ ಸ್ಥಾಪಿಸಿ, ಸ್ಕಿಲ್ ಡೆವಲಪ್‌ಮೆಂಟ್ ಕೋರ್ಸ್ ಆರಂಭಿಸಲಾಗಿತ್ತು. ಬಳಿಕ ನಿವೇಶನವೊಂದನ್ನು ಖರೀದಿಸಿ ಕಟ್ಟಡವೊಂದನ್ನು ನಿರ್ಮಿಸಿ, ಆ ದೇಶದಲ್ಲಿ ಇಂಜಿನಿಯರಿಂಗ್ ಕಾಲೇಜು ಆರಂಭಿಸಲಾಯಿತು.

ಮಾರಿಷಸ್‌ನಲ್ಲಿ ಇಂಜಿನಿಯರಿಂಗ್ ಶಿಕ್ಷಣ ನೀಡಿದ ಮೊದಲ ಖಾಸಗಿ ಸಂಸ್ಥೆ ಎಂಬ ಹೆಗ್ಗಳಿಕೆಗೆ ಜೆಎಸ್‌ಎಸ್ ಸಂಸ್ಥೆ ಪಾತ್ರವಾಗಿದೆ. ಬಳಿಕ ಭಾರತ ಸರ್ಕಾರ ಹೊರ ದೇಶದಲ್ಲಿ ದೇಶದ ಶಿಕ್ಷಣ ಸಂಸ್ಥೆಗಳು ಇಂಜಿನಿಯರಿಂಗ್ ಶಿಕ್ಷಣ ನೀಡುವ ಸಂಬಂಧ ನಿರ್ಬಂಧ ನಿಯಮ ಜಾರಿಗೊಳಿಸಿದಾಗ ಮಾರಿಷಸ್‌ನಲ್ಲಿ ಇಂಜಿಯರಿಂಗ್ ಕಾಲೇಜು ಸ್ಥಗಿತಗೊಳಿಸಿ, ಇತರೆ ಕೋರ್ಸ್ ನಡೆಸಲಾಗುತ್ತಿತ್ತು ಎಂದರು.

ಹೊರ ದೇಶದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಕೊರೊನಾ ಹಾಗೂ ಉಕ್ರೇನ್ ಯುದ್ಧದ ಸಂದರ್ಭದಲ್ಲಿ ವಿದೇಶದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದು ಎಲ್ಲರ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಮಾರಿಷಸ್ ಸರ್ಕಾರ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ವರ್ಷದಿಂದಲೇ ವೈದ್ಯಕೀಯ ಕೋರ್ಸ್ ಆರಂಭಿಸಲಾಗುತ್ತಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪ್ರೊಛಾನ್ಸಲರ್ ಪ್ರೊ.ಬಿ.ಸುರೇಶ್ ಮಾತನಾಡಿ, ಮಾರಿಷಸ್‌ನ ವಕೋಯಾಸ್ ಉಪನಗರದಲ್ಲಿ ಎಂಟು ಎಕರೆ ಪ್ರದೇಶದಲ್ಲಿ 14,689 ಚ.ಮೀ ವಿಸ್ತೀರ್ಣದ ಕಟ್ಟಡದಲ್ಲಿ ವೈದ್ಯಕೀಯ ಶಿಕ್ಷಣ ಸಂಸ್ಥೆಯನ್ನು ಆರಂಭಿಸಲಾಗುತ್ತಿದೆ. ಈ ಕಟ್ಟಡದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಬೇಕಾದ ಸೌಲಭ್ಯವನ್ನು ಕಲ್ಪಿಸಲಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಪೂರಕವಾಗಿ ಮಾರಿಷಸ್ ಸರ್ಕಾರ 100 ಹಾಸಿಗೆ ಆಸ್ಪತ್ರೆಯನ್ನು ಬಳಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಎರಡು ದಿನದ ಹಿಂದಷ್ಟೇ ಮಾರಿಷಸ್ ಸರ್ಕಾರ ವೈದ್ಯಕೀಯ ಕೋರ್ಸ್ ಆರಂಭಿಸಲು ಅನುಮೋದನೆ ನೀಡಿರುವುದರಿಂದ ಈಗಾಗಲೇ ಬಿರುಸಿನ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ, ನಿವೃತ್ತರಾದವರು ಸೇರಿದಂತೆ ಬೋಧಕ ಸಿಬ್ಬಂದಿಗಳು ಮಾರಿಷಸ್‌ನಲ್ಲಿ ವೈದ್ಯಕೀಯ ಶಿಕ್ಷಣ ನೀಡುವುದಕ್ಕೆ ಮುಂದೆ ಬಂದಿದ್ದಾರೆ. ಈ ವರ್ಷ 100 ಮಂದಿಗೆ ವೈದ್ಯಕೀಯ ಶಿಕ್ಷಣ ನೀಡಲು ದಾಖಲಾತಿ ಮಾಡಿಕೊಳ್ಳಲಾಗುತ್ತದೆ. ನವೆಂಬರ್‌ನಿಂದ ತರಗತಿಗಳು ಆರಂಭವಾಗಲಿದ್ದು, ವಿದ್ಯಾರ್ಥಿಗಳ ದಾಖಲಾತಿ ಆರಂಭವಾಗಿದೆ. ಗುಣಮಟ್ಟದ ಶಿಕ್ಷಣ ನೀಡಲು ನಮ್ಮ ಸಂಸ್ಥೆ ಬದ್ಧವಾಗಿದೆ. ಮಾರಿಷಸ್‌ನಲ್ಲಿನ ಜೆಎಸ್‌ಎಸ್ ಸಂಸ್ಥೆಯಲ್ಲಿ ವೈದ್ಯಕೀಯ ಶಿಕ್ಷಣ ಪಡೆಯಲು ಉದ್ದೇಶಿಸುವ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡುವುದಕ್ಕೂ ಕ್ರಮ ಕೈಗೊಳ್ಳಲಾಗಿದೆ. ವೀಸಾ, ವಿಮಾನಯಾನ ಸೇರಿದಂತೆ ಇನ್ನಿತರ ವಿಷಯಗಳಲ್ಲೂ ಪೋಷಕರಿಗೆ ನೆರವು ನೀಡಲಾಗುತ್ತದೆ. ವೈದ್ಯಕೀಯ ಶುಲ್ಕ ಭಾರತದಲ್ಲಿ ನಿಗದಿ ಮಾಡಿರುವ ಶುಲ್ಕಕ್ಕಿಂತ ಕಡಿಮೆ ಇದೆ. ಭಾರತದಲ್ಲಿ ವಾರ್ಷಿಕ 18ರಿಂದ 25 ಲಕ್ಷ ರೂ. ವೆಚ್ಚವಾಗಲಿದೆ ಆದರೆ, ಮಾರಿಷಸ್‌ನಲ್ಲಿ ಹಾಸ್ಟೆಲ್ ಸೌಲಭ್ಯವೂ ಒಳಗೊಂಡಂತೆ 12ರಿಂದ 13 ಲಕ್ಷ ರೂ. ವೆಚ್ಚವಾಗಲಿದೆ ಎಂದು ತಿಳಿಸಿದರು.

ನೀಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಆದರೆ, ಮೆರಿಟ್ ಅಗತ್ಯವಿಲ್ಲ. ವಿದ್ಯಾರ್ಥಿಗಳ ಭದ್ರತೆ ಮತ್ತು ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಶೈಕ್ಷಣಿಕ ವೆಚ್ಚ ಭರಿಸಲು ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ಪಡೆಯಬಹುದಾಗಿದೆ. ಭಾರತೀಯ ಪಠ್ಯಕ್ರಮಕ್ಕೆ ಹೊಂದುವಂತಹ ಪಠ್ಯಕ್ರಮದಲ್ಲಿ ಶಿಕ್ಷಣ ನೀಡಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಪ್ರೊ. ಎಸ್.ಪಿ. ಮಂಜುನಾಥ್, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಡಾ.ಬಸವನಗೌಡಪ್ಪ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹಾರ್ಸ್ ಶೋ ಪ್ರಶಸ್ತಿಯ ಲಕ್ಷ ರೂ. ನಗದು ಮೈಸೂರಲ್ಲಿ ಅತ್ಯಾಚಾರ–ಹತ್ಯೆಗೀಡಾದ ಬಾಲಕಿ ಕುಟುಂಬಕ್ಕೆ ನೆರವು

ಮಾಜಿ ಸಚಿವ ಸಾ.ರಾ.ಮಹೇಶ್‌ರಿಂದ ಹಸ್ತಾಂತರ



ಮೈಸೂರಿನಲ್ಲಿ ಹತ್ಯೆಗೀಡಾದ ಗುಲ್ಬರ್ಗಾ ಮೂಲದ ಬಾಲಕಿಯ ಕಡೆಯವರಿಗೆ ಮಾಜಿ ಸಚಿವ ಸಾ.ರಾ.ಮಹೇಶ್ ಪುತ್ರ ಸಾ.ರಾ.ಜಯಂತ್ ಲಕ್ಷ ರೂ. ಚೆಕ್ ಅನ್ನು ಹಸ್ತಾಂತರಿಸಿದರು.

ಮೈಸೂರು, ಅ.13(ಬಿಎಲ್‌ಯು)– ಬೆಂಗಳೂರಿನ ಯಲಹಂಕದಲ್ಲಿ ನಡೆದ ಏಷ್ಯಾದ ಅತಿ ದೊಡ್ಡ ದಿ ರಾಯಲ್ಟಿ ಹಾರ್ಸ್ ಶೋನಲ್ಲಿ ತಾವು ಸಾಕಿದ ಕುದುರೆ ರೋಲೆಕ್ಸ್‌ಗೆ ಬಂದ ಒಂದು ಲಕ್ಷ ರೂಪಾಯಿ ನಗದು ಬಹುಮಾನವನ್ನು ಮೈಸೂರಿನಲ್ಲಿ ಹತ್ಯೆಯಾದ ಬಾಲಕಿ ಕುಟುಂಬಸ್ಥರಿಗೆ ನೀಡುತ್ತಿದ್ದೇವೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದರು.

ನಗರದ ದಟ್ಟಗಳ್ಳಿಯ ತಮ್ಮ ಫಾರಂ ಹೌಸ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಲಕಿಯನ್ನು ಕಳೆದುಕೊಂಡು ದುಃಖಿತರಾಗಿರುವ ಕುಟುಂಬಕ್ಕೆ ನಮ್ಮಿಂದ ಸಣ್ಣ ಸಹಾಯ ನೀಡುತ್ತಿದ್ದೇವೆ ಎಂದು ಹೇಳಿದರು.

ನಮ್ಮ ಫಾರಂ ಹೌಸ್‌ನಲ್ಲಿ ನಾಲ್ಕು ಕುದುರೆಗಳನ್ನು ಸಾಕುತ್ತಿದ್ದೇವೆ. ನಾವು ಪ್ರೀತಿಯಿಂದ ಸಾಕುತ್ತಿರುವ ಕುದುರೆಗಳನ್ನು ರೇಸ್‌ಗೆ ಬಳಸುವುದಿಲ್ಲ. ಕುದುರೆಗಳು ಮಾತ್ರವಲ್ಲದೆ ಹಲವು ವಿಶಿಷ್ಟ ಪ್ರಾಣಿ, ಪಕ್ಷಿಗಳನ್ನು ಕೂಡ ಸಾಕುತ್ತಿದ್ದೇವೆ ಎಂದು ತಿಳಿಸಿದರು.

ಈ ವೇಳೆ ಮಾತನಾಡಿದ ಸಾ.ರಾ.ಮಹೇಶ್ ಅವರ ಪುತ್ರ ಸಾ.ರಾ.ಜಯಂತ್, ದಿ ರಾಯಲ್ಟಿ ಹಾರ್ಸ್ ಶೋ ನಲ್ಲಿ ಸುಮಾರು 80 ಕುದುರೆಗಳು ಭಾಗವಹಿಸಿದ್ದವು. ಹಲವು ಮಾನದಂಡಗಳನ್ನು ಆಧರಿಸಿ ತೀರ್ಪುಗಾರರು ನಾವು ಸಾಕಿರುವ ರೋಲೆಕ್ಸ್ ಕುದುರೆಗೆ ಪ್ರಥಮ ಬಹುಮಾನ ನೀಡಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ಮಾತನಾಡಿದ ನಿಂಗರಾಜು ಮಲ್ಲಾಡಿ ಅವರು, ಹತ್ಯೆಯಾಗಿರುವ ಬಾಲಕಿ ಕುಟುಂಬಕ್ಕೆ ಸರ್ಕಾರ 10 ಲಕ್ಷ ರೂಪಾಯಿ ಪರಿಹಾರ ನೀಡಬೇಕು. ಮುಂದಿನ ದಸರಾ ಸಮಯದಲ್ಲಿ ಮೈಸೂರಿಗೆ ಆಗಮಿಸುವ ಅಲೆಮಾರಿ ಸಮುದಾಯದವರಿಗೆ ವಾಸ್ತವ್ಯ ಹೂಡಲು ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದರು.

ಅರ್ಜಿ ಆಹ್ವಾನ

ಮೈಸೂರು, ಅ.13– ಮೈಸೂರು ಜಿಲ್ಲೆಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾಸಂಸ್ಥೆಯಾದ ಸರ್ಕಾರಿ ಮಹರ್ಷಿ ವಾಲ್ಮೀಕಿ ಬುಡಕಟ್ಟು ಆದಿವಾಸಿ ವಸತಿಶಾಲೆ, ನಲ್ಲೂರುಪಾಲ, ಹುಣಸೂರು ತಾಲ್ಲೂಕು, ಈ ಶಾಲೆಯನ್ನು ಪ್ರಸ್ತುತ ಸಾಲಿನಿಂದ 1ರಿಂದ 12ನೇ ತರಗತಿಯವರೆಗೆ ಮೇಲ್ದರ್ಜೆಗೇರಿಸಲಾಗಿರುತ್ತದೆ.

ಈ ಶಾಲೆಗೆ ಹೊರಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ವಿಷಯವಾರು ವಿದ್ಯಾರ್ಹತೆವುಳ್ಳ ಇಂಗ್ಲೀಷ್ ಮತ್ತು ಸ್ಟಾಫ್ ನರ್ಸ್ ಸಿಬ್ಬಂದಿಗಳ ಅವಶ್ಯಕತೆಯಿದ್ದು, ಅರ್ಹ ಅಭ್ಯರ್ಥಿಗಳು ಸ್ವವಿಳಾಸದ ಅರ್ಜಿಗಳೊಂದಿಗೆ ಅಕ್ಟೋಬರ್ 25ರ ಒಳಗಾಗಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಎಂ.ಡಿ.ಸಿ.ಸಿ ಬ್ಯಾಂಕ್ ಸರ್ಕಲ್ ಹತ್ತಿರ, ರತ್ನಪುರಿ ರಸ್ತೆ ಹುಣಸೂರು ತಾಲೂಕು ಇಲ್ಲಿಗೆ ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಬಹುದು.

ಹಾಸ್ಯ ನಟ, ರಂಗಭೂಮಿ ಕಲಾವಿದ ರಾಜು ತಾಳಿಕೋಟೆ ಇನ್ನಿಲ್ಲ



ಧಾರವಾಡ, ಅ.13– ಧಾರವಾಡ ರಂಗಾಯಣ ನಿರ್ದೇಶಕರಾಗಿದ್ದ ಹಾಸ್ಯ ನಟ, ರಂಗಭೂಮಿ ಕಲಾವಿದ, ರಂಗಕರ್ಮಿ ರಾಜು ತಾಳಿಕೋಟೆ (62) ಅವರು ಸೋಮವಾರ ಮಣಿಪಾಲ್‌ದ ಕೆಎಂಸಿ ಆಸ್ಪತ್ರೆಯಲ್ಲಿ ನಿಧನರಾದರು.

ಚಲನಚಿತ್ರದ ಚಿತ್ರೀಕರಣಕ್ಕಾಗಿ ಮಂಗಳೂರಿನಲ್ಲಿದ್ದ ರಾಜು ತಾಳಿಕೋಟಿ ಅವರಿಗೆ ನಿನ್ನೆ ರಾತ್ರಿ ತೀವ್ರ ಹೃದಯಾಘಾತ ಆಗಿತ್ತು. ತಕ್ಷಣ ಅವರನ್ನು ಮಂಗಳೂರು ನಗರದ ಮಣಿಪಾಲ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗಿತ್ತು. ಚಿಕಿತ್ಸೆ ಫಲಿಸದೆ ಇಂದು ಸಂಜೆ ಆಸ್ಪತ್ರೆಯಲ್ಲಿ ನಿಧನರಾದರು.

ನಾಳೆ ಅವರ ಸ್ವಗ್ರಾಮ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಚಿಕ್ಕಸಿಂದಗಿಯಲ್ಲಿ ಅಂತ್ಯಕ್ರಿಯೆ ಜರುಗಲಿದೆ ಎಂದು ಅವರ ಪುತ್ರ ಭರತ ತಾಳಿಕೋಟೆ ಅವರು ತಿಳಿಸಿದ್ದಾರೆ. ರಾಜು ತಾಳಿಕೋಟಿ ಅವರು ಮೂಲತಃ ವಿಜಯಪುರ ಜಿಲ್ಲೆಯ ತಾಳಿಕೋಟೆಯವರಾಗಿದ್ದರು. ಇತ್ತೀಚೆಗೆ ರಂಗಾಯಣ ಧಾರವಾಡದ ನಿರ್ದೇಶಕರಾಗಿದ್ದರು. ಕಲಿಯುಗದ ಕುಡುಕ ಸೇರಿದಂತೆ ಅನೇಕ ಉತ್ತರ ಕರ್ನಾಟಕದ ಹಾಸ್ಯ ನಾಟಕಗಳಲ್ಲಿ ಅಭಿನಯಿಸಿ ಮನೆಮಾತಾಗಿದ್ದರು. ಸಿನಿಮಾಗಳಲ್ಲೂ ನಟಿಸಿ ಸೈ ಎನಿಸಿಕೊಂಡಿದ್ದರು.

ಅಪ್ರಾಪ್ತೆ ಮೇಲೆ ಅತ್ಯಾಚಾರ–ಹತ್ಯೆ ಪ್ರಕರಣದ ಹಿನ್ನೆಲೆ

ಅಲೆಮಾರಿಗಳ ಮಕ್ಕಳಿಗೆ ಸೂಕ್ತ ರಕ್ಷಣೆಗೆ ಆಗ್ರಹ



ಮೈಸೂರು ನಗರ ಮತ್ತು ಜಿಲ್ಲೆಯಲ್ಲಿರುವ ಅಲೆಮಾರಿ ಸಮುದಾಯಕ್ಕೆ ರಕ್ಷಣೆ ನೀಡುವಂತೆ ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ–ಕರ್ನಾಟಕ ಸಂಸ್ಥೆ ಪದಾಧಿಕಾರಿಗಳು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಅವರಿಗೆ ಮನವಿ ಸಲ್ಲಿಸಿದರು.

ಮೈಸೂರು,ಅ.13(ಎಂಟಿವೈ)– ಬಲೂನು ಮಾರಾಟಗಾರರ ಅಪ್ರಾಪ್ತ ಬಾಲಕಿ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಮತ್ತು ಕೊಲೆ ಪ್ರಕರಣದಿಂದಾಗಿ ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ನೆಲೆಸಿರುವ ಅಲೆಮಾರಿ ಕುಟುಂಬ ಮತ್ತು ಅವರ ಮಕ್ಕಳಿಗೆ ಸೂಕ್ತ ರಕ್ಷಣೆ ಒದಗಿಸುವಂತೆ ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ–ಕರ್ನಾಟಕ ಸಂಸ್ಥೆ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಹೊಸ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದ ನಿಯೋಗ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಅವರಿಗೆ ಮನವಿ ಸಲ್ಲಿಸಿ, ಜಿಲ್ಲಾಡಳಿತ ಅಲೆಮಾರಿ ಸಮುದಾಯ ಬಾಲಕಿಯ ಹತ್ಯೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ದೌರ್ಜನ್ಯಕ್ಕೆ ಒಳಗಾದ ಬಾಲಕಿಯ ಕುಟುಂಬಕ್ಕೆ ನ್ಯಾಯ ಒದಗಿಸಬೇಕು. ಆರೋಪಿಗೆ ಕಠಿಣ ಶಿಕ್ಷೆ ನೀಡಬೇಕು. ಮುಂದಿನ ದಿನಗಳಲ್ಲಿ ಯಾವುದೇ ಮಕ್ಕಳ ಮೇಲೆ ಇಂತಹ ಅಮಾನುಷ ಕೃತ್ಯ ನಡೆಯದಂತೆ ಸೂಕ್ತ ಕ್ರಮಕೈಗೊಳ್ಳಬೇಕು. ದೇಶದ ಮತ್ತು ರಾಜ್ಯದ ವಿವಿಧ ಭಾಗಗಳಿಂದ ದಸರಾ ಸಮಯದಲ್ಲಿ ಉದ್ಯೋಗ ಮತ್ತು ವ್ಯಾಪಾರಕ್ಕಾಗಿ ನೂರಾರು ಅಲೆಮಾರಿ ಕುಟುಂಬಗಳು ತಮ್ಮ ಮಕ್ಕಳುಗಳೊಂದಿಗೆ ಆಗಮಿಸಿದ್ದು, ಆ ಕುಟುಂಬಗಳಿಗೆ ಮತ್ತು ಮಕ್ಕಳಿಗೆ ಸೂಕ್ತ ರಕ್ಷಣೆ ಮತ್ತು ಪುನರ್ವಸತಿ ವ್ಯವಸ್ಥೆಯನ್ನು ಜಿಲ್ಲಾಡಳಿತ ಮಾಡುವಂತೆ ಒತ್ತಾಯಿಸಿದರು.

ಮಕ್ಕಳ ಕಲ್ಯಾಣ ಸಮಿತಿ ನಿಕಟಪೂರ್ವ ಅಧ್ಯಕ್ಷ ಈ.ಧನಂಜಯ ಎಲಿಯೂರು, ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ–ಕರ್ನಾಟಕ ರಾಜ್ಯ ಸಂಚಾಲಕರಾದ ಸರಸ್ವತಿ, ಕೊಳಚೆ ನಿವಾಸಿಗಳ ಒಕ್ಕೂಟದ ಯತಿರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

‘ವೋಟ್ ಚೋರಿ’ ಆರೋಪಗಳ ಬಗ್ಗೆ ಎಸ್‌ಐಟಿ ತನಿಖೆ ಕೋರಿದ್ದ ಪಿಐಎಲ್ ಸುಪ್ರೀಂಕೋರ್ಟ್‌ನಲ್ಲಿ ವಜಾ

ನವದೆಹಲಿ, ಅ.13– ದೊಡ್ಡ ಪ್ರಮಾಣದಲ್ಲಿ ಮತದಾರರ ಪಟ್ಟಿ ತಿರುಚಲಾಗಿದೆ ಎಂಬ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಆರೋಪಗಳನ್ನು ತನಿಖೆ ಮಾಡಲು ಮಾಜಿ ನ್ಯಾಯಾಧೀಶರ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಕೋರಿ ವಕೀಲ ರೋಹಿತ್ ಪಾಂಡೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಪುರಸ್ಕರಿಸಲು ಮತ್ತು ಆದೇಶ ನೀಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಸಾರ್ವಜನಿಕ ಹಿತಾಸಕ್ತಿಗಾಗಿ ಸಲ್ಲಿಸಲಾಗಿದೆ ಎಂದು ಹೇಳಲಾದ ಅರ್ಜಿಯನ್ನು ಪುರಸ್ಕರಿಸಲು ನಾವು ಒಲವು ತೋರುವುದಿಲ್ಲ ಎಂದು ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ನೇತೃತ್ವದ ಸುಪ್ರೀಂ ಕೋರ್ಟ್‌ನ ಇಬ್ಬರು ನ್ಯಾಯಮೂರ್ತಿಗಳ ಪೀಠ ಹೇಳಿದೆ. ಆದಾಗ್ಯೂ, ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ, ಅರ್ಜಿದಾರರು (ರೋಹಿತ್ ಪಾಂಡೆ) ಈ ವಿಷಯವನ್ನು ಭಾರತೀಯ ಚುನಾವಣಾ ಆಯೋಗದ (ಇಸಿಐ) ಮುಂದೆ ಮುಂದುವರಿಸಬಹುದು ಎಂದು ಹೇಳಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೇ ಕಾಲ್ ಹಿಮ್ ಓಜಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಇಡ್ಲಿ ಕಡಾಯಿ (ತ)	4 ಪ್ರದರ್ಶನಗಳು
ಸಂಗಂ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಲಿಡೋ	
ಇಡ್ಲಿ ಕೊಟ್ಟು (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಏಳುಮಲೆ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಬೆ.9.45ಕ್ಕೆ, ಮ.1.10ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸುನ್ನಿ ಸಂಸ್ಕಾರಿ ಕಿ ತುಳಸಿ ಕುಮಾರಿ (ಹಿಂ): ಸಂ.4.30ಕ್ಕೆ.
ಸ್ಕ್ರೀನ್ 2	ತ್ರೋನ್ ಎರ್ಸ್ (ಇಂ): ಮ.1.35ಕ್ಕೆ, ರಾ.7.30ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ.4.05ಕ್ಕೆ, ರಾವಣ ಪ್ರಭು (ಮ): ರಾ.10.05ಕ್ಕೆ.
ಸ್ಕ್ರೀನ್ 3	ಕಾಂತಾರ ಚಾಪ್ಟರ್ 1(ಕ): ಬೆ.10.05ಕ್ಕೆ, ಮ.1.25ಕ್ಕೆ, ಸಂ.4.45ಕ್ಕೆ, ರಾ.8.15ಕ್ಕೆ.
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪುನಶ್ಚೇತನ ಕಾರ್ಯಕ್ರಮ



ಮೈಸೂರು ವಿವಿ ಮಾನಸ ಗಂಗೋತ್ರಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಪುನಶ್ಚೇತನ ಕಾರ್ಯಕ್ರಮಕ್ಕೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸೋಮವಾರ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ವಿಭಾಗದ ಮುಖ್ಯಸ್ಥರಾದ ಪ್ರೊ.ಎನ್.ಮಮತಾ, ಪ್ರಾಧ್ಯಾಪಕರಾದ ಡಾ.ಸಿ.ಕೆ. ಪುಟ್ಟಸ್ವಾಮಿ, ಡಾ.ಎಂ.ಎಸ್. ಸಪ್ನಾ, ಅತಿಥಿ ಉಪನ್ಯಾಸಕರಾದ ಡಾ.ಕೆ.ಎಸ್. ಕುಮಾರಸ್ವಾಮಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳು, ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಟ್ರ್ಯಾಕ್ಟರ್ ಡಿಕ್ಕಿ: ಬೈಕ್ ಸವಾರ ಸಾವು



ಮೈಸೂರು, ಅ.13– ನೀರಿನ ಟ್ಯಾಂಕರ್ ಎಳೆದೊಯ್ಯುತ್ತಿದ್ದ ಟ್ರ್ಯಾಕ್ಟರ್, ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಯುವಕ ಸ್ಥಳದಲ್ಲೇ ಮೃತಪಟ್ಟ ಘಟನೆ ಮೈಸೂರು–ನಂಜನಗೂಡು ರಸ್ತೆ ಜೆಎಸ್‌ಎಸ್ ಕಾಲೇಜು ಜಂಕ್ಷನ್ ಬಳಿ ಸೋಮವಾರ ಬೆಳಗ್ಗೆ ಸಂಭವಿಸಿದೆ.

ತಿ.ನರಸೀಪುರ ತಾಲೂಕು ಗರ್ಗೇಶ್ವರಿ ಗ್ರಾಮದ ಪುಟ್ಟಸ್ವಾಮಿ ಅವರ ಪುತ್ರ ನಿತಿನ್(21) ಅಪಘಾತದಲ್ಲಿ ಮೃತಪಟ್ಟ ಯುವಕ. ಈತ ಇಂದು ಬೆಳಗ್ಗೆ 9.15ರ ಸುಮಾರಿಗೆ ಮೈಸೂರು–ನಂಜನಗೂಡು ರಸ್ತೆಯ ಜೆಎಸ್‌ಎಸ್ ಕಾಲೇಜು ಜಂಕ್ಷನ್‌ನಲ್ಲಿ ಗ್ರೀನ್ ಸಿಗ್ನಲ್‌ಗಾಗಿ ಕಾಯುತ್ತಿದ್ದಾಗ ಈ ಘಟನೆ ಸಂಭವಿಸಿದೆ.

ಎಲೆತೋಟದ ಕಡೆಯಿಂದ ನೀರಿನ ಟ್ಯಾಂಕ್ ಎಳೆದು ತರುತ್ತಿದ್ದ ಟ್ರ್ಯಾಕ್ಟರ್ ಎಡಕ್ಕೆ ತಿರುವು ಪಡೆಯುವಾಗ ನಿತಿನ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಬೈಕ್‌ನೊಂದಿಗೆ ನೆಲಕ್ಕುರುಳಿದ ನಿತಿನ್ ಮೇಲೆ ಟ್ರ್ಯಾಕ್ಟರ್ ಹರಿದು, ಆತ ತೀವ್ರ ಗಾಯದಿಂದ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಈ ಸಿಗ್ನಲ್ ಬಳಿ ಫ್ರೀ ಲೆಫ್ಟ್‌ಗೆ ಅವಕಾಶವಿದೆ. ಆದರೆ ಟ್ರ್ಯಾಕ್ಟರ್ ಚಾಲಕ ವೇಗವಾಗಿ ಬಂದು ವೈಡ್(ವಿಶಾಲ) ಆಗಿ ತಿರುವು ಪಡೆದಿದ್ದರಿಂದ ನಿಯಂತ್ರಿಸಲಾಗದೆ ಬೈಕ್‌ಗೆ ಡಿಕ್ಕಿ ಹೊಡೆದಿದ್ದಾನೆ. ಆ ನಂತರವೂ ನಿಯಂತ್ರಿಸಲಾಗದೆ ಬೈಕ್ ಹಾಗೂ ಯುವಕನ ಮೇಲೆಯೇ ಟ್ರ್ಯಾಕ್ಟರ್ ಹರಿದಿದೆ. ಪರಿಣಾಮ ಹೆಲ್ಮೆಟ್ ಧರಿಸಿದ್ದರೂ ನಿತಿನ್ ತಲೆಗೆ ತೀವ್ರ ಪೆಟ್ಟು ಬಿದ್ದು, ತೀವ್ರ ರಕ್ತಸ್ರಾವದಿಂದ ಸಾವನ್ನಪ್ಪಿದ್ದಾನೆ. ಟ್ರ್ಯಾಕ್ಟರ್ ರಸ್ತೆ ಬದಿ ಕಂದಕಕ್ಕೆ ನುಗ್ಗಿ, ನಿಂತಿದ್ದಾಗಿ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಈ ಸಂಬಂಧ ಕೆ.ಆರ್.ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

3ನೇ ವರ್ಷದ ಸವಿನೆನಪು



ಶ್ರೀಮತಿ ವಿ.ಕಮಲಮ್ಮ

ದುಃಖತಪ್ತರು: ಪತಿ: ನಾರಾಯಣಪ್ಪ ಹಾಗೂ ಕುಟುಂಬವರ್ಗದವರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ಬಿ.ಕೆ. ನಂಜಪ್ಪರವರ ಮಗ ಶ್ರೀ ಸತೀಶ ಬಿ.ಎನ್., ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಅನಗಹಳ್ಳಿ ಗ್ರಾಮದಲ್ಲಿ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿರುವ ಸರ್ವೆ ನಂ. 110/2, ರಲ್ಲಿ ನಿರ್ಮಿಸಲಾದ ಎಮರಾಲ್ಡ್ ಎನ್‌ಕ್ಲೇವ್ ಲೇಔಟ್‌ನ ನಿವೇಶನ ಸಂಖ್ಯೆ 110/2 ಮತ್ತು ಜಂಜರ್ ನಂ.152/1 (11 ಬಿ ಖಾತೆ ಪ್ರಕಾರ ಸ್ವತ್ತಿನ ಸಂಖ್ಯೆ: 152100700600500389), ಸ್ವತ್ತಿನ ವಿಸ್ತೀರ್ಣ 1435 ಚದರ ಮೀಟರ್‌ಗಳು ಹಾಗೂ ಈ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ ವೇಣುಗೋಪಾಲ್ ರವರ ಸ್ವತ್ತು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ವೇಣು ಗೋಪಾಲ್‌ರವರ ಸ್ವತ್ತು ಮತ್ತು ದಕ್ಷಿಣಕ್ಕೆ ಈ ಸ್ವತ್ತಿನ ಉಳಿಕೆ ಭಾಗ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

PUBLIC NOTICE

NOTICE IS HERE BY GIVEN to the public that my client is intending to purchase the schedule site morefully described in the schedule herein below from Sri. Rakesh. G, S/o Ganesh, Residing at Door No. 3, Swamy Vivekananda Road, Ramakrishna Nagar 'I' Block, Mysore, and have been negotiating the formalities of completing the sale transaction in respect of schedule property.

All or any person/s having any claim of any nature whatsoever in the Schedule Property by way of sale, exchange, lease, license, trust, lien, easement, inheritance, possession, attachment, mortgage, charge, gifts, or otherwise of any nature whatsoever including any financial institutions, are hereby required to make the same known in writing with copies of all supporting documents to the undersigned within SEVEN DAYS from the date of publication of this Notice, failing which the same shall be deemed to have been waived and my client will proceed and finalize the sale transaction with the above person. If any objections are received subsequent to the said date, the same will not be considered.

SCHEDULE

Item No. 1: All that piece and parcel of Agricultural land bearing Old Sy.No. 119 New Sy. No. 124 measuring 1 Acre 34 guntas, situated at Mysore District, Heggadevana Kote Taluk, Hampapura Hobli, Bettadabeedu Village, bounded on: East by: Land belongs to Shambhugowda ; West by: Sy. No. 118/3 ; North by: Land belongs to Ningegowda ; South by: Road.

Item No. 2: All that piece and parcel of Agricultural land bearing Old Sy.No. 118/3 measuring 0.15 guntas, situated at Mysore District, Heggadadevana Kote Taluk, Hampapura Hobli, Bettadabeedu Village, bounded on: East by: Sy. No. 124 ; West by: Sy. No. 118/2 ; North by: Sy. No. 124 ; South by: Sy. No. 124.

Sd/- M.D. Harish Kumar Hegde, B.Com, LLB
M/s. Hegde Associates, Advocates & Legal Consultants
#1064, New CH-16, "Hotel Airlines Complex, Jayalakshmi Vilas Road, Chamarajapuram, Mysore-570005.
Ph: 08214252194. E-mail: hegdeassociates@gmail.com.
Date: 13-10-2025

ಪ್ರಕಟಣೆ

ಕುಂಚಿಟಿಗರ ಸಂಘ (ರಿ), ಮೈಸೂರು

ಕುಂಚಿಟಿಗರ ಸಂಘ (ರಿ.) ಮೈಸೂರು, ದಿವಾನ್ಸ್ ರಸ್ತೆ ದೇವರಾಜ ಮೊಹಲ್ಲಾ, ಮೈಸೂರು, ಇವರು ಕುಂಚಿಟಿಗ ಜನಾಂಗದ ಸ್ಥಳೀಯ (ಮೈಸೂರು) ವಿದ್ಯಾರ್ಥಿಗಳಿಗೆ 2024–25ನೇ ಸಾಲಿನ ವಿದ್ಯಾರ್ಥಿ ವೇತನಕ್ಕೆ ಅರ್ಜಿಗಳು ಆಹ್ವಾನಿಸಲಾಗಿದೆ, 01ನೇ ತರಗತಿಯಿಂದ ಸ್ನಾತಕೋತ್ತರ ಪದವಿವರೆಗೂ ವಿದ್ಯಾರ್ಥಿವೇತನ ನೀಡಲಾಗುವುದು, ಆಸಕ್ತ ಕುಂಚಿಟಿಗ ಕುಲಬಾಂಧವ ವಿದ್ಯಾರ್ಥಿಗಳು. ಅರ್ಜಿ ಪಡೆಯುವ ದಿನಾಂಕ: 15–10–2025 ರಿಂದ 31–10–2025 ರವರೆಗೆ ಅರ್ಜಿಗಳನ್ನು, ಸಂಘದ ಕಛೇರಿಯಲ್ಲಿ ಬಂದು ಸ್ವೀಕರಿಸಬೇಕಾಗಿ ಕೇಳಿಕೊಳ್ಳುತ್ತೇವೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 5–11–2025 ನಂತರ ಬಂದ ಅರ್ಜಿಗಳನ್ನು ಪಡೆಯಲಾಗುವುದಿಲ್ಲ. ಈ ಸದುಪಯೋಗ ವನ್ನು ಜನಾಂಗದ ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳಬೇಕೆಂದು ಮನವಿ ಮಾಡುತ್ತೇವೆ.

ಸಂಪರ್ಕಿಸಿ: ಕಛೇರಿ ಸಮಯ: 11 am ರಿಂದ 5 pm.
ಕಛೇರಿ ಮೊ. ಸಂ: 9035389047, 0821-2422973
ಇ–ಮೇಲ್: kunchitigarasangha@gmail.com

ಸಹಿ/– ಗೌ॥ ಕಾರ್ಯದರ್ಶಿ, ಕುಂಚಿಟಿಗರ ಸಂಘ (ರಿ), ಮೈಸೂರು

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ –570018
ಸಹಾಯವಾಣಿ ಸಂಖ್ಯೆ: 0821–2001737
itstaff_ulb_hootagalli@yahoo.com

ಸಂ:ಹೂನಸ/ಆಶಾ/ಸಿಆರ್/01/2025–26 ದಿನಾಂಕ: 09.10.2025

ಮರು ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಹೂಟಗಳ್ಳಿ ನಗರಸಭೆಯ ಈ ಕೆಳಕಂಡ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಕೆಟಿಪಿಪಿ ನಿಯಮದಂತೆ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ನೋಂದಾಯಿತ. ಸಂಸ್ಥೆ/ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಿಂದ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು ಇಂಡೆಂಟ್ ಸಂಖ್ಯೆ. DMA/2025-26/IND5335 ಅಂದಾಜು ಮೊತ್ತ 5.0 ಲಕ್ಷ ಇ.ಎಂ.ಡಿ–12500/- ಟೆಂಡರ್ ಸಲ್ಲಿಸುವ ಕೊನೆ ದಿ:24.10.2025 ರ ಸಂಜೆ 5.30 ಗಂಟೆ, ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ : 28.10.2025 ರ ಬೆ.11.00 ಗಂಟೆ.

ಸಹಿ/–ಪೌರಾಯುಕ್ತರು ನಗರಸಭೆ, ಹೂಟಗಳ್ಳಿ
DIPR/DDMYS/1057/KSMCA/571/2025-26

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

CHANGE OF NAME

I, Vinutha G., residing at #170, 2nd Stage, Sheela Marga, Siddartha Nagar, Mysuru-570 011, have changed my name from Vinutha G. to Krupa G. on my own free will, in front of Notary A.P. Sree Urs on 13-10-2025.
Sd/- Krupa G.

ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು

ರಿ.ನಂ. A.R. 41/M.K.T–1/ನೋಂದಣಿ–31773//2003–04 ದಿನಾಂಕ: 28–08–03
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ ಆವರಣ, ಜೆ.ಎಲ್.ಬಿ ರಸ್ತೆ. ಮೈಸೂರು–570005

ಕ್ರಮ ಸಂಖ್ಯೆ ದಿನಾಂಕ: 13–10–2025

ಕಛೇರಿ ಸ್ಥಳಾಂತರ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ ಆವರಣ, ಜೆ.ಎಲ್.ಬಿ ರಸ್ತೆ, ಮೈಸೂರು–570005, ಈ ವಿಳಾಸದಲ್ಲಿದ್ದ ಕಛೇರಿಯನ್ನು ಇನ್ನು ಮುಂದೆ ದಿನಾಂಕ :13–10–2025 ರಿಂದ ನೂತನ ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ. ಮಾನ್ಯ ಸದಸ್ಯರುಗಳು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲಿ ವ್ಯವಹರಿಸಬೇಕಾಗಿ ವಿನಂತಿಸಿಕೊಳ್ಳಲಾಗಿದೆ.

ನೂತನ ವಿಳಾಸ

#203, ಡಿ ಸುಬ್ಬಯ್ಯ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು–570024
ದೂ.ಸಂಖ್ಯೆ: 0821–2424246, 0821–2424245

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ

District Health and Family Welfare Society

District Programme Management Unit,
Chamarajanagar District, Chamarajanagar.
#308, 3rd Floor, District Administrative Building, Sri. B. Rachaiah Double Road, Chamarajanagar District - 571313
Email ID:rchochamarajanagar@gmail.com ದೂರವಾಣಿ ಸಂಖ್ಯೆ : 08226-355162

15th FC/DPMU/CHN/MH/RFP/02/2025-26 Dated: 10-10-2025

Request for Proposal (RFP)-2

To Conduct FT4, TSH & Vitamin 12 services to Pregnant Women under 15th Finance commission in Chamarajanagar District for FY 2025-2026

GOVERNMENT OF KARNATAKA
15th Finance commission

Tender No: DHFWS/2025-26/SE1673/CALL-2 Date: 10.10.2025

Name of the Tender		FT4, TSH & Vitamin 12 Lab services to Pregnant Women under 15th Finance Commission in Chamarajanagar District
Date and time for commencement of downloading of bidding document		Date: 10.10.2025 Time:04:02PM
Last date and time for bid submission/ uploading of bid in E-Procurement platform		Date:23.10.2025 Time: 04.30PM
Date and time for opening of Technical Bids		Date: 24.10.2025 Time: 4.30 PM The bids will be opened online by the Authorized Officers at the appointed time
Date and time for opening of Financial Bids		Date:28.10.2025 Time: 11:00AM
Place of opening of bids and address for communication		District Health & Family Welfare Office, Chamarajanagar

Sd/- Member Secretary
District Health & Family Welfare Society,
Chamarajanagar District, Chamarajanagar

ಸಂ:ವಾಸಾಸಂಇ:ಚಾನಗರ:407:2025–26

ನೈಋತ್ಯ ರೈಲ್ವೆ

ಮೈಸೂರು ವಿಭಾಗ

ನಿವೃತ್ತ ಸಿಬ್ಬಂದಿಯ ಮರು ನೇಮಕಾತಿ

ಗುತ್ತಿಗೆ ಆಧಾರದ ಮೇಲೆ ನಿವೃತ್ತಿ ರೈಲ್ವೆ ನೌಕರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ರೈಲ್ವೆ ಮಂಡಳಿಯ ಪತ್ರ ಸಂಖ್ಯೆ E(NG) -11/ 2024/RG-4(9) ದಿನಾಂಕ 15–10–2024 ಮರು ನೇಮಕಾತಿ ಯೋಜನೆಯು 14–10–2026 ರವರೆಗೆ ಅಥವಾ ನಿಯಮಿತ ಆಯ್ಕೆಗಳ ಮೂಲಕ ಹುದ್ದೆಗಳನ್ನು ಭರ್ತಿ ಮಾಡುವವರೆಗೆ, ಯಾವುದು ಮೊದಲು ಅಲ್ಲಿವರೆಗೆ ಮಾನ್ಯವಾಗಿರುತ್ತದೆ

ಹುದ್ದೆಗಳ ವರ್ಗಗಳು

- **ಆಪರೇಟಿಂಗ್** : 03 ಎಸ್‌ಎಮ್, 04 ಎಸ್‌ಎಸ್, 14 ಟಿಎಮ್‌ಆರ್‌ಎಸ್
- **ವಾಣಿಜ್ಯ** : 05 ಟಿಕೇಟ್ ಸಿಬ್ಬಂದಿ
- **ಇಂಜನೀಯರಿಂಗ್**: 02 ಎಸ್‌ಎಸ್‌ಇ/ವರ್ಕ್ಸ್
- **ವೈದ್ಯಕೀಯ** : 02 ಫಾರ್ಮಾಸಿಸ್ಟ್‌ಗಳು
- **ಇಲೆಕ್ಟ್ರಿಕಲ್** : 28 ಸಿಆರ್‌ಸಿ/ಪಿಆರ್‌ಸಿ/ಟಿಎಲ್‌ಸಿ
- **ಪಿ & ಜಿ** : 03 ಚೀಫ್ ಓ.ಎಸ್, 04 ಸ್ಟೆನೊ

ಯಾರು ಅರ್ಜಿ ಸಲ್ಲಿಸಬಹುದು

- ನಿವೃತ್ತ ರೈಲ್ವೆ ಸಿಬ್ಬಂದಿಗಳಿಗೆ ಮಾತ್ರ
- ಕೊನೆಯ 5 ವರ್ಷಗಳಲ್ಲಿ ಎಪಿಎಆರ್‌ನ ಉತ್ತಮ ದರ್ಜೆ ಹೊಂದಿರುವುದು
- ಆರೋಗ್ಯವಂತರಾಗಿರಬೇಕು.
- ಎಲ್‌ಎಆರ್‌ಜಿಇಎಸ್‌ಎಸ್ ಅಡಿಯಲ್ಲಿ ನಿವೃತ್ತಿ ಹೊಂದಿರಬಾರದು
- ಡಿಎಆರ್ ಅಡಿಯಲ್ಲಿ ಅಮಾನತ್ತು/ತೆಗೆದು ಹಾಕಿರಬಾರದು
- ಗರಿಷ್ಠ ವಯೋಮಿತಿ 65 ವರ್ಷಗಳು

ಪರೀಶಿಲನೆ ಮತ್ತು ಆಯ್ಕೆ

ಅರ್ಜಿದಾರರನ್ನು ವಿಶೇಷ ನೇಮಕಾತಿ ಮಂಡಳಿಯ ಮೂಲಕ ಅಭ್ಯರ್ಥಿಯ ಅರ್ಹತೆ, ಸಹನಶಕ್ತಿ ಮತ್ತು ಆರೋಗ್ಯ ಸ್ಥಿತಿಯ ಪರಿಶೀಲನೆ ಮಾಡಲಾಗುವುದು

ಪ್ರಯೋಜನಗಳು

ಸ್ಥಿರ ಕರ್ತವ್ಯ, ನಿರ್ದಿಷ್ಟ ನಿಲ್ದಾಣಗಳಲ್ಲಿ ದಿನದ ಶಿಫ್ಟ್‌ಗಳ ಸಡಿಲಿಕೆ ಇರುವುದು

ಅರ್ಜಿ ಸಲ್ಲಿಸಲು ಕೆಳಗಿನ ವೆಬ್‌ಸೈಟ್‌ಗೆ ಲಾಗ್‌ಆನ್ ಮಾಡಿ

https://swr.indianrailways.gov.in →About Us >Divisions> Mysore Division> Personnel Branch> Notifications ಅರ್ಜಿಯು ಲಭ್ಯವಿದೆ

ಅರ್ಜಿಯನ್ನು ಇವರಿಗೆ ಸಲ್ಲಿಸುವುದು

ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ
ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಛೇರಿ, ಮೈಸೂರು–570001
ಸಂಪರ್ಕಿಸಿ: 9943356645, 8105832038



www.swr.indianrailways.gov.in SouthWesternRailway-SWR @swrrly @SWRAILWAYHQ @sw_railways